
ರಂಜನೆ ಬೋಧನೆ ಪ್ರಚೋದನೆ

ತ್ರಿ

# ಲಂಕೇಶ್

ಜುಲೈ 9, 2008 ರೂ. 12/-





ಯ್ಯಾರಿ ರವಿಶಂಕರ್‌ಗೆ

# ನೊಬೆಲ್ ಬೇಕಂತೆ!



ಸೋಮಣ್ಣ ಈಗ ರೆಬೆಲ್ ಸ್ಟಾರ್!



ಕೇಬಲ್ ಚಂದ್ರನ ಹತ್ಯೆಯ ಹಿಂದೆ



ಮಗುವಿನ ನಗುವಿಗೂ ಮರುಗದ ಜವರಾಯ

## ದ್ಮಪ್ರಿಯಾ 28 ಕೋಟಿ ರೂ. ಒಡತಿ



## ಕಾರ್ಟೂನ್ ಕಾರ್ನರ್



ಆಧುನಿಕ ಯುಗದಲ್ಲಿ ಕೃಷಿ

## Quote - Unquote

* "ಅಮೆರಿಕಾದ ಮೇಲೆ ಮತ್ತೊಂದು ಭಯೋತ್ಪಾದಕರ ದಾಳಿ ನಡೆದರೆ ಅದರಿಂದ ಚುನಾವಣೆಗಳಲ್ಲಿ ನಮ್ಮ ಪಕ್ಷಕ್ಕೆ ಖಂಡಿತಾ ಲಾಭವಾಗುತ್ತದೆ."

- ಚಾರ್ಲ್ಸ್ ಆರ್. ಬ್ಲಾಕ್. ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿರುವ ಜಾನ್ ಮಕೈನ್‌ರವರ ಚುನಾವಣಾ ಪ್ರಚಾರ ತಂಡದ ಮುಖ್ಯಸ್ಥ



* "ವಿಷ್ಣುವಿನ ಹತ್ತು ಅವತಾರಗಳನ್ನು ಬಿಂಬಿಸುವಂತಿರುವ ಕಮಲ್ ಹಾಸನ್‌ರವರ 'ದಶಾವತಾರಂ' ನೋಡಲು ವೈಷ್ಣವರ ವೈರಿ ಪಾಳೆಯದಿಂದ ರಾವಣನ ಹತ್ತು ತಲೆಗಳನ್ನು ಪಡೆಯಬೇಕು."

-ಸದಾನಂದ ಮೆನನ್, ಸಾಂಸ್ಕೃತಿಕ ವಿಮರ್ಶಕ

* ಈಜಿಪ್ಟಿನ ರಾಜ ಫರೂಕ್ ಒಮ್ಮೆ ಗದ್ದಿಪಾರಾಗಿದ್ದಾಗ 'ಮುಂದೊಂದು ದಿನ ಜಗತ್ತಿನಲ್ಲಿ ರಾಜ, ರಾಣಿ ಎಂಬುವವರು ಉಳಿದಿರುವುದು ಇಸ್ಪೀಟ್ ಎಲೆಗಳಲ್ಲಿ ಮತ್ತು ಇಂಗ್ಲೆಂಡ್ ದೇಶದಲ್ಲಿ ಮಾತ್ರ" ಎಂದು ಹೇಳಿದ್ದ. ಈಗ ತನ್ನ ಸ್ಥಾನವನ್ನು ಕಳೆದುಕೊಂಡಿರುವ ನೇಪಾಳದ ಮಾಜಿ ದೊರೆ ಜ್ಞಾನೇಂದ್ರ ಆದರ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಬದಲಾಗಿ ರಷ್ಯಾದ ಝಾರ್ ನಿಕೋಲಾಸ್ ಮತ್ತಾತನ ವಂಶದವರಿಗೆ ಅಲ್ಲಿನ ಕಮ್ಯುನಿಸ್ಟರು ಮಾಡಿದ್ದನ್ನು ತನಗೆ ನೇಪಾಳದ ಕಮ್ಯುನಿಸ್ಟರು ಮಾಡಲಿಲ್ಲವಲ್ಲಾ ಎಂದು ಸಂತೋಷ ಪಡಬೇಕು."

-'ಔಟ್ ಲುಕ್' ಪತ್ರಿಕೆಯ ಓದುಗ



* 'ಬರಾಕ್ ಒಬಾಮಾ ಹೇಗೆ ಸದ್ಯದಲ್ಲೇ ಅಮೆರಿಕದ ಅಧ್ಯಕ್ಷರಾಗುತ್ತಾರೊ ಹಾಗೆಯೇ ನಾನೂ ಸದ್ಯದಲ್ಲೇ ತಮಿಳುನಾಡಿನ ಮುಖ್ಯಮಂತ್ರಿ ಆಗಲಿದ್ದೇನೆ."

- 'ಕರಿ ಎಂಜಿಆರ್' ಎಂದೇ ಕರೆಯಲ್ಪಡುವ ತಮಿಳು ನಟ ವಿಜಯ್‌ಕಾಂತ್

* "ಬರುವ ಚುನಾವಣೆಗಳಲ್ಲಿ ಅಕಸ್ಮಾತ್ ಯುಪಿಎ ಒಕ್ಕೂಟ ಗೆದ್ದರೂ ತಾನು ಮತ್ತೆ ಪ್ರಧಾನಮಂತ್ರಿ ಆಗುವ ಸಾಧ್ಯತೆಗಳು ಕಡಿಮೆ ಎಂದು ಮನಮೋಹನ್ ಸಿಂಗ್‌ರವರಿಗೆ ಅರ್ಥವಾಗಿದೆ. ಆದ್ದರಿಂದ ಅವರು ಅಮೆರಿಕಾದೊಂದಿಗಿನ ಅಣು ಒಪ್ಪಂದಕ್ಕೆ ಭಾರತ ಸಹಿ ಹಾಕಲೇಬೇಕೆಂದು ಹಠ ಹಿಡಿದಿದ್ದಾರೆ. ಅವರ ಈ ನಿಲುವಿನಿಂದಾಗಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಉರುಳಿಬಿದ್ದರೂ ಪರವಾಗಿಲ್ಲ, ತಮ್ಮ ಪಕ್ಷ ಚುನಾವಣೆಗಳಲ್ಲಿ ಸೋತರೂ ಪರವಾಗಿಲ್ಲ, ಅದೆಲ್ಲ ಸಿಂಗ್‌ಗೆ ಮುಖ್ಯವಾಗಿಲ್ಲ, ಬದಲಾಗಿ ಇಂತಹ ಒಂದು ಐತಿಹಾಸಿಕ ಒಪ್ಪಂದಕ್ಕೆ ತಾನೇ ಕಾರಣನಾದೆ ಎಂದು ಇತಿಹಾಸದ ಪುಟಗಳನ್ನು ಸೇರುವ ಬಯಕೆ ಮನಮೋಹನ್ ಸಿಂಗ್‌ರದ್ದು."

-ಅಜೀಜ್ ಅಶ್ರಫ್, ರಾಜಕೀಯ ವಿಮರ್ಶಕ

* "ಭಾರತದ ಗೂಢಚರ್ಯೆ ಸಂಸ್ಥೆಯಾದ RAW ನ 19 ಅಧಿಕಾರಿಗಳೇ ರಬಿಂದರ್ ಸಿಂಗ್ ಎಂಬ ದೇಶದ್ರೋಹಿ ಭಾರತದಿಂದ ಪಾರಾಗಲು ಸಹಕರಿಸಿದ್ದರು."

-ತನಿಖಾ ವರದಿ

## ಹೀಗೂ ಉಂಟು ದಲಿತೋದ್ಧಾರ!

* "ಜೂನ್ 1ರ ನಡುರಾತ್ರಿ ಮಾಯಾವತಿಯವರ ಪ್ರತಿಮೆಯನ್ನು ಸರ್ಕಾರಿ ಅಧಿಕಾರಿಗಳು ತೆಗೆಸಿ ಹಾಕಿದರು. ಆ ಪ್ರತಿಮೆಯನ್ನು ಆರು ವಾರಗಳ ಹಿಂದೆಯಷ್ಟೇ ಮುಖ್ಯಮಂತ್ರಿ ಮಾಯಾವತಿಯವರೇ ಅನಾವರಣಗೊಳಿಸಿದ್ದರು. ಆದರೆ ಆ ಪ್ರತಿಮೆ ತಾವು ಬಯಸಿದ್ದಕ್ಕಿಂತ ಕುಳ್ಳಗಿದ್ದುದರಿಂದ ಮತ್ತು ಅದರಲ್ಲಿ ತಮ್ಮ ಹ್ಯಾಂಡ್‌ಬ್ಯಾಗ್ ಅನ್ನು ಸೇರಿಸಿರಲಿಲ್ಲವಾದ್ದರಿಂದ ಮಾಯಾವತಿಗೆ ತುಂಬಾ ಕೋಪ ಬಂದಿತ್ತು. ಈಗ 12 ಅಡಿ ಎತ್ತರವಿದ್ದ ಆ ಪ್ರತಿಮೆಯ ಜಾಗದಲ್ಲಿ 15 ಅಡಿ ಎತ್ತರದ ಹೊಸ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಇದೆಲ್ಲಕ್ಕೆ ವೆಚ್ಚವಾದ ಹಣ ಸುಮಾರು ನಲವತ್ತು ಲಕ್ಷ ರೂಪಾಯಿಗಳು ಎಂದು ಅಂದಾಜಿಸಲಾಗಿದೆ."

-ಪತ್ರಿಕಾ ವರದಿ

* ಈಗಾಗಲೇ ಎರಡು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿರುವ ಮಾಯಾವತಿ 1995 ರಿಂದ 2003 ರ ತನಕ ರಾಜ್ಯಾದ್ಯಂತ ಕನಿಷ್ಠ 24 ಪ್ರತಿಮೆಗಳ ಸ್ಥಾಪನೆಗೆ ಆದೇಶ ಹೊರಡಿಸಿದ್ದರು. ಅದೇ ಸಂದರ್ಭದಲ್ಲಿ ನೂರಾರು ಕೋಟಿ ರೂಪಾಯಿಗಳನ್ನು ಅಂಬೇಡ್ಕರ್ ಉದ್ಯಾನ, ಅಂಬೇಡ್ಕರ್ ಕ್ರೀಡಾಂಗಣ, ಅಂಬೇಡ್ಕರ್ ವಿಶ್ವವಿದ್ಯಾಲಯ, ಬುದ್ಧ-ಅಂಬೇಡ್ಕರ್-ಛತ್ರಪತಿ ಸಾಹುಜಿ ಮಹಾರಾಜ್ ತರಹದ ದಲಿತ ನಾಯಕರ ಪ್ರತಿಮೆಗಳ ಸ್ಥಾಪನೆಗೆಂದೇ ಮೀಸಲಿಟ್ಟಿದ್ದರು.

ಆಕೆಯ ನಂತರ ಉತ್ತರ ಪ್ರದೇಶದ ಮುಖ್ಯಮಂತ್ರಿಯಾದ ಬಿಜೆಪಿಯ ಕಲ್ಯಾಣ್‌ಸಿಂಗ್ ಮಾಯಾವತಿಯೊಂದಿಗೆ ಪೈಪೋಟಿಗೆ ಬಿದ್ದರು. 1997 ರಿಂದ 1999 ರ ತನಕ ಕಲ್ಯಾಣ್ ಸಿಂಗ್‌ರವರು ರಾಜ್ಯಾದ್ಯಂತ ಹಿಂದೂತ್ವದ ಹರಿಕಾರರಾದ ಶ್ಯಾಮ್ ಪ್ರಸಾದ್ ಮುಖರ್ಜಿ ಮತ್ತು ದೀನ್ ದಯಾಳ್ ಉಪಾಧ್ಯಾಯರ 80 ಪ್ರತಿಮೆಗಳನ್ನು ಸ್ಥಾಪಿಸಬೇಕೆಂದು ಆದೇಶ ಹೊರಡಿಸಿದರು.

ಇಷ್ಟೊಂದು ಪ್ರತಿಮೆಗಳನ್ನು ಸ್ಥಾಪಿಸುವುದರ ಹಿಂದೆ ಕಲ್ಯಾಣ್ ಸಿಂಗ್‌ರ ಒಂದು ದುರುದ್ದೇಶವೂ ಅಡಗಿತ್ತು. ಅದೇನೆಂದರೆ ಮುಂದೆ ಮಾಯಾವತಿ ಮತ್ತೆ ಮುಖ್ಯಮಂತ್ರಿಯಾದರೆ ಆಗ ಅಂಬೇಡ್ಕರ್‌ರವರ ಪ್ರತಿಮೆಗಳನ್ನು ಸ್ಥಾಪಿಸಲು ಎಲ್ಲೂ ಒಂದೇ ಒಂದು ರಸ್ತೆ ಸಂಧಿ ಇರದಂತೆ ನೋಡಿಕೊಳ್ಳುವುದು.

ಆದರೆ ಸಿಂಗ್‌ರ ಈ ಉದ್ದೇಶ ಫಲಿಸಿಲ್ಲ, ಮಾಯಾವತಿ ಸಿಕ್ಕಸಿಕ್ಕ ಜಾಗಗಳಲ್ಲಿ ಈಗ ಅಂಬೇಡ್ಕರ್ ಮತ್ತು ಕಾನ್ಶೀರಾಂರವರ ಪ್ರತಿಮೆಗಳನ್ನು ಸ್ಥಾಪಿಸುತ್ತಿದ್ದಾರಲ್ಲದೆ ಸ್ವತಃ ತಮ್ಮ ಪ್ರತಿಮೆಗಳನ್ನೂ ಸ್ಥಾಪಿಸುತ್ತಿದ್ದಾರೆ!


-ಪತ್ರಿಕಾ ವರದಿ

* "ನನ್ನ ಹಳ್ಳಿಯಲ್ಲಿರುವ ಅಂಬೇಡ್ಕರ್‌ರವರ ಪ್ರತಿಮೆಯನ್ನು ನಾನು ಪೂಜಿಸುತ್ತೇನೆ. ಆದರೆ ಆ ಪ್ರತಿಮೆಯು ನನ್ನ ಮಕ್ಕಳ ಬಾಯಿಗೆ ಆಹಾರವನ್ನು ಒದಗಿಸುವುಲ್ಲ, ಅಷ್ಟೇ ಅಲ್ಲ ನಮ್ಮ ಹಳ್ಳಿಗೆ ಕುಡಿಯುವ ನೀರು ಮತ್ತು ರಸ್ತೆಗಳನ್ನು ಕೊಡುವುದಾಗಿ ಹೇಳಿದ್ದ ಮಾಯಾವತಿ ಇಲ್ಲಿಯವರೆಗೂ ಅವುಗಳನ್ನು ನೀಡಿಲ್ಲ, ಆಕೆ ಇಂತಹ ಪ್ರತಿಮೆಗಳಿಗೆಂದು ವೆಚ್ಚ ಮಾಡುತ್ತಿರುವ ಕೋಟ್ಯಂತರ ರೂಪಾಯಿಗಳಲ್ಲಿ ಸ್ವಲ್ಪವನ್ನಾದರೂ ನಮ್ಮಂತಹ ಸಾವಿರಾರು ಬಡಜನರಿಗೆ ಅಗತ್ಯವಾಗಿ ಬೇಕಿರುವ ಸೌಲಭ್ಯಗಳನ್ನು ಒದಗಿಸುವುದಕ್ಕೆ ವೆಚ್ಚ ಮಾಡಬಹುದಿತ್ತು."

-ಬಡ ದಲಿತನೊಬ್ಬ, ಪತ್ರಿಕಾ ವರದಿಯೊಂದರಲ್ಲಿ

ಇಂಥ ನಾಯಕರಿಂದ ದಲಿತೋದ್ಧಾರ ಆಗುವುದೆಂದು?!

# ಗಂಡನ ಸಾವೇ ಬಿಡುಗಡೆಯ ಹಾದಿ ಆದಾಗ



ಕಬೀರ್ ಮತ್ತು ನಾನು ಕೋಶಿಸ್‌ನಲ್ಲಿ ಕಾಫಿ ಕುಡಿಯುತ್ತಾ, ಹರಟೆ ಹೊಡೆಯುತ್ತಾ ಕೂತಿದ್ದಾಗ ನಲವತ್ತರ ಪ್ರಾಯದ ಮಹಿಳೆಯೊಬ್ಬರು ಬಂದು ಕಬೀರನಿಗೆ "ಹಾಯ್" ಎಂದರು. ಬಿಳಿ ಕಾಟನ್ ಸೀರೆ ಉಟ್ಟಿದ್ದ, ಉದ್ದನೆ ಪೋನಿಟೈಲ್ ಹೊಂದಿದ್ದ ಸಣ್ಣ ದೇಹದ ಆಕೆಯ ಮುಖದಲ್ಲಿ ಅದೆಂತಹದ್ದೋ ನೆಮ್ಮದಿ ಮತ್ತು ಶಾಂತಿ ಪ್ರಜ್ವಲಿಸುತ್ತಿತ್ತು.

"ಹಾಯ್ ಮೀರಾ, ಹೇಗಿದ್ದೀರಿ?" ಎಂದ ಕಬೀರ್.

``Thank You. ಚೆನ್ನಾಗಿದ್ದೇನೆ" ಎಂದಳು ಆಕೆ.

"ಬೈದವೆ ಇವರು ಶಾರದೆ ಅಂತ, ನನ್ನ ಫ್ರೆಂಡ್" ಎಂದು ನನಗೆ ಅವರನ್ನು ಕಬೀರ್ ಪರಿಚಯಿಸಿದ. ಆಮೇಲೆ "ನನ್ನಿಂದ ಏನಾದರು ಸಹಾಯ ಬೇಕಾದರೆ ಕೇಳಿ ಮೀರಾ. ಒಬ್ಬರೆ ಕಷ್ಟಪಡಬೇಡಿ" ಎಂದು ಕಬೀರ್ ಅವರಿಗೆ ಹೇಳಿದ.

"ಅಗತ್ಯ ಬಿದ್ದರೆ ಕೇಳ್ತೇನೆ ಕಬೀರ್. ಆದರೆ ಸದ್ಯಕ್ಕೆ ಯಾವ ಸಮಸ್ಯೆಯೂ ಇಲ್ಲ, ನಾನು ಯಾರನ್ನೋ ಭೇಟಿ ಆಗಬೇಕಿದೆ, ಬರ್ತಿನಿ" ಎಂದು ಆಕೆ ನಮ್ಮಿಬ್ಬರಿಗೂ ಬೈ ಹೇಳಿ ಇನ್ನೊಂದು ಟೇಬಲ್‌ನಲ್ಲಿ ಕೂತರು.

ನಾನು ಕುತೂಹಲದಿಂದ ಕಬೀರ್‌ನತ್ತ ನನ್ನ ಹುಬ್ಬುಗಳನ್ನೇರಿಸಿದೆ. ಸಿಗರೇಟ್ ಒಂದನ್ನು ಹಚ್ಚಿಸಿಕೊಂಡ ಕಬೀರ್ "ಜೀವನ ಎಷ್ಟು ವಿಚಿತ್ರವಾಗಿರುತ್ತೆ ಗೊತ್ತಾ ಶಾರೂ. ಈ ಮೀರಾ ಎಷ್ಟು ಸ್ವಾಭಿಮಾನದಿಂದ, ನೆಮ್ಮದಿಯಿಂದ ಕಂಡರಲ್ಲವೆ? ಆದರೆ ಆಕೆಯ ಗಂಡ ತೀರಿಕೊಂಡು ಇನ್ನೂ ಇಪ್ಪತ್ತು ದಿನಗಳಾಗಿಲ್ಲ ಎಂದರೆ ನಂಬುತ್ತೀಯಾ?" ಎಂದು ಕೇಳಿದ.

"ಹೌದಾ?" ಎಂದೆ ನಾನು ಅಚ್ಚರಿಯಿಂದ.

"ಇನ್ನೂ ಕುತೂಹಲಕರ ಅಂಶ ಯಾವುದು ಗೊತ್ತಾ? ಆಕೆ ಪಕ್ಕಾ ಸಂಪ್ರದಾಯ ಕುಟುಂಬದಿಂದ ಬಂದಾಕೆ. ಎಂದೂ ಮನೆ ಬಿಟ್ಟು ಹೊರಗೆ ಒಬ್ಬಳೇ ಹೋಗುವುದು, ತನ್ನತನ ಎಂದೆಲ್ಲಾ ಮಾತಾಡುವುದು ಅದ್ಯಾವುದೂ ಆಕೆಯ ಬದುಕಿನಲ್ಲಿ ಇರಲೇ ಇಲ್ಲ, ಅಂತಹ ಮೀರಾ ಇವತ್ತು ಅಚಾನಕ್ ಆಗಿ ಕೋಶಿಸ್‌ನಂತಹ ಹೋಟೆಲ್‌ಗೆ ಬರುತ್ತಾರೆಂದರೆ ನನಗೆ ಅಚ್ಚರಿ ಮತ್ತು ಶಾಕ್" ಎಂದ.



ನಾನು ಕೆಲಕ್ಷಣ ಸುಮ್ಮನೇ ಯೋಚಿಸಿ "ಆಕೆಯ ಗಂಡ ಎಂತಹ ವ್ಯಕ್ತಿ ಆಗಿದ್ದ" ಎಂದು ಕೇಳಿದೆ.

"ಎಂತಹ ವ್ಯಕ್ತಿ ಆಗಿದ್ದ ಅಂತ ಹೇಗೆ ವಿವರಿಸಲಿ? ಅಂಥವನನ್ನು ನೀನು male chauvinist pig ಅಂತ ಯಾವ ಮುಲಾಜೂ ಇಲ್ಲದೆ ಕರೀತಿಯಾ! ಯಾಕೆಂದ್ರೆ, ಆತನ ಹೆಂಡತಿ ಇದ್ದದ್ದೇ ತನ್ನನ್ನು ನೋಡಿಕೊಳ್ಳಲು, ತನ್ನ ಆದೇಶಗಳನ್ನು ಪಾಲಿಸಲು" ಎಂದು ನಂಬಿದ್ದ.

ಯಾರೋ ಮಹಿಳೆಯೊಬ್ಬರೊಂದಿಗೆ ಗಾಢ ಚರ್ಚೆಯಲ್ಲಿ ತೊಡಗಿದ್ದ ಮೀರಾಳತ್ತ ಒಮ್ಮೆ ದೃಷ್ಟಿ ಹರಿಸಿದೆ. ಅಂತಹ ಹಿನ್ನೆಲೆ ಹೊಂದಿದ್ದ ಮೀರಾ; ತನ್ನ ಬದುಕನ್ನೆಲ್ಲ ತಂದೆ ತಾಯಿಯ ಆಶ್ರಯದಲ್ಲಿ, ಆನಂತರ ತನ್ನ ಮೇಲೆ ಅಧಿಕಾರ ಚಲಾಯಿಸುತ್ತಿದ್ದ ಗಂಡನ ಅಧೀನದಲ್ಲಿ ಕಳೆದಿದ್ದ ಮೀರಾ ವಿಧವೆಯಾದ ಇಪ್ಪತ್ತು ದಿನಗಳಲ್ಲೇ ಅಷ್ಟೊಂದು ನೆಮ್ಮದಿಯಿಂದ ಇರಲು ಹೇಗೆ ಸಾಧ್ಯವಾಗಿರಬಹುದು? ಬದುಕಿನ ಮುಂದಿನ ದಿನಗಳ ಬಗ್ಗೆ ಆಕೆಗೆ ಚಿಂತೆಯಾಗಲಿಲ್ಲವೇ? ಇನ್ನು ಮುಂದೆ ತಾನೊಬ್ಬಳೇ ಹೇಗೆ ಜೀವಿಸುತ್ತೇನೆ ಎಂಬ ಆತಂಕ ಕಾಡಲಿಲ್ಲವೇ? ಅದರಲ್ಲೂ ಸಂಪ್ರದಾಯಸ್ಥ ಕುಟುಂಬದವರು ಗಂಡ ಸತ್ತ ಒಂದು ತಿಂಗಳ ಮಟ್ಟಿಗಾದರೂ ಮನೆಯಿಂದ ಹೊರಗೆ ಬರುವುದೇ ಇಲ್ಲ, ಅಂತಹದ್ದರಲ್ಲಿ ಅಚ್ಚುಕಟ್ಟಾಗಿ ಸೀರೆ ಉಟ್ಟು, ತನ್ನ ಜೀವನದಲ್ಲಿ ಏನೇನೋ ಆಗಿಲ್ಲ ಎಂಬಂತೆ ಇರಲು ಆಕೆಗೆ ಆತ್ಮಸ್ಥೈರ್ಯ ಬಂದಿದ್ದಾದರೂ ಎಲ್ಲಿಂದ ಎಂದೆಲ್ಲಾ ಯೋಚಿಸಿದೆ.

ಅವತ್ತು ಮನೆಗೆ ಹಿಂದಿರುಗಿದಾಗ ಅಪ್ಪ ಮತ್ತು ಅಮ್ಮನಿಗೆ ಮೀರಾಳ ಬಗ್ಗೆ ಹೇಳಿ ನನ್ನಲ್ಲಿನ ಕುತೂಹಲವನ್ನು ವ್ಯಕ್ತಪಡಿಸಿದೆ. ಆಗ ಅಪ್ಪ "ಒಮ್ಮೊಮ್ಮೆ ಏನಾಗುತ್ತೆ ಗೊತ್ತಾ ಶಾರೂ? ಹಲವು ಮಹಿಳೆಯರಿಗೆ ಗಂಡನ ಸಾವೇ ಅವರಿಗೆ ಬಿಡುಗಡೆಯಾಗಿರುತ್ತದೆ" ಎಂದರು.

"ಅದೇನ್ರಿ, ನೀವು ಹೇಳ್ತಿರೋದು?" ಅಂದರು ಅಮ್ಮ.

"ನೋಡು, ಈ ಮೀರಾಳ ಗಂಡ ಬದುಕಿದ್ದರೆ ಆಕೆ ಎಂದಿಗೂ ಹೊರಗೆ ಹೋಗುವ ಧೈರ್ಯ ಮಾಡುತ್ತಿರಲಿಲ್ಲ, ತನ್ನತನವನ್ನು ಕಂಡುಕೊಳ್ಳಲು ಯತ್ನಿಸುತ್ತಿರಲಿಲ್ಲ, ತನ್ನ ಬದುಕಿನ ಸವಾಲುಗಳನ್ನು ಎದುರಿಸಲು ಆಕೆಗೆ ಶಕ್ತಿ ಇರುತ್ತಿರಲಿಲ್ಲ. ಅದರಲ್ಲೂ ಸಂಪ್ರದಾಯಸ್ಥ ಕುಟುಂಬಗಳಿಂದ ಬಂದ ಹೆಣ್ಣು ಮಕ್ಕಳಲ್ಲಿ 'ನಮ್ಮ ಜೀವನ ಅಂದರೆ ಇಷ್ಟೇ' ಎಂಬ ಮನೋಭಾವವನ್ನು ಬೆಳೆಸಿರುತ್ತಾರೆ. ಅವರೆಲ್ಲ ತನ್ನ ಗಂಡ, ಮಕ್ಕಳು, ಮನೆ ಇಷ್ಟರಲ್ಲೇ ತಮ್ಮ ಜೀವನ ಸಾಗಿಸುತ್ತಿರುತ್ತಾರೆ. ನನಗೆ ಗೊತ್ತಿದ್ದ ಒಬ್ಬ ತೀರಿಕೊಂಡಾಗ ಆತನ ಹೆಂಡತಿಗೆ ಐವತ್ತು ವರ್ಷ ವಯಸ್ಸಾಗಿತ್ತು, ಬೆಳೆದ ಮೂವರು ಮಕ್ಕಳಿದ್ದರು. ಆಕೆ ಮತ್ತು ಆಕೆಯ ಮಕ್ಕಳು ಇನ್ನು ಮುಂದೆ ಹೇಗೆ ಜೀವಿಸುತ್ತಾರೆ ಎಂದು ನಾವು ಚಿಂತಿಸಿದ್ದೆವು. ಆದರೆ ಗಂಡ ಸತ್ತ ಹದಿಮೂರನೆ ದಿನದ ಆಚರಣೆಗಳೆಲ್ಲಾ ನಡೆದ ನಂತರ ಆಕೆ ಎಷ್ಟು ಬದಲಾಗಿಬಿಟ್ಟರು ಗೊತ್ತಾ? ತನಗೆ ಬೇಕಾದ ಬಣ್ಣಬಣ್ಣದ ಸೀರೆ ಉಟ್ಟು ನವಿಲಿನಂತೆ-ಮುದಿ ನವಿಲು ಎನ್ನಬಹುದು- ಎಲ್ಲೆಡೆ ಉತ್ಸಾಹದಿಂದ ಓಡಾಡಲಾರಂಭಿಸಿದರು. ಗಂಡನ ಫ್ಯಾಕ್ಟರಿಯ ಜವಾಬ್ದಾರಿಯನ್ನು ಹೊತ್ತು ಅದನ್ನು ಯಶಸ್ವಿಯಾಗಿಯೇ ನಿಭಾಯಿಸಿದರು. ಗಂಡ ಸತ್ತ ನಂತರ ತನ್ನ ಜೀವನವೇ ಮುಗಿದುಹೋಯಿತು ಎಂದು ಕೂತಿರುವ ಬದಲು ಗಂಡನ ನಿಧನದ ನಂತರ ತನಗೆ ಬದುಕೆಂಬುದು ಸಿಕ್ಕಿತು ಎಂಬಂತೆ ಇದ್ದರು. ಅವರಲ್ಲಾದ ಈ ಬದಲಾವಣೆಗಳನ್ನು ಕಂಡು ಕೆಲವರು ಟೀಕೆ ಮಾಡಿದರು, ಹುಬ್ಬೇರಿಸಿದರು. ಆದರೆ ನನಗನ್ನಿಸಿದ್ದು ಏನೆಂದರೆ ಆಕೆಯ ಗಂಡನ ಸಾವಿನಿಂದ ಆಕೆಗೆ ಬಿಡುಗಡೆ ಸಿಕ್ಕಂತಾಗಿದೆ ಎಂದು."

ಅಪ್ಪ ತನ್ನ ಮಾತನ್ನು ಮುಗಿಸಿದ ನಂತರ ಅಮ್ಮ ಅವರತ್ತ ಹುಬ್ಬುಗಂಟಿಕ್ಕಿಕೊಂಡು ನೋಡಿದರು.

"ಯಾಕೆ ಹಾಗೆ ನೋಡ್ತಿ? ಆಕೆ ಬೇಕಂತಲೇ ತನ್ನ ಗಂಡನನ್ನು ಕೊಂದಿರಲಿಲ್ಲ. ಆದರೆ ಆತನೊಂದಿಗೆ ತಾನೂ ಸತ್ತೆ ಎಂದು ಭಾವಿಸಲಿಲ್ಲ, ಅಷ್ಟೆ. ಅದರಿಂದ ಆಕೆಗೆ ಒಳ್ಳೆಯದೇ ಆಯಿತು. ಅದರಲ್ಲಿ ತಪ್ಪೇನು?" ಎಂದು ಅಪ್ಪ ಪ್ರಶ್ನಿಸಿದಾಗ ಅಮ್ಮ ಸುಮ್ಮನಾದರು.

ಅಮ್ಮನ ಮುಖ ನೋಡಿ ನಾನು ಜೋರಾಗಿ ನಗಲಾರಂಭಿಸಿದೆ.

■ ಶಾರದೆ

# ಕಾಗೇರಿಯ ಶಿಕ್ಷಣ ಮತ್ತು ದಲಿತೆ ಜಯಲಕ್ಷ್ಮಿಯ ಬಲಿ



## ಕಂಡಹಾಗೆ

■ ಗೌರಿ ಲಂಕೇಶ್

ನಾವೆಲ್ಲ ಮುಂಚಿತವಾಗಿಯೇ ಊಹಿಸಿದ್ದಂತೆ ಬಿಜೆಪಿ ಸರ್ಕಾರ ಇತಿಹಾಸ ಕುರಿತ ಪಠ್ಯಪುಸ್ತಕಗಳನ್ನು ಬದಲಾಯಿಸಲು ಸಜ್ಜಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದಲ್ಲಿ ಬದಲಾಗುವ ಇತಿಹಾಸ ಪಠ್ಯಗಳಲ್ಲಿ ಹೇಡಿ ಸಾವರ್ಕರ್‌ನನ್ನು 'ವೀರ' ಎಂದು, ವೀರ ಟಿಪ್ಪು ಸುಲ್ತಾನನನ್ನು 'ಕನ್ನಡ ದ್ರೋಹಿ' ಎಂದೂ ಚಿತ್ರಿಸಲಾಗುತ್ತದೆ ಎಂದು ಭವಿಷ್ಯ ನುಡಿಯಬಹುದು.



ಹಿಂದುತ್ವದ ದ್ವೇಷವನ್ನೇ ಇತಿಹಾಸ ಎಂದು ಮಕ್ಕಳು ಓದಲಾರಂಭಿಸಿದರೆ ಆಗುವ ಅಪಾಯ ಅಷ್ಟಿಷ್ಟಲ್ಲ. ಇತರೆ ಸಮುದಾಯಗಳ ಬಗೆಗಿನ ಅವರ ಪೂರ್ವಗ್ರಹಗಳನ್ನು ತೊಡೆದು ಹಾಕಲು ಕನಿಷ್ಠ ಎರಡು ತಲೆಮಾರುಗಳು ಪ್ರಯತ್ನಿಸಬೇಕಾಗುತ್ತದೆ.

ಈ ಪಠ್ಯಪುಸ್ತಕದ ಬದಲಾವಣೆಯಷ್ಟೇ ಮತ್ತೊಂದು ಅಪಾಯಕಾರಿ ಅಂಶ ಯಾವುದೆಂದರೆ ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳನ್ನು ಖಾಸಗಿಯವರಿಗೆ ನೀಡಲು ಯಡಿಯೂರಪ್ಪ ಸರ್ಕಾರ ಮುಂದಾಗುತ್ತಿರುವುದು. ಹಲವರಲ್ಲಿ "ಹೇಗಿದ್ದರೂ ಸರ್ಕಾರಿ ಶಾಲೆಗಳಲ್ಲಿನ ಗುಣಮಟ್ಟ ಚೆನ್ನಾಗಿಲ್ಲ. ಆದ್ದರಿಂದ ಅದನ್ನು ಖಾಸಗಿಯವರಿಗೆ ನೀಡಿದರೆ ಅವರಾದರೂ ಅವುಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೆ" ಎಂಬ ಅಭಿಪ್ರಾಯವಿದೆ. ಆದರೆ ಸರಕಾರಿ ಶಾಲೆಗಳನ್ನು ಉತ್ತಮಪಡಿಸಬೇಕಿದ್ದರೆ ಅವುಗಳ ಖಾಸಗೀಕರಣ ಅದಕ್ಕೆ ಉತ್ತರವಲ್ಲ. ಬದಲಾಗಿ ಸರ್ಕಾರಿ ಶಾಲೆಗಳಿಗೆ ಹೆಚ್ಚು ಧನಸಹಾಯ ಮಾಡಿ, ಅಲ್ಲಿನ ಅಧ್ಯಾಪಕರಿಗೂ ಉತ್ತಮ ಸಂಬಳ ನೀಡಿ, ಶಾಲಾ ಮಕ್ಕಳಿಗೆ ಈಗಿರುವುದಕ್ಕಿಂತ ಹೆಚ್ಚು ಸೌಲಭ್ಯಗಳನ್ನು ನೀಡಿದರೆ ಅವುಗಳಲ್ಲಿನ ಗುಣಮಟ್ಟವೂ ಹೆಚ್ಚಾಗುತ್ತದೆ. ಆದರೆ ಅದನ್ನೆಲ್ಲ ಮಾಡದೆ, ಸರ್ಕಾರದಿಂದ ಇದೆಲ್ಲ ಸಾಧ್ಯವಿಲ್ಲ ಎಂದು ಕೈಚೆಲ್ಲಿ ಅವುಗಳನ್ನು ಖಾಸಗಿಯವರಿಗೆ ನೀಡಿದರೆ ಅವು ನಮ್ಮ ಬಡಮಕ್ಕಳಿಗೆ ಉತ್ತಮ ವಿದ್ಯೆಯನ್ನು ನೀಡುವ ಕೇಂದ್ರಗಳಾಗದೇ ಅವರ ಕೈಗಳಿಗೆ ಎಟುಕದ ಶಾಲೆಗಳಾಗುವ ಹೆಚ್ಚು ಅಪಾಯವಿದೆ.

ಖಾಸಗಿಯವರು ಏನೇ ಮಾಡಿದರೂ ಅದರ ಹಿಂದೆ ಲಾಭದ ಅಂಶ ಇದ್ದೇ ಇರುತ್ತದೆ. ಅವರೇನು ಸಮಾಜ ಸೇವೆಗೆಂದು ಸುಮ್ಮನೆ ತಮ್ಮ ಹಣ ಮತ್ತು ಶ್ರಮ ಸುರಿಯುವವರಲ್ಲ, ತಮ್ಮ ಕಂಪನಿಯ ಬ್ರಾಂಡ್ ಹೆಸರನ್ನು ಕಳಪೆ ಸಂಸ್ಥೆಗಳೊಂದಿಗೆ ಪಣ ಇಡುವವರಲ್ಲ. ಆದ್ದರಿಂದ ಅಂತಹ ಶಾಲೆಗಳ ಗುಣಮಟ್ಟವನ್ನು ಏರಿಸಲು ಅವರು ಹೆಚ್ಚು ಶುಲ್ಕವನ್ನು ವಿಧಿಸುತ್ತಾರೆ; ಬಡವರ ಮಕ್ಕಳಿಗೆ ವಿದ್ಯೆಯ ಸೌಲಭ್ಯ ಸಿಗದಂತೆ ಮಾಡುತ್ತಾರೆ.

ಈಗಾಗಲೇ ಕಾಗೇರಿ ತಯಾರಿಸಿರುವ ಪ್ಲಾನ್‌ನಲ್ಲಿ ಸರ್ಕಾರಿ ಶಾಲೆಗಳನ್ನು ಅಜೀಂ ಪ್ರೇಮ್‌ಜಿಯವರ ವಿಪ್ರೋ ಸಂಸ್ಥೆಗೆ ನೀಡುವ ಪ್ರಸ್ತಾಪವೂ ಇದೆಯಂತೆ. ಅಂದಹಾಗೆ ರಾಜ್ಯದಲ್ಲಿನ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನೇ ಬುಡಮೇಲು ಮಾಡುವ ಇಂತಹ ಒಂದು ಪ್ರಸ್ತಾಪವನ್ನು ಮೊದಲು ಸೂಚಿಸಿದ ಸಮಿತಿಯಲ್ಲಿ ಹನ್ನೆರಡು ಸದಸ್ಯರಿದ್ದರು. ಆ ಹನ್ನೆರಡು ಮಂದಿಯಲ್ಲಿ ಏಳು ಸದಸ್ಯರು ವಿಪ್ರೋದೊಂದಿಗೆ ಒಂದಲ್ಲಾ ಒಂದು ರೀತಿಯ ನಂಟು ಹೊಂದಿದ್ದವರೇ ಆಗಿದ್ದರು! ಅಂತಹ ಸಮಿತಿಯೊಂದು ರಾಜ್ಯದ ಶಾಲೆಗಳನ್ನು ವಿಪ್ರೋಗೆ ವಹಿಸಬೇಕೆಂದು ಸೂಚಿಸುತ್ತದೆ, ಹಿಂದೂತ್ವವಾದಿ ಕಾಗೇರಿ ಆ ಸೂಚನೆಗೆ ಗೋವಿನಂತೆ ತಲೆದೂಗುತ್ತಾರೆ.

ಅಷ್ಟೇ ಅಲ್ಲ, ಶಿಕ್ಷಣ ಕ್ಷೇತ್ರದಲ್ಲಿ ಈ ಕಾಗೇರಿ ತರಲು ಹೊರಟಿರುವ 'ಅಭಿವೃದ್ಧಿ' ಕಾರ್ಯಗಳಲ್ಲಿ ಅಕ್ಷರ ದಾಸೋಹವನ್ನೂ ತನ್ನ ಬಜೆಪಿ ನಾಯಕ ಅನಂತಕುಮಾರನ ಹೆಂಡತಿ ತೇಜಸ್ವಿನಿ ನಡೆಸುವ ಅದಮ್ಯ ಚೇತನ ಮತ್ತು ಅಂತಹದ್ದೇ ಸಂಸ್ಥೆಗಳಿಗೆ ವಹಿಸುವ ಯೋಜನೆಯೂ ಸೇರಿದೆ.

ಕಳೆದ ವಾರ ತಮ್ಮ ಅಂಕಣದಲ್ಲಿ ನಮ್ಮ ಎಚ್.ಎಲ್. ಕೇಶವಮೂರ್ತಿಯವರು ಬರೆದಂತೆ ಎಳೆಯ ಮಗುವುಗಳ ಎದೆಯಲ್ಲಿ ಜಾತಿವಿನಾಶದ ಬೀಜವನ್ನು ಬಿತ್ತುವ ಅಪೂರ್ವ ಕಾರ್ಯಕ್ರಮ ಅಕ್ಷರ ದಾಸೋಹ. ಮಕ್ಕಳಿಗೆ ಅಡುಗೆ ಮಾಡುವವರಲ್ಲಿ ದಲಿತರೊಬ್ಬರು ಇರುವುದರಿಂದ, ಮಕ್ಕಳೆಲ್ಲರೂ ತಮ್ಮ ಜಾತಿ ಮರೆತು ಒಟ್ಟಿಗೆ ಕೂತು ಊಟ ಮಾಡುವುದರಿಂದ ಅವರಲ್ಲಿ ಸಮಾನತೆಯ ಭಾವನೆ ಹೆಚ್ಚಾಗುತ್ತದೆ.

ಆದರೆ ಇತ್ತೀಚೆಗೆ ಇಂತಹ ಒಂದು ಅದ್ಭುತ ಸರ್ಕಾರಿ ಯೋಜನೆಯೂ ಖಾಸಗಿಯವರ ಪಾಲಾಗುತ್ತಿದೆ. ಪ್ರತಿ ವಿದ್ಯಾರ್ಥಿಗೆಂದು ಸರ್ಕಾರಿ ಶಾಲೆಗಳಿಗೆ ಕೊಡುವುದಕ್ಕಿಂತ ಹೆಚ್ಚು ಹಣವನ್ನು ಪಡೆಯುತ್ತಿರುವ ಕೆಲ ಖಾಸಗಿ ಸಂಸ್ಥೆಗಳು ಈ ಅಕ್ಷರ ದಾಸೋಹ ಎಂಬ ಕಾರ್ಯಕ್ರಮವನ್ನೇ ಲಾಭದ ದಂಧೆಯಾಗಿಯೂ, ಪ್ರಚಾರ ಗಿಟ್ಟಿಸುವ ಗಿಮಿಕ್ಕಾಗಿಯೂ, ತಮ್ಮ ಪಾಪಪ್ರಜ್ಞೆಯನ್ನು ಕಳೆದುಕೊಳ್ಳುವ ತಂತ್ರವಾಗಿಯೂ ಬಳಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಇಸ್ಕಾನ್‌ನಂತಹ ಹುಚ್ಚರ ಸಂಘಟನೆ ಈ ಕಾರ್ಯಕ್ರಮಕ್ಕೆಂದು ವಿದೇಶಗಳಿಂದ ಎತ್ತುತ್ತಿರುವ ಹಣಕ್ಕೆ ಲೆಕ್ಕ ಇಟ್ಟವರಿಲ್ಲ.

ಅದೆಲ್ಲಕ್ಕಿಂತ ಮಿಗಿಲಾಗಿ, ಹಿಂದೊಮ್ಮೆ ಈ ಕಾರ್ಯಕ್ರಮದಿಂದ ಬಡಮಕ್ಕಳಿಗೆ ಪೌಷ್ಟಿಕ ಆಹಾರ ಸಿಗಲೆಂದು ಕೋಳಿಮೊಟ್ಟೆ ನೀಡಲು ಸರ್ಕಾರ ಮುಂದಾದಾಗ ಅದನ್ನು ಮೊದಲು ಪ್ರತಿಭಟಿಸಿದವರು ಇದೇ 'ರಾಮಕೃಷ್ಣ' ಎಂದು ಜಪ ಮಾಡುವ ಇಸ್ಕಾನ್ ಮತ್ತು ಬ್ರಾಹ್ಮಣಶಾಹಿ ಸಿದ್ಧಾಂತವನ್ನು ಪ್ರತಿಪಾದಿಸುವ ಅದಮ್ಯ ಚೇತನ.

ಇಂತಹ ಜನರ ಕೈಗಳಿಗೆ ಅಕ್ಷರ ದಾಸೋಹದಂತಹ ಕಾರ್ಯಕ್ರಮ ಸಂಪೂರ್ಣವಾಗಿ ಹೋದರೆ ಅವರು ಹೇಳಿದ್ದೇ ಕಾನೂನು, ಅವರು ಬಿತ್ತುವ ಭೇದಭಾವಗಳೇ ವಿದ್ಯೆ ಎಂಬಂತಾಗುತ್ತದೆ.

ಅಕ್ಷರ ದಾಸೋಹ ಕೇವಲ ಒಂದು ಹೊತ್ತಿನ ಊಟಕ್ಕೆ ಸೀಮಿತವಾಗಿದ್ದಲ್ಲ, ಬದಲಾಗಿ ಮಕ್ಕಳಲ್ಲಿ ಜಾತ್ಯತೀತ ಮನೋಭಾವವನ್ನು ಬೆಳೆಸುವ ಒಂದು ಯೋಜನೆ. ಆದರೆ ಜಾತಿ ಮತ್ತು ಧರ್ಮವನ್ನೇ ತಮ್ಮ ಅಂತರಾಳದಲ್ಲಿ ಅಡಗಿಸಿಕೊಂಡಿರುವ ಜನರಿಗೇ ಅದನ್ನು ನೀಡಿದರೆ ಏನಾಗುತ್ತದೆ?

ವಿಪರ್ಯಾಸದ ಸಂಗತಿ ಯಾವುದೆಂದರೆ ಶಿಕ್ಷಣ ಇಲಾಖೆಯನ್ನು ಹೀಗೆ ಬಿಡಿಬಿಡಿಯಾಗಿ ಖಾಸಗೀಕರಿಸಲು ಕಾಗೇರಿ ಸಿದ್ಧತೆ ನಡೆಸುತ್ತಿರುವಾಗಲೇ ಒಂದು ಸುದ್ದಿ ಬಂದಿದೆ. ಅದೇನೆಂದರೆ ಕಳೆದ ವರ್ಷ ತೊಂಬಟ್ಟು ಎಂಬ ಗ್ರಾಮದಲ್ಲಿ ಅಕ್ಷರ ದಾಸೋಹದ ಯೋಜನೆಯಡಿ ಸರ್ಕಾರಿ ಶಾಲೆಯಲ್ಲಿ ಅಡುಗೆ ಮಾಡುತ್ತಿದ್ದ ದಲಿತ ಮಹಿಳೆ ಜಯಲಕ್ಷ್ಮಿ ಎಂಬುವವರನ್ನು ಹೇಗಾದರೂ ಕೆಲಸದಿಂದ ತೆಗೆದು ಹಾಕಬೇಕೆಂದು ಅಲ್ಲಿನ ಮೇಲು ಜಾತಿಯ ಜನ ಷಡ್ಯಂತ್ರ ರೂಪಿಸಿದ್ದರು. ಯಾವುದೇ ಪುರಾವೆ ಇಲ್ಲದೆ "ಆಕೆಗೆ ಏಡ್ಸ್ ರೋಗ ಇದೆ. ಅವಳು ಮಾಡಿದ ಅಡುಗೆ ತಿಂದರೆ ನಮ್ಮ ಮಕ್ಕಳಿಗೆ ಅಪಾಯ ಇದೆ" ಎಂದು ಹುಯಿಲೆಬ್ಬಿಸಿದ್ದರು. ಆಕೆಯ ಮೇಲೆ ಮಾಡಿದ್ದ ಆರೋಪ ಸತ್ಯವಲ್ಲ ಎಂದು ಗೊತ್ತಾದರೂ ಆಕೆಯ ವಿರುದ್ಧ ಸಾಮಾಜಿಕ ಬಹಿಷ್ಕಾರ ಹಾಕಿದ್ದರು. ಕಳೆದ ವಾರ ಜಯಲಕ್ಷ್ಮಿಯನ್ನು ಸರ್ಕಾರ ಮರುನೇಮಕ ಮಾಡಲು ನಿರಾಕರಿಸಿದೆ. ಮೇಲುಜಾತಿಯವರ ಪರ ವಹಿಸಿ ಆಕೆಗೆ ಸರ್ಕಾರ ಅನ್ಯಾಯ ಮಾಡಿದೆ.

ಶಿಕ್ಷಣ ಸಚಿವ ಕಾಗೇರಿಯವರ ಆಡಳಿತದಲ್ಲಿ ದಲಿತ ಮತ್ತು ಬಡಮಹಿಳೆ ಜಯಲಕ್ಷ್ಮಿ ಪ್ರಥಮ ಬಲಿ ಅಷ್ಟೇ. ಆಕೆಗೆ ಆದದ್ದು ನಾಳೆ ನಮ್ಮ ಬಡ ಮತ್ತು ದಲಿತರ ಒಂದು ತಲೆಮಾರಿನ ಮಕ್ಕಳಿಗೆ ಆಗುತ್ತದೆ.... ■

---

## ವಿಧಾನ ಪರಿಷತ್ ನಾಮಕರಣ

# ಶೃತಿಗೆ ಕಣ್ಣೀರೇ ಗತಿ!

ವಿಧಾನ ಪರಿಷತ್‌ನಲ್ಲಿ ಖಾಲಿ ಇದ್ದ ಐದು ಸ್ಥಾನಗಳಿಗೆ ಯಡ್ಡಿ ಐವರನ್ನು ನಾಮಕರಣ ಮಾಡಿದ್ದಾರೆ. ವಿವಿಧ ಕ್ಷೇತ್ರಗಳಿಂದ ನಾಮಕರಣ ಮಾಡಬೇಕಾಗಿದ್ದ ಈ ಸ್ಥಾನಗಳಿಗೆ ಭಾರಿ ಪೈಪೋಟಿ ಏರ್ಪಟ್ಟಿತ್ತು. ಬಿಜೆಪಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನೆರವಾದವರೆಲ್ಲ ಯಡ್ಡಿಯನ್ನು ಆಸೆಗಣ್ಣಿನಿಂದ ನೋಡುತ್ತಿದ್ದರು. ಈ ವಿಷಯದಲ್ಲಿಯೂ ಹಲವರ ಮೂಗಿಗೆ ತುಪ್ಪ ಸವರಿದ ಯಡ್ಡಿ ಕೊನೆಗೆ ತಾವಂದುಕೊಂಡವರಿಗೇ ಮಣೆ ಹಾಕಿದ್ದಾರೆ.

ರಾಜ್ಯಸಭೆಗೆ ಆಯ್ಕೆಯಾಗಬೇಕಾಗಿದ್ದ ಪೀಇಎಸ್ ಸಂಸ್ಥೆಯ ಸಂಸ್ಥಾಪಕ ಪ್ರೊ. ಎಂ.ಆರ್. ದೊರೆಸ್ವಾಮಿ ನಾಯ್ಡು ಅವರನ್ನು ವಿಧಾನ ಪರಿಷತ್‌ಗೆ ಕಳುಹಿಸಲಾಗಿದೆ. ಈ ನಾಯ್ಡುವನ್ನು ಯಡ್ಡಿ ಗ್ಯಾಂಗಿಗೆ ಪರಿಚಯಿಸಿದವರು ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು. ಈಗಾಗಲೇ ಪೀಇಎಸ್ ಸಂಸ್ಥೆ ಶಿವಮೊಗ್ಗದಲ್ಲಿ ತೆರೆದಿರುವ ಎಂಜಿನಿಯರಿಂಗ್ ಕಾಲೇಜಿಗೆ ಯಡ್ಡಿಯನ್ನು ಪಾರ್ಟ್‌ನರ್ ಮಾಡಲಾಗಿದೆ. ಇದರ ಋಣ ತೀರಿಸಲು ಅವರನ್ನು ರಾಜ್ಯಸಭೆಗೆ ಕಳುಹಿಸಬೇಕೆಂದು ಕಟ್ಟಾ ಪಟ್ಟು ಹಿಡಿದಿದ್ದರು. ಆಗ ಅವರ ಮಾತಿಗೆ ಕ್ಯಾರೆ ಅನ್ನದ ಯಡ್ಡಿ ಈಗ ವಿಧಾನ ಪರಿಷತ್‌ಗೆ ಈ ನಾಯ್ಡುವನ್ನು ಕಳಿಸಿದ್ದಾರೆ.




ಬಿಜೆಪಿಯೊಂದಿಗೆ ಗುರುತಿಸಿಕೊಂಡಿದ್ದ ಲಿಂಗಾಯತ ಸಮುದಾಯದ ಪ್ರಮುಖ ನಾಯಕರಲ್ಲಿ ಸ್ಥಾನ ಸಿಗದೆ ಉಳಿದುಕೊಂಡಿದ್ದವರೆಂದರೆ ಬಿಆರ್‌ಎಸ್‌ನ ವಿಜಯ ಸಂಕೇಶ್ವರ. ಅವರನ್ನು ವಿಧಾನಸಭೆಗೆ ಕಳಿಸಿದ ಯಡ್ಡಿ ತಮ್ಮ 'ಶತ್ರು' ಶೆಟ್ಟರ್‌ಗೆ ಮತ್ತೊಂದು 'ಶಹರಾಕ' ನೀಡಿದ್ದಾರೆ.

ಇನ್ನು ಸಚಿವರಾಗಿ ನೇಮಕಗೊಂಡಿರುವ ಅಬ್ಕಾರಿ ಮುಮ್ತಾಜ್ ಅಲಿಖಾನ್‌ರನ್ನು ಮೇಲ್ಮನೆಗೆ ಕಳುಹಿಸುವುದು ಅನಿವಾರ್ಯವಾಗಿತ್ತು. ಕನ್ನಡ ಸಾಹಿತ್ಯ ಕ್ಷೇತ್ರದಿಂದ ಎಂದು ಸಂಸ್ಕೃತ ಪಂಡಿತರಾಗಿರುವ ಎಸ್.ಆರ್. ಲೀಲಾ ಎಂಬ ಪ್ರಾಧ್ಯಾಪಕಿಯನ್ನು ನೇಮಿಸಿ, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅವಮಾನ ಮಾಡಲಾಗಿದೆ.

ಕುತೂಹಲದ ವಿಷಯವೆಂದರೆ, ಸಿನಿಮಾ ಕ್ಷೇತ್ರದಿಂದ 'ಎಲ್ಲಿದೆಯೂ ಸಲ್ಲುವ' ಕವಿ ದೊಡ್ಡರಂಗೇಗೌಡ ಅವರನ್ನು ವಿಧಾನಪರಿಷತ್‌ಗೆ ನಾಮಕರಣಮಾಡಿರುವುದು.

ಜಾತಿ ಆಧಾರದ ಮೇಲೆ ಒಂದು ಸ್ಥಾನವನ್ನು ಒಕ್ಕಲಿಗರಿಗೆ ನೀಡಲು ನಿರ್ಧರಿಸಿದ ಯಡ್ಡಿ ಹೆಸರು ಸೂಚಿಸುವಂತೆ ಕೇಳಿಕೊಂಡಿದ್ದು ಒಕ್ಕಲಿಗರ ನಾಯಕರನ್ನಲ್ಲ, ಚುಂಚನಗಿರಿ ಸ್ವಾಮೀಜಿಯನ್ನು. ಸ್ವಾಮೀಜಿಯ ಕಣ್ಣಿಗೆ ಬಿದ್ದವರೆಂದರೆ ತಮ್ಮ ಮಠದ ಆವರಣದಲ್ಲಿಯೇ ಕವನ-ಲೇಖನ ಬರೆದುಕೊಂಡು, 'ಮುಂದೆ ಬಂದರೆ ಹಾಯುವುದಿಲ್ಲ, ಹಿಂದೆ ಬಂದರೆ ಒದೆಯುವುದಿಲ್ಲ' ಎಂಬಂತಿದ್ದ ದೊಡ್ಡರಂಗೇಗೌಡರು. ಅವರು ಕೆಲ ಸಿನಿಮಾ ಹಾಡುಗಳನ್ನು ಬರೆದಿದ್ದಾರೆ ಎಂಬುದು ನಿಜವಾದರೂ ಈ ಕ್ಷೇತ್ರದಿಂದ ಆಯ್ಕೆಗೆ ಈಗಲೂ ಬಿಜೆಪಿಯಲ್ಲಿ ಮತ್ತು ಸಿನಿಮಾ ಕ್ಷೇತ್ರದಲ್ಲಿ ಕ್ರಿಯಾಶೀಲವಾಗಿ ದುಡಿಯುತ್ತಿದ್ದ ಹಲವರಿದ್ದರು. ಅವರನ್ನೆಲ್ಲಾ ಬಿಟ್ಟು ಚುಂಚನಗಿರಿ ಸ್ವಾಮೀಜಿ ಹೇಳಿದರೆಂಬ ಒಂದೇ ಕಾರಣಕ್ಕೆ ಯಡ್ಡಿ ಈ ಗೌಡರನ್ನು ಮೇಲ್ಮನೆಗೆ ಕಳುಹಿಸಿದ್ದಾರೆ. ವಿಧಾನ ಪರಿಷತ್ ಸದಸ್ಯರಾಗದಿದ್ದಲ್ಲಿ ದೊಡ್ಡರಂಗೇಗೌಡರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗುವ ಅಪಾಯವಿತ್ತು! ಈಗ ಈ ಸ್ಥಾನಕ್ಕೆ ಬಿಜೆಪಿ ಪ್ರಚಾರಕ್ಕೆ ಹಾಡುಗಳನ್ನು ಹೊಸೆದುಕೊಟ್ಟ ಬಿ.ಆರ್. ಲಕ್ಷ್ಮಣ್‌ರಾವ್, ಕ್ಯಾಸೆಟ್ ಕವಿ ಲಕ್ಷ್ಮೀನಾರಾಯಣ ಭಟ್ಟ ಮತ್ತಿತರರ ಹೆಸರು ಕೇಳಿಬರುತ್ತಿದೆ.



### ಶೃತಿಗೆ ಮತ್ತೆ ಕಣ್ಣೀರೇ ಗತಿ!

ಅಳುಮುಂಜಿ ಸಿನಿಮಾಗಳಿಂದಲೇ ಹೆಸರು ಮಾಡಿದ್ದ ನಟಿ ಶೃತಿ ರಾಜಕೀಯ ರಂಗದಲ್ಲಿಯೂ ಕಣ್ಣೀರು ಹಾಕಿಕೊಂಡು ಓಡಾಡುವಂತಾಗಿದೆ.

ಹತ್ತಾರು ಸಿನಿಮಾಗಳಲ್ಲಿ ನಟಿಸಿ, ಒಂದಿಷ್ಟು ಕಾಸು ಮಾಡಿಕೊಂಡಿದ್ದ ಈ ನಟಿ ಮಹೇಂದರ್ ಎಂಬ ನಿರ್ದೇಶಕನನ್ನು ಮದುವೆಯಾಗಿ ಆರಾಮವಾಗಿದ್ದರು. ಆದು ಹೇಗೆ ಈ ಜೋಡಿಯ ಮೇಲೆ ಚೆಡ್ಡಿಗಳ ಕಣ್ಣು ಬಿತ್ತೋ ಗೊತ್ತಿಲ್ಲ. ನಿಜಜೀವನದಲ್ಲಿಯೂ ಶೃತಿಗೆ ಕಣ್ಣೀರೇ ಗತಿಯಾಗಿದೆ.

ಗಂಡ ಮಹೇಂದರ್ ಕೊಳ್ಳೇಗಾಲದಿಂದ ಚುನಾವಣೆಗೆ ನಿಂತಾಗ ಶೃತಿ ಹಗಲಿರುಳು ಎನ್ನದೆ 'ಕಮಲ'ಕ್ಕೆ ಮತಹಾಕಿ ಎಂದು ಕ್ಷೇತ್ರದಾದ್ಯಂತ ಓಡಾಡಿದ್ದರು. ಜನ 'ನಿಂಗಾದರೆ ಓಟು ಕೊಡ್ತೇವೆ, ಗಂಡನಿಗೆ ಅಂತ ಕೇಳಬೇಡಮ್ಮ' ಎಂದು ನಯವಾಗಿಯೇ ಉತ್ತರ ಕೊಟ್ಟಿದ್ದರು. ಪರಿಣಾಮ ಮಹೇಂದರ್ ಸೋತು ಮನೆ ಸೇರಿದರು. ಏನಿಲ್ಲವೆಂದರೂ 40ರಿಂದ 50 ಲಕ್ಷ ರೂ. ಚುನಾವಣೆಗೆ ಖರ್ಚಾಗಿದೆ. ಯಾರು ಕೊಡುತ್ತಾರೆ ಈ ದುಡ್ಡು?

ಸಿನಿಮಾ ಕ್ಷೇತ್ರದಿಂದ ಗಂಡನನ್ನು ಅಥವಾ ತನ್ನನ್ನು ವಿಧಾನ ಪರಿಷತ್‌ಗೆ ಕಳುಹಿಸಿದರೆ ಹಣ ಕಳೆದುಕೊಂಡಿದ್ದನ್ನಾದರೂ ಗಳಿಸಬಹುದೆಂಬ ಯೋಚನೆಯಲ್ಲಿ ಈ ಹೆಣ್ಣುಮಗಳಿದ್ದಳು. ಪಕ್ಷದ ಆಪ್ತರಲ್ಲಿ ಇದನ್ನು ಹೇಳಿಕೊಂಡಿದ್ದಳು ಕೂಡ. ಪಾಪ ಈಗ ಆಕೆಗೆ ಕಣ್ಣೀರೇ ಗತಿಯಾಗಿದೆ.

ಶೃತಿ ಗಂಡನ ಕ್ಷೇತ್ರದಲ್ಲಿ ಮಾತ್ರವಲ್ಲ, ರಾಜ್ಯದಾದ್ಯಂತ ಬಿಜೆಪಿಯ ಬಾವುಟ ಹಿಡಿದು ಓಡಾಡಿದ್ದರು. ಅದೆಲ್ಲ ಯಡ್ಡಿ ಗ್ಯಾಂಗ್ ಮರತೇಹೋಗಿದೆ!

### ಚತುರತೆ ಮೆರೆದ ಯಡ್ಡಿ!

ರಾಜಕೀಯದಲ್ಲಿ ತಾನು ಅನುಭವಸ್ಥ ಎಂಬುದನ್ನು ಯಡ್ಡಿ ಮತ್ತೆ ಸಾಬೀತುಪಡಿಸಿದ್ದಾರೆ. ವಿಧಾನಪರಿಷತ್‌ಗೆ ನಾಮಕರಣ ಮಾಡುವಾಗ ಮೂವರು ಪ್ರಮುಖ ಪತ್ರಕರ್ತರ ಹೆಸರು ಕೇಳಿ ಬಂದಿತ್ತು. ಅನಂತು ಬಣ ಬಿಜೆಪಿಯ ಮುಖವಾಣಿಯಂತಿರುವ 'ವಿ.ಕ' ಸಂಪಾದಕ ವಿಶ್ವೇಶ್ವರ ಭಟ್ಟರ ಹೆಸರು ಮುಂದಿಟ್ಟಿತ್ತು. ಬಳ್ಳಾರಿಗೆ ಬಂದು ಪಕ್ಷದ ಪರ ಪ್ರಚಾರ ಮಾಡಿದ 'ಹಾಯ್'ನ ರವಿ ಬೆಳಗೆರೆಗೆ ಈ 'ಗೌರವ' ನೀಡಬೇಕೆಂದು ರೆಡ್ಡಿ ಗ್ಯಾಂಗ್ ಒತ್ತಾಯಿಸಿತ್ತು. ಇನ್ನು 'ಪ್ರಜಾವಾಣಿ' ಸಂಪಾದಕರಾಗಿದ್ದುಕೊಂಡು ಯಡ್ಡಿ ಉಪ ಮುಖ್ಯಮಂತ್ರಿಯಾಗಿದ್ದಾಗಿನಿಂದಲೂ ಸಲಹೆಗಾರರಾಗಿ ಕೆಲಸ ಮಾಡಿಕೊಂಡು ಬಂದಿದ್ದ ಆರ್.ಪಿ. ಜಗದೀಶ್ ಕೂಡ ಜೊಲ್ಲು ಸುರಿಸುತ್ತಿದ್ದರು.

ಈ ಮೂವರು ಪತ್ರಕರ್ತರಲ್ಲಿ ಒಬ್ಬರನ್ನು ನೇಮಿಸಿದ್ದರೂ ಮತ್ತಿಬ್ಬರಿಗೆ ಸಿಟ್ಟು ಬರುವುದು ಖಂಡಿತ ಎಂದು ಅರಿತ ಯಡ್ಡಿ ಈ ಸಾಹಸಕ್ಕೆ ಕೈ ಹಾಕಲೇ ಇಲ್ಲ. ಉಪಾಯದಿಂದ 'ವಿರೋಧಿ'ಗಳು ಸೃಷ್ಟಿಯಾಗದಂತೆ ನೋಡಿಕೊಂಡರು. ಈಗ ತಮ್ಮ 'ಸೇವೆ' ಮಾಡಿಕೊಂಡಿದ್ದ ಆರ್.ಪಿ. ಜಗದೀಶ್‌ರನ್ನು ಮಾಧ್ಯಮ ಸಲಹೆಗಾರರನ್ನಾಗಿ ನೇಮಿಸಿಕೊಂಡು ಅವರಿಗೆ ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಿದ್ದಾರೆ.

ಹೇಗಿದೆ ಯಡ್ಡಿಯ ಜಾಣತನ?

■ ವರದಿಗಾರ

# ವಿಜಯನಗರದ ಡರ್ಟಿ ಪಾಲಿಟಿಕ್ಸ್

## ಕೇಬಲ್ ಚಂದ್ರುನ ಹತ್ಯೆಯ ಹಿಂದೆ?

ಮುಂಬರುವ ಪಾಲಿಕೆ ಚುನಾವಣೆಗಿದು ಪೂರ್ವಾ ಹುತಿಯೆ? ಅಥವಾ ಅನೈತಿಕ ಸಂಬಂಧವೊಂದರ ತಾರ್ಕಿಕ ಅಂತ್ಯವೆ?

ಬಾಪೂಜಿನಗರದ ಕಾಂಗ್ರೆಸ್ ನಾಯಕ, ಲೇಔಟ್ ಕೃಷ್ಣಪ್ಪನವರ ನಂಬಿಕಸ್ಥ ಬಂಟ ಕೇಬಲ್ ಚಂದ್ರು ಕೊಲೆಯಾಗಿದ್ದಾನೆ. ಕೊಂದವರ್‍ಯಾರು? ಕಾರಣವೇನು? ಈತನ ಪೊಲೀಸರಿಗಾಗಲಿ ಸ್ವತಃ ಆತನ ಅಣ್ಣ ತಮ್ಮಂದಿರಿಗಾಗಲಿ ಗೊತ್ತಾಗುತ್ತಿಲ್ಲ.



ಚಂದ್ರಶೇಖರ್ ಆಲಿಯಾಸ್ ಕೇಬಲ್ ಚಂದ್ರು ರೌಡಿಯಲ್ಲ, ಲೋಕಲ್ ಪುಡಾರಿ. ಜೂನ್ 27ರ ರಾತ್ರಿ ಅಣ್ಣ ವೆಂಕಟೇಶನ ಮಗನ ಹುಟ್ಟುಹಬ್ಬದ ಪಾರ್ಟಿ ಮುಗಿಸಿ ಮಾತಾಡುತ್ತಾ ಕುಳಿತಿದ್ದವನನ್ನು ಆತನ ಬಲಗೈ ಬಂಟನಂತಿದ್ದ ಪ್ರವೀಣ್ ಆಲಿಯಾಸ್ ದೋಣಿ ಎಂಬ ಪೋರ್ಕಿಯೊಬ್ಬ ಏನಕ್ಕೋ ಹೊರಕ್ಕೆ ಕರೆದೊಯ್ದಿದ್ದೇ ಕೊನೆ. ಹೊರಗೆ ಚೀರಾಟ ಕೇಳಿದ ಅಣ್ಣ ವೆಂಕಟೇಶ್ ಮಹಡಿಯಿಂದಲೇ ಇಣುಕಿದರೆ ಚಂದ್ರು ರಕ್ತದ ಓಕುಳಿಯಲ್ಲಿ ಬಿದ್ದು ಒದ್ದಾಡುತ್ತಿದ್ದ. ಸರಿಸುಮಾರು ನಾಲ್ಕು ಮಂದಿ ಹುಡುಗರು ಆತನನ್ನು ಹಿಡಿದು ಕತ್ತರಿಸುತ್ತಿದ್ದರು. ಬಿಡಿಸಲು ಬಂದ ಅಣ್ಣನಿಗೇ ಮುಚ್ಚು ತೋರಿಸಿ ಓಡಿಸಿದ ಹಂತಕರು ಒಂದು ಕೈನೆಟಿಕ್ ಹೋಂಡಾ ಮತ್ತೊಂದು ಬೈಕಿನಲ್ಲಿ ವಿಜಯನಗರದ ದಿಕ್ಕಿಗೆ ವೇಗವಾಗಿ ಪರಾರಿಯಾದರು.

ಕೆಲವರ ಪ್ರಕಾರ ಚಂದ್ರುನ ಸ್ತ್ರೀಲಂಪಟ ಬುದ್ಧಿಯೇ ಆತನನ್ನು ಬಲಿತೆಗೆದುಕೊಂಡಿದೆ. ಮತ್ತೆ ಕೆಲವರು ಪಾಲಿಕೆ ಚುನಾವಣೆಗಾಗಿ ಆತ ಬಲಿಯಾಗಿದ್ದಾನೆ ಎನ್ನುತ್ತಾರೆ. ಪ್ರಾರಂಭದಲ್ಲಿ ವಿಜಯನಗರದ ವೀರಪುತ್ರ ಸೋಮಣ್ಣನ ಶಿಷ್ಯನಾಗಿದ್ದ ಕೇಬಲ್ ಚಂದ್ರುನಿಗೆ ಪಕ್ಕದ ಶಾಮಣ್ಣ ಗಾರ್ಡನ್ನಿನ ಮುಸ್ಲಿಮರ ಬೆಂಬಲವಿತ್ತು. ಬಾಪೂಜಿನಗರದ ಒಕ್ಕಲಿಗರಲ್ಲಿ ಅನುಯಾಯಿಗಳಿದ್ದರು. ಮುಂದಿನ ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಡಿಸುತ್ತೇನೆಂದು ಧಣಿ ಲೇಔಟ್ ಕೃಷ್ಣಪ್ಪನವರೇ ಮಾತು ಕೊಟ್ಟಾಗಿತ್ತು, ಇದರಿಂದ ಹಾಲಿ ಕಾರ್ಪೊರೇಟರ್ ವೆಂಕಟಸ್ವಾಮಿಯ ಹೊಟ್ಟೆಗೆ ಬೆಂಕಿ ಬಿದ್ದಿತ್ತೇ?

ಕೇಬಲ್ ಚಂದ್ರ ಶುದ್ಧ ಒರಟ. ಒಂದಷ್ಟು ದಿನಗಳ ಕಾಲ ಯುವ ಕಾಂಗ್ರೆಸ್ ನಾಯಕ ಡಂಗಣ್ಣನವರ್‌ನ ಅನುಯಾಯಿಯಾಗಿದ್ದ. ಯುವ ಕಾಂಗ್ರೆಸ್ ಪದಾಧಿಕಾರಿಯಾದ. ಕ್ರಮೇಣ ಕೃಷ್ಣ ಭೈರೇಗೌಡರಿಗೆ ನಿಷ್ಠೆ ವರ್ಗಾಯಿಸಿದ. ಸೋಮಣ್ಣನ ಜೊತೆಗಿದ್ದವನು ವಿದಾಯ ಹೇಳಿ ಲೇಔಟ್ ಕೃಷ್ಣಪ್ಪನವರ ಬಂಟನಾದ. ಕೇಬಲ್ ದಂಧೆಯಿತ್ತು. ಯಡವಟ್ಟೆಂದರೆ ಆತನಿಗೆ ಪೋರ್ಕಿ ಹುಡುಗರನ್ನು ಕಟ್ಟಿಕೊಂಡು ಅಲೆದಾಡುವ ಹುಚ್ಚು. ಅದಕ್ಕೆಂದು ಪಕ್ಕದ ಬೀದಿಯ ಪ್ರವೀಣ ಉರ್ಫ್ ದೋಣಿಯನ್ನು ಕಟ್ಟಿಕೊಂಡು ಸುತ್ತಾಡಿಕೊಂಡಿದ್ದ. ಜೊತೆಗೆ ಹೆಣ್ಣಿನ ಚಪಲವೂ ಇತ್ತು. ಕೆಂಗೇರಿಯಲ್ಲಿ ಯಾರೋ ಹೆಂಗಸೊಬ್ಬರನ್ನು ಮನೆ ಮಾಡಿಟ್ಟದ್ದು, ತನ್ನ ಮನೆ ಪಕ್ಕದಲ್ಲೇ ಮತ್ತೊಬ್ಬ ಹೆಂಗಸಿನ ಜೊತೆ ಸುತ್ತಾಡಿದ್ದು, ಇಲ್ಲಿಗೆ 20 ದಿನದ ಹಿಂದೆ ಲೇಔಟ್ ಕೃಷ್ಣಪ್ಪನವರ ಮನೆಗೆ ಬಂದಿದ್ದ ಆಂಟಿಯೊಬ್ಬಳನ್ನು ಕಾರಿಗೆ ಹತ್ತಿಸಿಕೊಂಡು ಕಣ್ಮರೆಯಾಗಿದ್ದು, ಹೀಗೆ ಕೇಬಲ್ ಚಂದ್ರುನ ಪೊಲಿಟಿಕಲ್ ಉಸಾಬರಿಗಿಂತಲೂ 'ಲವ್ ಅಫೇರ್'ಗಳ ಬಗ್ಗೆ ಹೊಗೆಯಾಡುತ್ತಿದ್ದ ಸುದ್ದಿಗಳೇ ಹೆಚ್ಚು.



ಇದಕ್ಕೆ ತಕ್ಕಂತೆ ಬಾಪೂಜಿನಗರದ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಉಸಾಬರಿಗೆ ಕೈಯಿಟ್ಟು ಲೋಕಲ್ ಬಿಜೆಪಿಗಳ ನಿಷ್ಠುರ ಕಟ್ಟಿಕೊಂಡ. ಲೋಕಲ್ಲಾಗಿ ಶಾಲಾ ಮಕ್ಕಳಿಗೆ ಪುಸ್ತಕ ಹಂಚುವ, ಆರೋಗ್ಯ ತಪಾಸಣೆ ಶಿಬಿರಗಳನ್ನು ಮಾಡಿಕೊಂಡಿದ್ದ. ಮಾಜಿ ಕಾರ್ಪೊರೇಟರ್ ವೆಂಕಟಸ್ವಾಮಿಯ ಬ್ಯಾನರ್ ಕುಯ್ಯುವುದಕ್ಕೆಂದೇ ಒಂದಷ್ಟು ಪೋರ್ಕಿ ಹುಡುಗರನ್ನು ಬೆಳೆಸಿದ್ದ. ಈ ಪೈಕಿ ಪ್ರವೀಣ್ ಆಲಿಯಾಸ್ ದೋಣಿಯೇ ಅತ್ಯಂತ ಖತರ್‌ನಾಕ್ ಆಸಾಮಿ. ಕ್ರಿಕೆಟ್ ಆಟಗಾರ ದೋಣಿಯಂತೆ ತಲೆಕೂದಲನ್ನು ಕಟ್ ಮಾಡಿಸಿದ್ದ ಪ್ರವೀಣ್ ದೊಡ್ಡ ಸೈಜಿನ ರೌಡಿಯಲ್ಲ, ಆದರೆ ರೌಡಿಗಳ ಲಿಂಕಿದೆ. ಸ್ಟ್ರೀಟ್ ಫೈಟ್‌ನ ಹಿನ್ನೆಲೆಯಿದೆ.

ಜೂನ್ 27ರ ರಾತ್ರಿ ಪಾರ್ಟಿ ಮುಗಿಸಿ ಕೂತಿದ್ದ ಚಂದ್ರುನ ಜೊತೆಗೆ ಪ್ರವೀಣನೂ ಇದ್ದ. ಯಾರೋ ಇಬ್ಬರು ಹುಡುಗರು ಬಂದು ಮನೆಯೊಳಕ್ಕೆ ಇಣುಕಿ ನೋಡುವುದಕ್ಕೂ, ಅದೇ ಹೊತ್ತಿಗೆ ಪ್ರವೀಣನ ಮೊಬೈಲ್ ರಿಂಗ್ ಆಗುವುದಕ್ಕೂ ಸರಿಹೋಗಿದೆ. ಜೇಬಿನಿಂದ ಮೊಬೈಲ್ ತೆಗೆದು ಮಾತಾಡುವ ನೆಪದಲ್ಲಿ ಮನೆಯಿಂದ ಹೊರಬಿದ್ದ ದೋಣಿ ಮತ್ತೆ ಕೆಲ ನಿಮಿಷಗಳ ನಂತರ ವಾಪಸ್ಸಾಗಿ ಬಾಗಿಲಲ್ಲೇ ನಿಂತು 'ಅಣ್ಣಾ ಒಂದು ನಿಮಿಷ, ಎಂದು ಕರೆದಿದ್ದಾನೆ. ಚಂದ್ರ ಅವನೊಂದಿಗೆ ಹೊರಬಿದ್ದಿದ್ದಾನೆ. ಅಷ್ಟೆ.

ಮನೆಯ ಪಕ್ಕದ ಸಂದಿಯಲ್ಲಿ ಗದ್ದಲ ಕಿರುಚಾಟ ಕೇಳಿದ ಅಣ್ಣ ವೆಂಕಟೇಶ್ ಹೊರಗೆ ಬಂದು ನೋಡುವಷ್ಟರಲ್ಲಿ ಕಾಲ ಮಿಂಚಿಹೋಗಿತ್ತು, ನಾಲ್ವರು ಆತನನ್ನು ಕತ್ತರಿಸಿ ಗಾಡಿಗಳಲ್ಲಿ ಕಣ್ಮರೆಯಾಗಿದ್ದರು. ಆದರೆ ಕೆಲ ಹೊತ್ತಲ್ಲೇ ವಾಪಸ್ಸಾದ ಪ್ರವೀಣ್ ಎಲ್ಲಿಂದಲೋ ಇದ್ದಕ್ಕಿದ್ದಂತೆ ಪ್ರತ್ಯಕ್ಷನಾದವನಂತೆ ವಿನಾಕಾರಣ ಕಿರುಚಾಡಿ 'ಅಣ್ಣನ್ನ ಕೊಲೆ ಮಾಡಿದವರನ್ನ ನಾನು ಬಿಡಲ್ಲ, ಎಲ್ಲೇ ಇದ್ರೂ ಹುಡುಕಾಡಿ ಮುಗಿಸುತ್ತೇನೆ' ಎಂದಿದ್ದಾನೆ. ಇವನ ಬಗ್ಗೆ ಕಿಂಚಿತ್ತೂ ಅನುಮಾನವಿಲ್ಲದ ಅಣ್ಣ ವೆಂಕಟೇಶ್ 'ಅಲ್ಲೋ ಚಂದ್ರುನ್ನ ಹೊರಗೆ ಕರೆತಂದು ಅವನ ಜೊತೆ ಇಲ್ದೇ ಎಲ್ಲೋ ಹಾಳಾಗೋಗಿದ್ದೆ' ಎಂದು ಒಂದೇಟು ಹಾಕಿದ್ದಾರೆ. ಈ ಪ್ರವೀಣ್ ಯಾರು? ಸಂತೋಷ್ ಉರ್ಫ್ ಕಲ್ಲು, ಅಶೋಕ ಎಂಬ ಪೋರ್ಕಿಗಳಿಗೂ ಈತನಿಗೂ ಏನು ಸಂಬಂಧ? ಚಂದ್ರುನ ರಾಜಕೀಯ ದುರಾಶೆ, ಪಾಲಿಕೆ ಚುನಾವಣೆಗೆ ಆತ ನಡೆಸುತ್ತಿದ್ದ ತಯಾರಿಯೇ ಆತನಿಗೆ ಮುಳುವಾಯಿತೆ? ಬಾಪೂಜಿನಗರಕ್ಕೆ ಪಾಲಿಕೆ ಚುನಾವಣೆಗೆ ನಿಲ್ಲಲೆಂದು ಕಾಂಗ್ರೆಸ್ಸಿನ ಹಲವಾರು ಹಿರಿತಲೆಗಳು, ಮಾಜಿ ಕಾರ್ಪೊರೇಟರ್‌ಗಳು ಈಗಾಗಲೇ ಸಜ್ಜಾಗಿದ್ದಾರೆ. ಆ ಪೈಕಿ ಯಾರೋ ಒಬ್ಬ ಮುಂದೊಮ್ಮೆ ತನಗೆ ಮುಳ್ಳಾಗಬಹುದೆಂದು ಚಂದ್ರುನನ್ನು ಪ್ರವೀಣನ ಮೂಲಕ ಹೊರಕ್ಕೆ ಕರೆಸಿ ಮುಗಿಸಿರಬಹುದೆ?

ಚಂದ್ರುನನ್ನು ಅಣ್ಣಾ ಎಂದು ಉಪಾಯವಾಗಿ ಹೊರಗೆ ಕರೆದು, ಅವನನ್ನು ಹಂತಕರ ಕೈಗೆ ಒಪ್ಪಿಸಿ, ನಾಪತ್ತೆಯಾಗಿ ಆನಂತರ ದಿಢೀರ್ ಪ್ರತ್ಯಕ್ಷನಾಗಿ ಹೆಣದ ಮುಂದೆ ಪ್ರತಿಕಾರದ ನಾಟಕವಾಡಿದ ಪ್ರವೀಣನ ಬಾಯಿ ಬಿಡಿಸಿದರೆ ಚಂದ್ರುನ ಕೊಲೆ ರಹಸ್ಯ ಬಯಲಾಗುತ್ತದೆ.

ಬ್ಯಾಟರಾಯನಪುರ ಇನ್ಸ್‌ಪೆಕ್ಟರ್ ರಾಜೇಂದ್ರರಿಗಿದು ಗೊತ್ತಾಗಬೇಕಷ್ಟೇ. ■

## ಇದು ಮು. ಚಂದ್ರು ಮತ್ತು ವಿಜಯ್ ಕುಮಾರ್‌ರ ಹೊಸ ದಂಧೆಯೆ?

ನಟ ಮತ್ತು ಬಿಜೆಪಿ ರಾಜಕಾರಣಿ ಮುಖ್ಯಮಂತ್ರಿ ಚಂದ್ರು ಹಾಗೂ ಜಯನಗರದ ಚೆಡ್ಡಿ ಶಾಸಕ ವಿಜಯ್ ಕುಮಾರ್ ಹೊಸ ದಂಧೆಯೊಂದನ್ನು ಶುರು ಹಚ್ಚಿಕೊಂಡಂತೆ ಕಾಣುತ್ತಿದೆ. ಅದೆಂದರೆ, ಜೆ.ಪಿ.ನಗರ ನಾಲ್ಕನೇ ಹಂತದ ಬಡಾವಣೆಯ ನಿವಾಸಿಗಳಿಂದ ಬಡಾವಣೆಯ ಅಭಿವೃದ್ಧಿಯ ಹೆಸರಿನಲ್ಲಿ ಹಣ ವಸೂಲಿ! ಹೌದು ಈ ಬಡಾವಣೆಯ ಜನರಿಂದ ಇವರಿಬ್ಬರಿಂದ ನಿಯೋಜಿತಗೊಂಡಿರುವ ಕೆಲವು ಸ್ವಯಂ ಘೋಷಿತ ಸ'ಮಜಾ' ಸೇವಕರು, ಕ್ಷಮಿಸಿ ಸಮಾಜ ಸೇವಕರು ವಸೂಲಿ ಮಾಡುತ್ತಿರುವುದಂತೂ ಸತ್ಯ. ಈ ವಸೂಲಿಯೂ ಏಕಪ್ರಕಾರವಾಗಿಲ್ಲ, ಜಾಸ್ತಿ ಆಸ್ತಿಯಿದ್ದವರು ಜಾಸ್ತಿ ಹಣ ತೆರಬೇಕು, ಕಡಿಮೆಯಿದ್ದವರು ಕಡಿಮೆ ಕೊಡಬೇಕು. ನಿಮಗೆ ಎರಡು ಫ್ಲೋರ್ ಮನೆಯಿದ್ದರೆ ಕೇವಲ 2000 ರೂ., ಮೂರು ಸ್ಟೋರಿ ಬಿಲ್ಡಿಂಗ್ ಇದ್ದರೆ 3000 ಸಾವಿರ, ಬಾಡಿಗೆಗೆ ಇದ್ದರೆ ಕೇವಲ ಐನೂರು ರೂಪಾಯಿ.



ಇಂತಹ ಪುಡಿಗಾಸಿಗೆ ಇವರಿಬ್ಬರು ಜೊಲ್ಲು ಸುರಿಸುತ್ತಿದ್ದಾರೆಯೆ ಎಂಬ ಪ್ರಶ್ನೆ, ಅನುಮಾನ ಏಳದಿರದು. ಅಸಲಿಗೆ ಹಕೀಕತ್ತೇ ಬೇರೆ ಇದೆ. ಅದೇನೆಂದರೆ, ಜೆ.ಪಿ.ನಗರ ನಾಲ್ಕನೇ ಹಂತದ ಹದಿನಾರನೇ ಅಡ್ಡ ರಸ್ತೆಯಲ್ಲಿರುವ, ಸಾರ್ವಜನಿಕ ಉದ್ಯಾನವಕ್ಕೆಂದು ಮೀಸಲಿಟ್ಟಿರುವ ಒಂದು ಸರ್ಕಾರಿ ನಿವೇಶನದ ಮೇಲೆ ಹತೋಟಿ ಸಾಧಿಸುವುದು, ಅದನ್ನು ತಮ್ಮ ಚೆಡ್ಡಿ ಅಡ್ಡೆಯನ್ನಾಗಿ ಮಾಡಿಕೊಳ್ಳುವುದು ಅವರ ಹಿಡನ್ ಅಜೆಂಡ. ಅಭಿವೃದ್ಧಿ, ಪ್ರಗತಿ ಎಲ್ಲಾ ಬೂಸ.

### ನಿವೇಶನದ ಕತೆಯೇನು?

1974ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಿ ಒಂದು ಲೇಔಟ್‌ನ್ನು ನಿರ್ಮಾಣ ಮಾಡಿತ್ತು, ಸಮಾಜದ ಬಡವರ್ಗಗಳನ್ನೇ ಗಮನದಲ್ಲಿರಿಸಿಕೊಂಡು ಕೇವಲ 20 – 30 ಅಳತೆಯ ಚಿಕ್ಕಪುಟ್ಟ ಸೈಟುಗಳನ್ನು ರೂಪಿಸಿತ್ತು, ಇಲ್ಲಿನ ರಸ್ತೆಗಳೂ ಕೂಡ ಹದಿನೈದು ಇಪ್ಪತ್ತು ಅಡಿಗಳಷ್ಟು ಅಗಲ ಇವೆ ಅಷ್ಟೇ. ಈಗ ಇಲ್ಲಿ ವಾಸಿಸುತ್ತಿರುವವರೂ ಆರ್ಥಿಕವಾಗಿ ದುರ್ಬಲರಾಗಿರುವವರೆ. ಈ ಬಡಾವಣೆ ರೂಪುಗೊಂಡು ಹತ್ತು-ಹದಿನೈದು ವರ್ಷಗಳ ನಂತರವೇ ಅಲ್ಲಿ ಜನವಸತಿ ಪ್ರಾರಂಭವಾಗಿದ್ದು.

ಬಿಡಿಎ ಬಡಾವಣೆಯನ್ನು ರೂಪಿಸುವಾಗ ಜೆ.ಪಿ.ನಗರ ನಾಲ್ಕನೇ ಹಂತದ ಹದಿನಾರನೇ ಅಡ್ಡ ರಸ್ತೆಯ ಎರಡೂ ತುದಿಯಲ್ಲಿ ಎರಡು ನಿವೇಶನಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ (ಅಂದರೆ, ಪಾರ್ಕು, ಸಮುದಾಯ ಭವನ ಮುಂತಾದವುಗಳ ನಿರ್ಮಾಣಕ್ಕಾಗಿ) ಮೀಸಲಿರಿಸಿತ್ತು, ಅವೆರಡೂ ಕೂಗಳತೆಯ ದೂರದಲ್ಲಿವೆ. ಅದರಲ್ಲಿ ಒಂದು ಸೈಟಿನಲ್ಲಿ ದಿಢೀರ್ ಎಂದು ಒಂದು ದೇವಸ್ಥಾನ ಎದ್ದುನಿಂತಿತು. ಅದರಿಂದ ಸ್ಥಳೀಯರಿಗೂ ಏನೂ ತೊಂದರೆಯಿಲ್ಲ ಬಿಡಿ. ಕನಿಷ್ಠ ಇನ್ನೊಂದು ಸೈಟನ್ನಾದರೂ ಒಂದು ಉದ್ಯಾನವನ್ನಾಗಿ ಪರಿವರ್ತಿಸಬೇಕೆಂದು ಸ್ಥಳೀಯ ನಿವಾಸಿಗಳು ಪ್ರಯತ್ನಿಸುತ್ತಿದ್ದರು. ಏಕೆಂದರೆ, ಪಕ್ಕದಲ್ಲಿಯೇ ರಬ್ಬರ್ ಫ್ಯಾಕ್ಟರಿಯಿರುವುದರಿಂದ ಇಡೀ ಏರಿಯ ಮಲಿನಗೊಳ್ಳುತ್ತದೆ. ಕನಿಷ್ಠ ಒಂದು ಪಾರ್ಕು ಅಂತ ಇದ್ದರೆ ಹಿರಿಯ ನಾಗರಿಕರಿಗೆ, ಮಕ್ಕಳಿಗೆ, ಬೆಳಗ್ಗೆ-ಸಂಜೆ ವಾಕ್ ಮಾಡುವವರಿಗೆ ಅನುಕೂಲವಾಗುತ್ತದೆ ಎಂಬುದು ಅವರ ಉದ್ದೇಶವಾಗಿತ್ತು.

1986ರಲ್ಲೇ ಅಲ್ಲೊಂದು ಪಾರ್ಕ್ ಮಾಡಿ ಅಂತ ಸ್ಥಳೀಯರು ಬಿಡಿಎಗೆ ಮನವಿ ಮಾಡಿದ್ದರು. ಅದು ಕಿವಿಮುಚ್ಚಿ ಕೂತಿತ್ತು.

ಆದರೆ, ನಮ್ಮ ಸರ್ಕಾರಿ ಯಂತ್ರಾಂಗವೇ ಹೇಗಿರುತ್ತದೆಂದರೆ ನಿವೇಶನ ಯಾವ ಇಲಾಖೆಯ ಸೊತ್ತಿನಲ್ಲಿದೆ, ಅದು ಬಿಡಿಯ ವಶದಲ್ಲಿದೆಯೇ ಅಥವ ಮಹಾನಗರ ಪಾಲಿಕೆಯ ಕೆಳಗೆ ಬರುತ್ತದೆಯೆ – ಇಂತಹ ಟೆಕ್ನಿಕಲ್ ವಿಚಾರಗಳನ್ನು ತಿಳಿದುಕೊಳ್ಳುವ ಹೊತ್ತಿಗಾಗಲೇ ಈ ಬಿಜೆಪಿಗಳು ಅಲ್ಲಿ ಮತ್ತೊಂದು ದೇವರನ್ನು ತಂದು ಕೂರಿಸಿಬಿಟ್ಟಿದ್ದರು. ಅದು ಹೇಗೆ ಅಂತಿರಾ, 1993-94ರ ಅವಧಿಯಲ್ಲಿ ಬಿಡಿಎ ಛೇರ್ಮನ್ ಆಗಿದ್ದ ಲಿಂಗಾಯತ ಜಾತಿಯ ಮುದ್ದಪ್ಪ ತಮ್ಮ ಮನೆಗೆ ಪಾದಪೂಜೆ ಮಾಡಿಸಿಕೊಳ್ಳಲು ಬಂದಿದ್ದ ಮೈಸೂರಿನ ಅನ್ನದಾನೇಶ್ವರ ಮಠದ ಶಿವಾನಂದ ಸ್ವಾಮಿಗೆ ದಕ್ಷಿಣೆಯಾಗಿ ಈ ಸೈಟನ್ನು ಕೊಟ್ಟುಬಿಟ್ಟರು! ಪಾದಪೂಜೆ ನಂತರ ತಮ್ಮ ಪಾಕೇಟ್‌ನಿಂದ ದಕ್ಷಿಣೆ ಕೊಡೋದು ಮಾಮೂಲಿ. ಆದರೆ, ಈತ ಸರ್ಕಾರಿ ಸೈಟನ್ನು – ಅದರಲ್ಲೂ ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿದ್ದ ಸೈಟಿನ ದಾಖಲೆಗಳನ್ನು ತಿದ್ದುಪಡಿ ಮಾಡಿ ಸ್ವಾಮಿಯ ಪಾದಾರವಿಂದಗಳಿಗೆ ಇಟ್ಟುಬಿಟ್ಟಿದ್ದ. ಏಕೆಂದರೆ, ಸ್ವಾಮಿ ಮತ್ತು ಮುದ್ದಪ್ಪ ಇಬ್ಬರೂ ಲಿಂಗಾಯತ ಕೋಮಿನವರಾಗಿದ್ದರು.



ಇದು ಗೊತ್ತಾಗುತ್ತಿದ್ದಂತೆಯೇ ಸ್ಥಳೀಯರು ಇದರ ವಿರುದ್ಧ ತಿರುಗಿಬಿದ್ದರು. ತಮ್ಮದೇ ಸಂಘವೊಂದನ್ನು ರಚಿಸಿಕೊಂಡು ಪತ್ರಿಕಾಗೋಷ್ಠಿ ನಡೆಸಿ ಅದು ಸ್ವಾಮಿಯ ಪಾಲಾಗದಂತೆ ತಡೆದುಬಿಟ್ಟರು. ಆದರೂ ಅಷ್ಟೊತ್ತಿಗೆ ಸ್ವಾಮಿ ಆಗಲೇ ಅಲ್ಲೊಂದು ದೇವಸ್ಥಾನವನ್ನು ಸ್ಥಾಪಿಸಿಬಿಟ್ಟಿದ್ದ!

ಅಷ್ಟು ಹೊತ್ತಿಗೆ ಕೆಲ ನೆಲಗಳ್ಳರೂ ಆ ಜಾಗದ ಮೇಲೆ ಕಣ್ಣು ಹಾಯಿಸಿದ್ದರು. ಬಿಡಿಎ ಅಂತೂ ಏನೂ ಮಾಡಲಿಲ್ಲ. ಕೊನೆಗೆ ಸಾರ್ವಜನಿಕರೇ ಹಣ ಸಂಗ್ರಹಿಸಿ ಅಲ್ಲೊಂದಿಷ್ಟು ಕಲ್ಲುಬೆಂಚುಗಳನ್ನು ಹಾಕಿಸಿ ಅದಕ್ಕೊಂದು ಪಾರ್ಕ್ ರೂಪ ಕೊಟ್ಟರು. ಆದರೆ, ದೇವಸ್ಥಾನವನ್ನು ತೆರವುಗೊಳಿಸುವ ಉಸಾಬರಿಗೆ ಹೋಗಲಿಲ್ಲ, ಏಕೆಂದರೆ, ಇಂತಹುದ್ದನ್ನೇ ಕಾಯುತ್ತ ಕುಳಿತಿರುವ ಸಂಘಪರಿವಾರದ ಚೆಡ್ಡಿಗಳು 'ಹಿಂದೂ ದೇವತೆಗೆ ಅವಮಾನ', 'ಬಹುಸಂಖ್ಯಾತ ಹಿಂದೂ ಭಾವನೆಗಳಿಗೆ ಧಕ್ಕೆ' ಮುಂತಾದ ಪದಪುಂಜಗಳನ್ನು ಬಳಸಿ ಅದನ್ನೊಂದು ಸೆನ್ಸಿಟಿವ್ ಇಶ್ಯೂ ಆಗಿ ಮಾಡಿಬಿಡುತ್ತಾರೆಂಬ ಭಯ ಅವರಲ್ಲಿ ಇದ್ದೇ ಇತ್ತು, ಹಾಗಾಗಿ ದೇವಸ್ಥಾನ ಇದ್ದಷ್ಟೇ ಇರಲಿ, ಕನಿಷ್ಠ ಅದು ವಿಸ್ತರಿಸದಂತೆ ನೋಡಿಕೊಳ್ಳಬೇಕೆಂದುಕೊಂಡರು.

### ನಿವೇಶನಕ್ಕೆ ಅಮರಿಕೊಂಡರು!

ಸ್ಥಳೀಯರು ಮೈಸೂರಿನ ಶಿವಾನಂದ ಸ್ವಾಮಿಯನ್ನು ಮತ್ತು ಕೆಲ ನೆಲಗಳ್ಳರನ್ನು ಹಿಮ್ಮೆಟ್ಟಿಸಿ ನಿಟ್ಟುಸಿರು ಬಿಡುತ್ತಿದ್ದಂತೆ ಈಗ ಜಯನಗರದ ಶಾಸಕ ಹಾಗೂ ಕನ್ನಡಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಈಗ ಈ ನಿವೇಶನಕ್ಕೆ ಅಮರಿಕೊಂಡಿದ್ದಾರೆ. ತಮ್ಮ ಚೇಲಾಗಳನ್ನು ಬಿಟ್ಟು ಪ್ರತೀ ಮನೆಯಿಂದ ದೇವರ ಹೆಸರಿನಲ್ಲಿ, ಬಡಾವಣೆ ಅಭಿವೃದ್ಧಿಯ ಹೆಸರಿನಲ್ಲಿ ಹಣ ದೋಚುವ ದಂಧೆಗಿಳಿದಿದ್ದಾರೆ. ಯಾರಾದರೂ ಪ್ರಶ್ನಿಸಿದರೆ 'ದೇವರ ಕಾರ್ಯಕ್ಕೆ ಅಪಸ್ವರ ಎತ್ತುತ್ತಿದ್ದಾನೆ' ಎಂದು ಐಸೋಲೇಟ್ ಮಾಡಲು ಪ್ರಯತ್ನಿಸುತ್ತಿದ್ದಾರೆ.

"ಸರ್ಕಾರಕ್ಕೆ ನಾವು ಟ್ಯಾಕ್ಸ್ ಕಟ್ಟಿದ್ದೇವೆ. ನಮ್ಮ ಏರಿಯಾವನ್ನು ಅಭಿವೃದ್ಧಿಪಡಿಸೋದು ಅದರ ಕರ್ತವ್ಯ. ಇವರು ಮಧ್ಯಬಂದು ಪ್ರತ್ಯೇಕವಾಗಿ ಅನಧಿಕೃತ ಟ್ಯಾಕ್ಸ್ ವಸೂಲಿ ಮಾಡುತ್ತಿದ್ದಾರೆ. ಅದೂಅಲ್ಲದೇ ಈಗಿರುವ ದೇವಸ್ಥಾನದ ಕಟ್ಟಡವನ್ನು ಇನ್ನಷ್ಟು ವಿಸ್ತರಿಸುವ ಕಡೆಗೂ ಅವರು ಪ್ರಯತ್ನಿಸುತ್ತಿದ್ದಾರೆ. ಮೊದಲು ಅವರು ದಿನಾಲು ಇಲ್ಲಿಗೆ ಪೂಜೆಗೆ ಬರುವ ಅರ್ಚಕರು ಉಳಿದುಕೊಳ್ಳುವುದಕ್ಕೆ ಅಂತ ಒಂದು ಚಿಕ್ಕ ರೂಮು ಕಟ್ಟಿಸುತ್ತೇವೆ ಎನ್ನುತ್ತಾರೆ; ಆದರೆ, ಕಟ್ಟಿಸುವುದು ಮಾತ್ರ ಡಬಲ್ ಬೆಡ್‌ರೂಮ್ ಮನೆಯನ್ನು! ನಂತರ ಉಪನಯನದಂತಹ ಕಾರ್ಯಕ್ರಮಕ್ಕೆ ಅಂತ ಒಂದು ಚಿಕ್ಕ ಹಾಲ್ ಕಟ್ಟಿಸೋಣ ಅಂತಾರೆ; ಆಮೇಲೆ ವೇದ ಪಾಠ ಮಾಡಲು ಒಂದು ಚಿಕ್ಕ ಸ್ಕೂಲ್ ಕಟ್ಟಿಸೋಣ ಅಂತಾರೆ. ಒಟ್ಟಿನಲ್ಲಿ ಇಡೀ ಪ್ರದೇಶವನ್ನು ಕೇಸರೀಮಯ ಮಾಡಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು, ನಂತರ ಅದನ್ನು ವಾಣಿಜ್ಯೀಕರಣಗೊಳಿಸಿ ಲಾಭ ಮಾಡೋದು ಅವರ ಗುರಿ" ಎಂದು ಸ್ಥಳೀಯರು ದೂರುವುದರಲ್ಲಿ ನಿಜಕ್ಕೂ ಸತ್ಯಾಂಶ ಇಲ್ಲದಿಲ್ಲ.

■ ಕುಮಾರ್ ಬುರಡಿಕಟ್ಟಿ

# ಪತ್ನಿಪೀಡಕ ಪೋಲೀಸ್!

ಈತನ ಹೆಸರು ಅನಿಲ್ ಕುಮಾರ್. ವೃತ್ತಿ ಬೆಂಗಳೂರು ನಗರದ ಚಿನ್ನಮ್ಮನ ಅಚ್ಚುಕಟ್ಟು ಠಾಣೆಯಲ್ಲಿ ಎಸ್ಸೈ. ಸಮಾಜದ್ರೋಹಿಗಳನ್ನು ನಿಗ್ರಹಿಸುವಲ್ಲಿ ಎಷ್ಟು ಸಾಧನೆ ಮಾಡಿದ್ದಾನೋ ಇಲ್ಲವೋ ಗೊತ್ತಿಲ್ಲ. ಆದರೆ, ಪತ್ನಿಪೀಡನೆಯಲ್ಲಿ ಬಹಳಷ್ಟು ಸಾಧನೆ ಮಾಡಿಬಿಟ್ಟಿದ್ದಾನೆ. ಈ ಮಹತ್ಸಾಧನೆಗಾಗಿಯೇ ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿ ಕಂಬ ಎಣಿಸುವ ಪ್ರಮೋಶನ್ ಗಿಟ್ಟಿಸಿಕೊಂಡಿದ್ದಾನೆ!

ಮೊನ್ನೆಯ ಘಟನೆಯನ್ನೇ ನೋಡಿ. ಜೂನ್ 22ರ ಭಾನುವಾರ ಸುಮಾರು ಹನ್ನೆರಡು ಗಂಟೆಯ ಮಧ್ಯರಾತ್ರಿಯಲ್ಲಿ ಬೆಂಗಳೂರು ನಗರದ ಜರಗನಹಳ್ಳಿಯಲ್ಲಿರುವ ತನ್ನ ಹೆಂಡತಿ ರೂಪಾಳ ತವರು ಮನೆಗೆ ರೌಡಿಗಳೊಂದಿಗೆ ನುಗ್ಗಿ ದಾಂಧಲೆ ಎಬ್ಬಿಸಿದ್ದಾನೆ; ಹೆಂಡತಿ, ಅತ್ತೆ ಮಾವ, ಹೆಂಡತಿಯ ತಮ್ಮ - ಹೀಗೆ ಎದುರಿಗೆ ಸಿಕ್ಕವರನ್ನೆಲ್ಲಾ ಮನಬಂದಂತೆ ಥಳಿಸಿದ್ದಾನೆ, ಮನೆಯ ವಸ್ತುಗಳನ್ನೆಲ್ಲಾ ಧ್ವಂಸ ಮಾಡಿ ಹಾಕಿದ್ದಾನೆ; ತನ್ನ ಹೆಂಡತಿ ರೂಪಾಳನ್ನು ರೇಪ್ ಮಾಡಿ ಅಂತ ತನ್ನೊಂದಿಗೆ ಬಂದಿದ್ದ ಸುಧೀರ್ ಮತ್ತು ಯೋಗೇಶ್ ಎಂಬ ರೌಡಿಗಳಿಗೆ ಆರ್ಡರ್ ಮಾಡಿದ್ದಾನೆ; ರಸ್ತೆಯಲ್ಲಿ ನಿಂತು ತನ್ನ ಅತ್ತೆಗೆ ಇಲ್ಲಿ ಬರೆಯಲಾಗದ ಪದಗಳನ್ನೆಲ್ಲಾ ಬಳಸಿ ಕೆಟ್ಟದಾಗಿ ಬೈಯ್ದಿದ್ದಾನೆ; ಮತ್ತೆ ಮನೆಯೊಳಗೆ ನುಗ್ಗಿ ತನ್ನ ಸರ್ವೀಸ್ ರಿವಾಲ್ವಾರ್‌ನಿಂದ ಸೋಫಾ ಸೆಟ್ ಮತ್ತು ಟಿ.ವಿ.ಸ್ಟ್ಯಾಂಡ್ ಮೇಲೆ ಮನಬಂದಂತೆ ಗುಂಡು ಹಾರಿಸಿ ಭಯಭೀತ ವಾತಾವರಣ ಸೃಷ್ಟಿಸಿದ್ದಾನೆ; ಕೊನೆಗೆ ಪೊಲೀಸ್ ಕಂಪ್ಲೇಂಟ್ ಕೊಟ್ಟರೆ ರೂಪಾಳ ತಂಗಿಯನ್ನು ರೌಡಿಗಳನ್ನು ಬಿಟ್ಟು ರೇಪ್ ಮಾಡಿಸುತ್ತೇನೆ ಮತ್ತು ಇಡೀ ಕುಟುಂಬವನ್ನೇ ಕೊಂದು ಹಾಕುತ್ತೇನೆ ಎಂದು ಅವಾಜ್ ಹಾಕಿದ್ದನೆ. ಅಲ್ಲಿಂದ ಪರಾರಿಯಾಗುವಾಗ ಮನೆಯಲ್ಲಿದ್ದ ಮೊಬೈಲ್ ಸೆಟ್ ಮತ್ತು ಹದಿನೈದು ಸಾವಿರ ದುಡ್ಡನ್ನೂ ದೋಚಿಕೊಂಡು ಹೋಗಿದ್ದಾನೆ. ಇಂತಹ ಮಹತ್ಸಾಧನೆ ಮಾಡಿದ ಮಹಾನುಭಾವ ಪೊಲೀಸ್ ಅಧಿಕಾರಿಗೆ ಪರಪ್ಪನ ಅಗ್ರಹಾರ ಜೈಲಲ್ಲದೇ ಬೇರೆ ಜಾಗ ಸೂಕ್ತವಾದರೂ ಹೇಗಾಗುತ್ತದೆ ಹೇಳಿ?



## ಏನು ಕಾರಣ?

ಅನಿಲ್ ಕುಮಾರ್ ಎಂಬ ಈ ಗೂಂಡಾ ಎಸ್ಸೈನ ತಿಕ್ಕಲುತನಕ್ಕೆ 'ಅನುಮಾನ'ವೆಂಬ ಪೆದ್ದರೋಗವಲ್ಲದೇ ಬೇರೆ ಕಾರಣಗಳು ಕಾಣುವುದಿಲ್ಲ. ತನ್ನ ಹೆಂಡತಿ ರೂಪಾಳೊಂದಿಗೂ, ಅವಳ ಕುಟುಂಬದೊಂದಿಗೂ ಹತ್ತಾರು ವರ್ಷಗಳಿಂದ ಆತ್ಮೀಯನಾಗಿರುವ ಹರ್ಷ ಎಂಬ ಹುಡುಗನಿದ್ದಾನೆ. ವಯಸ್ಸಿನಲ್ಲಿ ರೂಪಾಳಿಗಿಂತ ಚಿಕ್ಕವನಾಗಿರುವ ಈತ ಅನಿಲ್‌ಕುಮಾರ್-ರೂಪಾಳ ಮದುವೆಯಾಗುವ ಬಹಳ ಮೊದಲೇ ರೂಪಾಳ ಕುಟುಂಬದಲ್ಲಿ ಒಬ್ಬನಾಗಿ ಹೋಗಿದ್ದಾನೆ. ಈ ಕುಟುಂಬ ಯಾವುದೇ ಟೂರ್ ಹೋಗಲಿ, ಧಾರ್ಮಿಕ ಕ್ಷೇತ್ರಗಳಿಗೆ ಭೇಟಿ ನೀಡಲಿ ಅವರೊಂದಿಗೆ ಹರ್ಷ ಕಾಯಂ ಆಗಿ ಹೋಗುತ್ತಿದ್ದ, ಅವನ ಮೇಲೆ ರೂಪಾಳ ಕುಟುಂಬಕ್ಕೆ ಸಾಕಷ್ಟು ವಿಶ್ವಾಸ ಕೂಡ ಇದೆ.



ಗುಂಡೇಟಿನಿಂದ ಗಾಯಗೊಂಡ ರೂಪಾಳ ಸಹೋದರ

ಆದರೆ, ಅದು ರೂಪಾಳ ಗಂಡ ಎಸ್ಸೈ ಅನಿಲ್ ಕುಮಾರ್‌ಗೆ ಇಲ್ಲ, ತನ್ನ ಹೆಂಡತಿ ಹರ್ಷನೊಂದಿಗೆ ದೈಹಿಕ ಸಂಬಂಧವಿಟ್ಟುಕೊಂಡಿದ್ದಾಳೆ ಎಂಬುದು ಅವನ ತಲೆಗೆ ಹೊಕ್ಕಿರುವ ಹುಳ. ಮೊದಲೇ ಈತ ಪೊಲೀಸ್ ಅಧಿಕಾರಿ ಬೇರೆ. ತನ್ನ ಅನುಮಾನವನ್ನು ಮತ್ತಷ್ಟು ಪುಷ್ಟೀಕರಿಸುವುದಕ್ಕೆ ಹರ್ಷ ಮತ್ತು ರೂಪ ಇಬ್ಬರೂ ಯಾವಾಗ, ಎಷ್ಟೊತ್ತು ತಮ್ಮ ಮೊಬೈಲ್‌ಗಳಲ್ಲಿ ಮಾತನಾಡಿದ್ದಾರೆ ಎಂಬ ದಾಖಲಾತಿಗಳ ದೊಡ್ಡ ಫೈಲನ್ನೇ ಮೆಂಟೇನ್ ಮಾಡಿದ್ದಾನೆ ಈ ಅನಿಲ್ ಕುಮಾರ್. ಗಂಟೆಗಟ್ಟಲೇ ಹರ್ಷನೊಂದಿಗೆ ಹರಟುತ್ತಿದ್ದ ರೂಪಳಿಗೆ ಚಿತ್ರಹಿಂಸೆ ಕೊಡಲು ಪ್ರಾರಂಭಿಸಿದ್ದೇ ಆವಾಗ. ಮೊನ್ನೆ ನಡೆದಿರುವುದು ಅದರ ಅತಿರೇಕದ ಘಟ್ಟ.

ಹೆಂಡತಿಯ ಮೇಲೆ ಅನುಮಾನವಿದ್ದರೆ ಆಕೆಯೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಿ ಕೊಳ್ಳಬಹುದಿತ್ತು. ಒಂದು ವೇಳೆ ಹರ್ಷನೊಂದಿಗೆ ಆಕೆಗೆ ನಿಜ ವಾಗಿಯೂ ಸಂಬಂಧವಿದೆಯೆಂದೇ ಆತನಿಗೆ ಬಲವಾಗಿ ಅನ್ನಿಸಿದರೆ, ಆಕೆಯೊಂದಿಗೆ ಜೀವನ ನಡೆಸುವುದು ಅಸಾಧ್ಯ ಅನ್ನಿಸಿದರೆ, ಆಕೆಗೆ ವಿಚ್ಛೇಧನ ಕೊಟ್ಟು ಆಕೆಯ ಪಾಡಿಗೆ ಆಕೆಯನ್ನು ಬಿಟ್ಟುಬಿಡಬಹುದಿತ್ತು, ಅದನ್ನು ಬಿಟ್ಟು ಈ ರೀತಿ ಕಾನೂನನ್ನೇ ಕೈಗೆತ್ತಿಕೊಂಡು ಗೂಂಡಾಗಿರಿ ಪ್ರದರ್ಶಿಸುತ್ತಾನೆಂದರೆ ಅವನಿಗೆ ಕೊಬ್ಬು ಜಾಸ್ತಿಯಾಗಿದೆ ಎಂದೇ ಅರ್ಥವಲ್ಲವೆ?


## ಇದೇ ಮೊದಲ ಬಾರಿಯಲ್ಲ!

ಅಸಲಿಗೆ ಅನಿಲ್ ಕುಮಾರ್ ಹೆಂಡತಿಯ ಮೇಲೆ ದಾಳಿ ಮಾಡುತ್ತಿರುವುದು ಇದು ಮೊದಲ ಸಲವೇನಲ್ಲ. ಆಹಾರ ಮತ್ತು ಪೂರೈಕೆ ಇಲಾಖೆಯಲ್ಲಿ ಫುಡ್ ಇನ್ಸ್‌ಪೆಕ್ಟರ್ ಆಗಿರುವ ರೂಪಾಳ ತಂದೆ ನಾಗಲಿಂಗಯ್ಯ 2005, ಮೇ 30ರಂದು ರೂಪಾಳನ್ನು ಅನಿಲ್‌ಕುಮಾರ್‌ಗೆ ಕೊಟ್ಟು ಮದುವೆ ಮಾಡಿದ ದಿನದಿಂದಲೇ ಅವನ ಕಿರಿಕಿರಿ ಪ್ರಾರಂಭವಾಗಿದೆ. ಮದುವೆಗೆ ಬಂದಿದ್ದ ಬೀಗರನ್ನು ಕಳಿಸುವುದಕ್ಕೆ ನಾಗಲಿಂಗಯ್ಯ ಒಂದೇ ಕಾರನ್ನು ಕಳಿಸಿದ್ದಕ್ಕೆ ಸಿಡಿಮಿಡಿಗೊಂಡು ಅಂದೇ ಕ್ಯಾತೆ ತೆಗೆದಿದ್ದ ಈ ಅನಿಲ್ ಕುಮಾರ್. ಅಲ್ಲಿಂದ ಪ್ರಾರಂಭವಾದ ಅನಿಲ್‌ಕುಮಾರ್‌ನ ಈ ಕಿರಿಕಿರಿ ರೂಪಾಳನ್ನು ಕೊಲ್ಲುವ ಹಂತಕ್ಕೂ ತಲುಪಿತ್ತು.

> ಅನಿಲ್‌ಕುಮಾರ್ ತೀರದ ಧನದಾಹಿ. ಹಣ ಸಿಗುತ್ತೆ ಎಂದರೆ ಯಾವ ಕೆಲಸಕ್ಕೂ ಸಿದ್ಧನಾಗಿಬಿಡುತ್ತಾನೆ. ಅದರಲ್ಲೂ ವರದಕ್ಷಿಣೆಯಂತಹ ಬಿಟ್ಟಿ ಹಣ ಬರುತ್ತೆ ಎಂದರೆ ಪತ್ನಿಯನ್ನು ಕೊಲ್ಲುವುದಕ್ಕೂ ಮುಂದಾಗುತ್ತಾನೆ. ಇಂತಹ ಮಹಾನುಭಾವ ಪೋಲೀಸ್ ಅಧಿಕಾರಿಗೆ ಪರಪ್ಪನ ಅಗ್ರಹಾರ ಜೈಲಲ್ಲದೇ ಬೇರೆ ಜಾಗ ಸೂಕ್ತವಾದರೂ ಹೇಗಾಗುತ್ತದೆ ಹೇಳಿ?

ಅನಿಲ್‌ಕುಮಾರ್ ತೀರದ ಧನದಾಹಿ. ಹಣ ಸಿಗುತ್ತೆ ಎಂದರೆ ಯಾವ ಕೆಲಸಕ್ಕೂ ಸಿದ್ಧನಾಗಿಬಿಡುತ್ತಾನೆ. ಅದರಲ್ಲೂ ವರದಕ್ಷಿಣೆಯಂತಹ ಬಿಟ್ಟಿ ಹಣ ಬರುತ್ತೆ ಎಂದರೆ ಪತ್ನಿಯನ್ನು ಕೊಲ್ಲುವುದಕ್ಕೂ ಮುಂದಾಗುತ್ತಾನೆ. ಹಾಗೆ ನೋಡಿದರೆ ಮೂಲತಃ ಕನಕಪುರ ತಾಲ್ಲೂಕಿನ ಗೊಟ್ಟಿಗೆಹಳ್ಳಿಯವನಾದ ಅನಿಲ್‌ಕುಮಾರ್‌ನದು ಸ್ಥಿತಿವಂತ ಕುಟುಂಬ. ತಂದೆಗೆ ಒಂದಿಷ್ಟು ಜಮೀನು ಕೂಡ ಇದೆ. ಎಂಎಸ್‌ಡಬ್ಲ್ಯೂನಲ್ಲಿ ಪದವಿ ಪೂರೈಸಿರುವ ಈತ ಪೊಲೀಸ್ ಇಲಾಖೆಗೆ ಎಸ್ಸೈ ಆಗಿ ಸೇರಿದ್ದು 2003ರಲ್ಲಿ. ಇವನ ಕುಟುಂಬ ಮತ್ತು ವೃತ್ತಿಯನ್ನು ಗಮನಿಸಿದ ಜರಗನಹಳ್ಳಿಯ ನಾಗಲಿಂಗಯ್ಯನವರು ಈತನಿಗೆ ತನ್ನ ಮಗಳು ರೂಪಳನ್ನು ಕೊಟ್ಟು ಮದುವೆ ಮಾಡಿದರೆ ಮಗಳೂ ಸುಖವಾಗಿರುತ್ತಾಳೆ ಎಂದು ಅನ್ನಿಸಿ 2005ರ ಮೇ ತಿಂಗಳಿನಲ್ಲಿ ಮದುವೆ ಮಾಡಿಕೊಟ್ಟರು. ಮದುವೆಯ ಸಂದರ್ಭದಲ್ಲಿ ಅರ್ಧ ಕೆ.ಜಿ. ಬಂಗಾರದ ಒಡವೆ, ಒಂದು ಸೈಟು ಮತ್ತು ಮೂರು ಲಕ್ಷ ರೂ.ಗಳನ್ನು ವರದಕ್ಷಿಣೆಯಾಗಿ ಸಹ ಕೊಟ್ಟಿದ್ದರು. ಆದರೆ, ಧನದಾಹಿ ಅನಿಲ್‌ಗೆ ಇದರಿಂದ ತೃಪ್ತಿಯಾಗಿರಲಿಲ್ಲ. "ನನಗೆ ಸ್ಲಮ್‌ನಲ್ಲಿ ಜಾಗ ಕೊಟ್ಟಿದ್ದೀರಿ. ಈಗ ಕೋಣನಕುಂಟೆಯಲ್ಲಿ ಬೇರೆ ಸೈಟು ಕೊಡಿಸಿ" ಎಂದು ಮಾವನ ಮೇಲೆ ಒತ್ತಡ ತರಬೇಕೆಂದು ಹೆಂಡತಿಗೆ ಕಿರುಕುಳ ಕೊಡುತ್ತಿದ್ದ.

ಅದೂಅಲ್ಲದೆ, ರೂಪ-ಅನಿಲ್‌ಕುಮಾರ್‌ಗೆ ಹುಟ್ಟಿದ ಮಗು ಋತ್ವಿಕ್ ಮಾನಸಿಕವಾಗಿ, ದೈಹಿಕವಾಗಿ ಸದೃಢವಾಗಿಲ್ಲ. ಏಳು ತಿಂಗಳಿಗೇ ಸಿಜರಿನ್ ಮಾಡಿಸಿ ಹೊರತೆಗೆದ ಮಗುವದು. ಅದಕ್ಕೆ ಮಾನಸಿಕ ಮತ್ತು ದೈಹಿಕ ಕೊರತೆಯಿರುವುದರಿಂದ ಅದು ತನಗೆ ಬೇಡ ಎಂದು ಅನಿಲ್‌ಕುಮಾರ್ ಹಠ ಹಿಡಿದಿದ್ದ. ಅದನ್ನು ಕೊಲ್ಲುವಂತೆ ರೂಪಾಳಿಗೆ ಪೀಡಿಸುತ್ತಿದ್ದ. ಅದಕ್ಕೆ ಆಕೆ ಒಪ್ಪದಿದ್ದಾಗ ಅವಳ ಮೇಲಿನ ಕೋಪ ಈತನಿಗೆ ಇಮ್ಮಡಿಯಾಗಿ ಅವಳಿಗೆ ಕೊಡುವ ಹಿಂಸೆಯ ಪ್ರಮಾಣವೂ ಜಾಸ್ತಿಯಾಗಿಬಿಟ್ಟಿತು. ಅದು ಎಷ್ಟರಮಟ್ಟಿಗೆ ಹೋಗಿತ್ತೆಂದರೆ ಈಗ್ಗೆ ಹೆಚ್ಚೂಕಡಿಮೆ ಒಂದು ತಿಂಗಳ ಹಿಂದೆ ಹೆಂಡತಿ ರೂಪಾಳ ಬಾಯಲ್ಲಿ ಬಟ್ಟೆ ತುರುಕಿ, ಮುಖದ ಮೇಲೆ ತಲೆದಿಂಬನ್ನು ಒತ್ತಿ ಕೊಲೆ ಮಾಡುವುದಕ್ಕೂ ಆತ ಪ್ರಯತ್ನಿಸಿದ್ದ. ಇದೆಲ್ಲವನ್ನು ಕಣ್ಣಾರೆ ಕಂಡಿದ್ದ ಅನಿಲ್‌ಕುಮಾರ್‌ನ ಸ್ವಂತ ತಾಯಿಯೇ "ಇಲ್ಲೇ ಇದ್ದರೆ ಈ ರಾಕ್ಷಸ ನಿನ್ನನ್ನು ಕೊಂದುಬಿಡುತ್ತಾನಮ್ಮ. ನೀನು ತವರು ಮನೆಗೆ ಹೋಗಿಬಿಡು" ಎಂದು ಸೊಸೆ ರೂಪಾಳಿಗೆ ಹೇಳಿ ತವರಿಗೆ ಕಳಿಸಿಕೊಟ್ಟಿದ್ದರು ಎಂದರೆ ಆತ ಹೆಂಡತಿಗೆ ಅದೆಷ್ಟು ಹಿಂಸೆ ಕೊಟ್ಟಿರಬೇಡ?



ನಾಗಲಿಂಗಯ್ಯ

ಮಗಳ ಭವಿಷ್ಯ ಹೀಗೆ ಹಾಳಾಗುತ್ತಿರುವುದನ್ನು ನೋಡಿ ನಾಗಲಿಂಗಯ್ಯನವರಿಗೂ ಚಿಂತೆ ಶುರುವಾಗಿತ್ತು. ಇದ್ದ ಒಂದಿಷ್ಟು ಜಮೀನನ್ನು ಮಾರಿ ಅನಿಲ್‌ಗೆ ಒಂದು ಹೊಸ ಸೈಟು ಕೊಡಿಸುವ ಆಲೋಚನೆಯನ್ನೂ ಮಾಡಿದ್ದರು. ಅಷ್ಟುಹೊತ್ತಿಗಾಗಲೆ ಅನಿಲ್ ರಾಕ್ಷಸತನ ಜರಗನಹಳ್ಳಿಯ ಅವರ ಮನೆಯಲ್ಲಿ ಪ್ರದರ್ಶಿತಗೊಂಡುಬಿಟ್ಟಿತ್ತು.

■ ಕುಮಾರ್ ಬುರಡಿಕಟ್ಟಿ



ಇನ್ಸ್‌ಪೆಕ್ಟರ್ ವಿ.ಬಿ. ಭಾಸ್ಕರ್

## ಬಲೆಗೆ ಬಿದ್ದದ್ದು ಹೇಗೆ?

ಅತ್ತ ಜರಗನಹಳ್ಳಿಯ ಹೆಂಡತಿ ಮನೆಯಲ್ಲಿ ಉತ್ತರ ಕುಮಾರನ ಪೌರುಷ ಮೆರೆದ ಅನಿಲ್ ಕುಮಾರ್‌ಗೆ ಅದನ್ನು ಫೇಸ್ ಮಾಡುವಷ್ಟು ಕನಿಷ್ಠ ಗಂಡಸುತನವೂ ಇರಲಿಲ್ಲ. ಚಿಕ್ಕ ಪುಟ್ಟ ಪುಡಿ ರೌಡಿಗಳು ರಾತ್ರೋರಾತ್ರಿ ಅವಾಜ್ ಹಾಕಿ ಓಡಿ ಹೋಗುತ್ತಾರಲ್ಲ, ಅದೇ ರೀತಿಯಲ್ಲಿ ಈತ ಕೂಡ ಅಂದೇ ರಾತ್ರಿ ತನ್ನ ಗೂಂಡಾಪಡೆಯನ್ನು ಕಟ್ಟಿಕೊಂಡು ಪರಾರಿಯಾಗಿದ್ದ. ಪೆಟ್ಟು ತಿಂದ ಮಾವ ನಾಗಲಿಂಗಯ್ಯ ಬೆಳಗ್ಗೆ ಜೆಪಿ ನಗರ ಪೊಲೀಸ್ ಠಾಣೆಗೆ ದೂರು ಕೊಟ್ಟುಬಿಟ್ಟರು. ಅತ್ತ ಜರಗನಹಳ್ಳಿಯ ನಾಗಲಿಂಗಯ್ಯನವರ ಮನೆಯಲ್ಲಿ ಮಾಧ್ಯಮದವರು ಫೋಟೋ ಕ್ಲಿಕ್ಕಿಸುತ್ತಿದ್ದರೆ ಜೆ.ಪಿ.ನಗರ ಠಾಣೆಯ ಇನ್ಸ್‌ಪೆಕ್ಟರ್ ವಿ.ಬಿ.ಭಾಸ್ಕರ್ ಒಂದು ತಂಡ ರಚಿಸಿಕೊಂಡು ಆಗಲೇ ಅನಿಲ್‌ಕುಮಾರ್‌ನನ್ನು ಖೆಡ್ಡಾಕ್ಕೆ ಕೆಡವಲು ಬಲೆ ಹೆಣೆಯುತ್ತಿದ್ದರು. ಅನಿಲ್ ಕುಮಾರ್ ಮೇಲೆ ವರದಕ್ಷಿಣೆ ಕಿರುಕುಳ, ಅಕ್ರಮ ಪ್ರವೇಶ, ದರೋಡೆ, ಕೊಲೆಯತ್ನ, ಶಸ್ತ್ರಾಸ್ತ್ರ ಕಾಯಿದೆ ಹೀಗೆ ಬರೊಬ್ಬರಿ ಅರ್ಧ ಡಜನ್ ಕೇಸುಗಳನ್ನು ಫಿಟ್ ಮಾಡಿ ಎಫ್‌ಐಆರ್ ಹಾಕಿದರು; ಅನಿಲ್‌ಕುಮಾರ್‌ನ ಬಾಲ್ಯದ ಸ್ನೇಹಿತರಿಂದ ಹಿಡಿದು ಈಗ ಅವನಿಗಿರುವ ಸ್ನೇಹಿತರ ತನಕ ಎಲ್ಲರ ಪಟ್ಟಿಯೊಂದನ್ನು ಸಿದ್ಧಪಡಿಸಿ ಅವರ ವಿಳಾಸ, ಸಂಬಂಧಿಕರ ವಿಳಾಸ ಎಲ್ಲ ಪತ್ತೆ ಹಚ್ಚಿಬಿಟ್ಟಿದ್ದರು. ಕಟ್ಟ ಕಡೆಗೆ ಒಂದು ಶಾರ್ಟ್ ಲಿಸ್ಟ್ ತಯಾರಿಸಿಕೊಂಡು ಅವರ ಮೇಲೆ ಗಮನವಿರಿಸಿ ಕೂತಿದ್ದರು.

ಹೇಳಿ ಕೇಳಿ ಅನಿಲ್‌ಕುಮಾರ್ ಕೂಡ ಒಬ್ಬ ಪೊಲೀಸ್ ಆಫೀಸರ್. ಪೊಲೀಸರು ಅಪರಾಧಿಗಳನ್ನು ಹೇಗೆ ಹಿಡಿಯುತ್ತಾರೆ, ಏನೇನು ಕಾರ್ಯತಂತ್ರ ರೂಪಿಸುತ್ತಾರೆ ಅಂತ ಚೆನ್ನಾಗಿ ಗೊತ್ತು. ಅದಕ್ಕಾಗಿಯೇ ಆತ ಬೆಂಗಳೂರಿನಿಂದ ಜಾಗ ಖಾಲಿ ಮಾಡುವಾಗ ಕೇವಲ ತನ್ನ ಮೊಬೈಲಿನ ಸಿಮ್ ಕಾರ್ಡನ್ನು ಮಾತ್ರವಲ್ಲ ಇಡೀ ಮೊಬೈಲ್ ಸೆಟ್ಟನ್ನೇ ಬದಲಾಯಿಸಿಬಿಟ್ಟಿದ್ದ. ಆದರೆ, ಅದನ್ನೂ ಪತ್ತೆ ಹಚ್ಚುವುದಕ್ಕೆ ಭಾಸ್ಕರ್‌ಗೆ ಕಷ್ಟವಾಗಲಿಲ್ಲ. ಕೊನೆಗೆ ಆ ನಂಬರ್ ಯಾವ ಯಾವ ಊರುಗಳಲ್ಲಿ ಓಡಾಡುತ್ತಿದೆ ಎಂಬುದನ್ನು ಪತ್ತೆ ಮಾಡಿ ಆಯಾ ಊರುಗಳಲ್ಲಿದ್ದ ಅವನ ಗೆಳೆಯರ ಮೇಲೆ ಕಣ್ಣಿಟ್ಟರು. ಕೊನೆಗೆ ದೊಡ್ಡಬಳ್ಳಾಪುರ ರಸ್ತೆಯಲ್ಲಿರುವ ರಾಜಾನುಕುಂಟೆಯ ಕಂಟ್ರಿ ಕ್ಲಬ್‌ನಲ್ಲಿ ಠಿಕಾಣಿ ಹೂಡಿರುವುದು ಗೊತ್ತಾಯಿತು. ಅಲ್ಲಿಗೆ ಭಾಸ್ಕರ್ ತನ್ನ ಟೀಮ್ ಕರೆದುಕೊಂಡು ಲಗ್ಗೆಯಿಟ್ಟುಬಿಟ್ಟರು. ಪೊಲೀಸರ ವಾಸನೆ ತಿಳಿದಿದ್ದೇ ತಡ ಅನಿಲ್ ಕುಮಾರ್ ಮತ್ತವನ ಪುಡಿ ಗ್ಯಾಂಗ್ ಚಿಲ್ಲರೆ ರೌಡಿಗಳಂತೆ ರೆಸಾರ್ಟ್‌ನ ಬೇಲಿ ಹಾರಿ ಓಡಲಾರಂಭಿಸಿಬಿಟ್ಟರು. ಯಾವಾಗ ಭಾಸ್ಕರ್ ತಮ್ಮ ರಿವಾಲ್ವಾರ್ ತೆಗೆದು ವಾರ್ನ್ ಮಾಡಿದರೋ ಅವರೆಲ್ಲ ಕೈ ಮೇಲೆತ್ತಿ ನಿಂತರು. ಅವರ ಹೆಡೆಮುರಿ ಕಟ್ಟಿ ಪರಪ್ಪನ ಅಗ್ರಹಾರಕ್ಕೆ ಪಾರ್ಸಲ್ ಮಾಡಿಬಿಟ್ಟರು. ■

## ಕ್ಯಾತೆ ಎಸ್ಸೈ ಎಂದರೇನೇ ಸರಿ!

ಎಸ್ಸೈ ಅನಿಲ್ ಕುಮಾರ್‌ನನ್ನು ಇತ್ತೀಚೆಗೆ ಜನ ಕ್ಯಾತೆ ಎಸ್ಸೈ ಎಂದು ಕರೆಯಲಾರಂಭಿಸಿದ್ದು ಸುಳ್ಳೇನಲ್ಲ. ಅದಕ್ಕೆ ಕಾರಣವೂ ಇಲ್ಲದಿಲ್ಲ. ಕಾಲು ಕೆದರಿ ಜಗಳ ತೆಗೆಯುವುದರಲ್ಲಿ ಈತ ಎತ್ತಿದ ಕೈ. ತಾನು ಡ್ಯೂಟಿಯಲ್ಲಿರದೇ ಸಿವಿಲ್ ಡ್ರೆಸ್‌ನಲ್ಲಿ ಅಪರಿಚಿತ ರಸ್ತೆಯಲ್ಲಿ ಓಡಾಡುವಾಗಲೂ ಜನ ತನ್ನನ್ನು ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಎಂದು ಗುರ್ತಿಸಬೇಕು, ಅದಕ್ಕೆ ತಕ್ಕಷ್ಟು ಮರ್ಯಾದೆ ಕೊಡಬೇಕು, ಭಯ-ಭಕ್ತಿಯಿಂದ ವರ್ತಿಸಬೇಕು ಎಂದು ಬಯಸುವ ಚಪಲ ಇವನಿಗಿದೆ. ಇದಕ್ಕಾಗಿಯೇ ರಸ್ತೆ ಬದಿಯಲ್ಲಿದ್ದವರೊಂದಿಗೆ ಆಗಾಗ ಕಾಲು ಕೆರೆದು ಜಗಳ ತೆಗೆದು, ಅವರ ಕೆನ್ನೆಗೆ ಬಾರಿಸಿ ನಂತರ ತನ್ನ ಐಡೆಂಟಿಟಿ ಕಾರ್ಡ್ ತೋರಿಸುತ್ತಿದ್ದ.



ಹೀಗೆಯೇ ಒಮ್ಮೆ ಜರಗನಹಳ್ಳಿಯಲ್ಲಿರುವ ತನ್ನ ಹೆಂಡತಿಯ ತವರು ಮನೆಗೆ ಬಂದಾಗ ರಾತ್ರಿ ರಸ್ತೆಬದಿಯಲ್ಲಿ ನಿಂತಿದ್ದ ಹುಡುಗರೊಂದಿಗೆ ಜಗಳ ತೆಗೆದು, ತನ್ನ ಐಡೆಂಟಿಟಿ ಕಾರ್ಡ್ ತೋರಿಸಿ ಅವರಿಗೆ ವಿಪರೀತವಾಗಿ ಹೊಡೆದಿದ್ದ. ಇದರಿಂದ ರೊಚ್ಚಿಗೆದ್ದಿದ್ದ ಆ ಹುಡುಗರು ಅವನು ಒಬ್ಬನೇ ಇರುವ ಸಮಯ ನೋಡಿ ಚೆನ್ನಾಗಿ ಬಾರಿಸಿ ಕೈಕಾಲು ಮುರಿಯಬೇಕೆಂದು ಸ್ಕೆಚ್ ಹಾಕಿದ್ದರು. ಕೊನೆಗೆ ಆತ ನಾಗಲಿಂಗಯ್ಯನವರ ಅಳಿಯ ಎಂದು ಗೊತ್ತಾದ ಮೇಲೆ ಹೋಗಲಿ ಬಿಡು ಎಂದು ಸುಮ್ಮನಾಗಿದ್ದರು.

ತನ್ನ ಈ ರೀತಿಯ ಕ್ಯಾತೆಗಳಿಗೆ ಹೆಸರುವಾಸಿಯಾದ ಈತ ಈ ಹಿಂದೆ ಇದೇ ಕಾರಣಕ್ಕಾಗಿ ಸಸ್ಪೆಂಡ್ ಕೂಡ ಆಗಿದ್ದ. ದೊಡ್ಡಕಲ್ಲಸಂದ್ರದ ರಿಂಗ್‌ರೋಡಿನಲ್ಲಿ ನಾಗರಾಜ್ ಎಂಬ ಆಟೋಚಾಲಕನ ಮರ್ಡರ್ ಆದಾಗ ಆ ಕೇಸಿಗೆ ಸಂಬಂಧಪಟ್ಟಂತೆ ಕಾಟನ್‌ಪೇಟೆ ಪೊಲೀಸ್ ಠಾಣೆ ಪ್ರಸನ್ನಕುಮಾರ್‌ನೊಂದಿಗೆ ಜಟಾಪಟಿಗಿಳಿದಿದ್ದ. ಮುಂದೆ ಚಿನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆಗೆ ವರ್ಗಾವಣೆಯಾದಾಗಲೂ ಮೇಲಧಿಕಾರಿಗಳೊಂದಿಗೆ ಜಗಳ ತೆಗೆದು ಸುದ್ದಿಯಾಗಿದ್ದ. ■

# ಚಿಕ್ಕಮಗಳೂರು: ಕೆನರಾ ಬ್ಯಾಂಕ್‌ನ ಮಕ್ಮಲ್ ಟೋಪಿ!


ಮ್ಯಾನೇಜರ್ ಪಿ.ಪಾಲ್

ಹೊಟ್ಟೆ ಬಟ್ಟೆ ಕಟ್ಟಿ ಬ್ಯಾಂಕಿನಲ್ಲಿ ಕೂಡಿಟ್ಟ ಹಣವನ್ನು ಬ್ಯಾಂಕೇ ನುಂಗಿ ನೀರು ಕುಡಿದರೆ ಗತಿಯೇನು? ಇದನ್ನು ನಮಗೆ ನಂಬಲು ಕಷ್ಟವಾಗುತ್ತದಾದರೂ ಚಿಕ್ಕಮಗಳೂರಿನ ಜನರು ಅನುಭವಿಸಿದ ವಾಸ್ತವವಿದು. ಚಿಕ್ಕಮಗಳೂರು-ಕಡೂರು ರಸ್ತೆಯಲ್ಲಿರುವ ಹಿರೇಗೌಜ ಎಂಬ ಊರಿನಲ್ಲಿರುವ ದೊಡ್ಡ ಕೆನರಾ ಬ್ಯಾಂಕಿನ ಸಣ್ಣ ಮನುಷ್ಯರು ಎಸಗಿದ ವಂಚನೆಯಿಂದ ಈಗ ಬರೊಬ್ಬರಿ ಎಪ್ಪತ್ತು ಮಂದಿ ಪರದಾಡುತ್ತಿದ್ದಾರೆ. ಇವರೆಲ್ಲಾ ವರ್ಷಾನುಗಟ್ಟಲೆ ಹೊಟ್ಟೆ ಬಟ್ಟೆ ಕಟ್ಟಿ ಕೂಡಿಟ್ಟ ಹಣವನ್ನು ಬ್ಯಾಂಕಿನ ಅಧಿಕಾರಿಗಳೇ ಗುಳುಂ ಮಾಡಿದ್ದಾರೆ. ಅದೂ ಏನಿಲ್ಲವೆಂದರೂ ಬರೊಬ್ಬರಿ ಒಂದು ಕೋಟಿ. ಆದರೆ, ಇಂತಹದ್ದೊಂದು ಹಗರಣ ಸ್ಪಷ್ಟವಾಗಿ ಬಯಲಿಗೆ ಬರುವ ಮುನ್ನವೇ ಹಗರಣದ ಕೇಂದ್ರ ಬಿಂದುವಾಗಿದ್ದ ಕ್ಯಾಶಿಯರ್ ಬಸವರಾಜು ಸತ್ತು ಹೋಗಿದ್ದಾನೆ. ಆತ ಹೃದಯಾಘಾತದಿಂದ ಸತ್ತ ಎಂದು ಹೇಳಲಾಗುತ್ತಿದೆಯಾದರೂ ಅದೊಂದು ಆತ್ಮಹತ್ಯೆ ಎಂಬ ಬಲವಾದ ಅಭಿಪ್ರಾಯ ಕೇಳಿಬರುತ್ತಿದೆ.

## ನಡೆದದ್ದೇನು?

ಹಿರೇಗೌಜ ಅಷ್ಟೇನು ದೊಡ್ಡದಲ್ಲದ ಊರು. ಆ ಊರು ಮತ್ತು ಸುತ್ತಮುತ್ತಲಿನ ಹಳ್ಳಿಯ ಜನ ಕೂಡ ಅಷ್ಟೇನು ಶ್ರೀಮಂತರಲ್ಲ, ಅವರೆಲ್ಲರೂ ಮೂಲತಃ ರೈತಾಪಿ ಕುಟುಂಬದವರಾಗಿದ್ದರಿಂದ ತಮ್ಮ ಹಣಕಾಸು ಅಗತ್ಯಗಳನ್ನು ಪೂರೈಸಿಕೊಳ್ಳುವುದಕ್ಕೆ ಕೆನರಾ ಬ್ಯಾಂಕಿನ ಹಿರೇಗೌಜ ಬ್ರಾಂಚನ್ನೇ ಅವಲಂಬಿಸಿದ್ದರು. ಸುತ್ತಮುತ್ತಲಿನ ಸುಮಾರು ಮೂವತ್ತು ಹಳ್ಳಿಯ ಒಂದು ಸಾವಿರಕ್ಕೂ ಹೆಚ್ಚು ಜನ ತಮಗಿರುವ ಅಲ್ಪಸ್ವಲ್ಪ ಆದಾಯದಲ್ಲಿಯೇ ಒಂದಿಷ್ಟನ್ನು ಭವಿಷ್ಯಕ್ಕಾಗಿ ಈ ಬ್ಯಾಂಕಿನಲ್ಲಿ ಕೂಡಿಟ್ಟಿದ್ದರು. ಇಲ್ಲಿಯತನಕ ರೈತರೊಂದಿಗೆ ಉತ್ತಮ ಸಂಬಂಧವನ್ನೇನೋ ಹೊಂದಿತ್ತು, ಆ ಕಾರಣಕ್ಕಾಗಿಯೇ ಜನ ಇದನ್ನು ನಂಬಿ ಹಣ ಕಟ್ಟಿದ್ದರು. ತಾವು ತಮ್ಮ ಎಸ್‌ಬಿ ಖಾತೆಯಲ್ಲಿ ಹಣ ಕಟ್ಟಿರುವುದಕ್ಕೆ ಪಾಸ್‌ಬುಕ್ ಮತ್ತು ಚಲನ್ ಎರಡರಲ್ಲೂ ದಾಖಲೆಗಳಿವೆ. ಆದರೆ, ಖಾತೆಯಲ್ಲಿ ಮಾತ್ರ ಹಣವಿಲ್ಲ, ಅದೆಲ್ಲ ಎಲ್ಲಿ ಹೋಯಿತು ಎಂಬುದು ಯಾರಿಗೂ ಗೊತ್ತಿಲ್ಲ.

ಈ ಬ್ಯಾಂಕಿನ ಗ್ರಾಹಕರಲ್ಲೊಬ್ಬರಾದ ಸಿದ್ದೇಗೌಡ ಎಂಬುವವರು ಏಪ್ರಿಲ್ ಕೊನೆ ವಾರದಲ್ಲಿ ತಾವು ಬ್ಯಾಂಕಿನಲ್ಲಿ ಉಳಿತಾಯ ಮಾಡಿದ್ದ 31,200 ರೂ.ಗಳಲ್ಲಿ ಒಂದಿಷ್ಟು ಹಣವನ್ನು ಡ್ರಾ ಮಾಡಿಸಿಕೊಳ್ಳುವುದಕ್ಕೆ ಪಾಸ್ ಬುಕ್ ಹಿಡಿದು ಬಂದಿದ್ದರು. ಹಾಗೆಯೇ, ಇನ್ನೊಬ್ಬ ಖಾತೆದಾರ ಚಿಕ್ಕಮಗಳೂರಿನ ಏಜಿನ್ ಫರ್ನಾಂಡಿಸ್ ತಮ್ಮ ಖಾತೆಯಲ್ಲಿದ್ದ 5,50,000 ರೂ.ಗಳಲ್ಲಿ ಒಂದಿಷ್ಟು ಡ್ರಾ ಮಾಡಿಕೊಳ್ಳಲು ಬಂದಿದ್ದರು. ಆದರೆ, ಸಿದ್ದೇಗೌಡರ ಖಾತೆಯಲ್ಲಿ ಕೇವಲ 200 ರೂ. ಹಾಗೂ ಫರ್ನಾಂಡಿಸ್ ಖಾತೆಯಲ್ಲಿ ಕೇವಲ 50,000 ರೂ. ಮಾತ್ರ ಉಳಿದಿರುವುದನ್ನು ನೋಡಿ ಕಂಗಾಲಾಗಿ ಹೋದರು. ಬ್ಯಾಂಕಿನ ವ್ಯವಸ್ಥಾಪಕ ಪಿ.ಪಾಲ್ ಅವರನ್ನು ವಿಚಾರಿಸಿದರೂ ಏನೂ ಪ್ರಯೋಜನವಾಗಲಿಲ್ಲ.

ಆದರೆ, ಕೆನರಾ ಬ್ಯಾಂಕಿನಲ್ಲಿ ನಡೆದ ವಂಚನೆ ಕಾಡ್ಗಿಚ್ಚಿನಂತೆ ಹಬ್ಬಲು ಬಹಳ ಸಮಯ ಬೇಕಾಗಲಿಲ್ಲ, ಆ ಬ್ಯಾಂಕಿನಲ್ಲಿ ಅಕೌಂಟ್ ಹೊಂದಿದ್ದ ಗ್ರಾಹಕರೆಲ್ಲಾ ಗಾಬರಿಯಿಂದ ಬ್ಯಾಂಕಿಗೆ ಲಗ್ಗೆಯಿಟ್ಟು ವಿಚಾರಿಸಿದರೆ ಸುಮಾರು ಎಪ್ಪತ್ತು ಮಂದಿಯ ಹಣ ಗುಳುಂ ಆಗಿರುವುದು ಗೊತ್ತಾಯಿತು. ಆಗಲೇ ಮ್ಯಾನೇಜರ್ ಪಿ.ಪಾಲ್ ಕೂಡ ನಿದ್ರೆಯಿಂದ ಎದ್ದದ್ದು!


## ಅವನು ಕ್ಯಾಶಿಯರ್ ಬಸವರಾಜ್!

ಇಷ್ಟೊಂದು ದೊಡ್ಡ ಪ್ರಮಾಣದ ವಂಚನೆಯನ್ನು ಒಂದಿಷ್ಟು ಕೆದಕಿದರೆ ಗೊತ್ತಾಗುತ್ತದೆ ಕ್ಯಾಶಿಯರ್ ಬಸವರಾಜನೇ ಅದರ ಕೇಂದ್ರಬಿಂದು ಎಂದು. ಆದರೆ, ದುರಾದೃಷ್ಟ ಎಂದರೆ ಈ ಹಗರಣ ಬೆಳಕಿಗೆ ಬರುವ ಎರಡು ದಿನಗಳ ಮುಂಚೆಯೇ ಆತ ಬ್ಯಾಂಕಿನಲ್ಲಿ ಕರ್ತವ್ಯದಲ್ಲಿದ್ದಾಗಲೇ ಹೆಣವಾಗಿ ಹೋಗಿದ್ದ.

ಬಸವರಾಜು ಗ್ರಾಹಕರಿಗೆ ಟೋಪಿ ಹಾಕುವುದಕ್ಕೆ ತುಂಬಾ ಚಾಣಾಕ್ಷತನದ ಹಾದಿಯನ್ನು ಕಂಡುಕೊಂಡಿದ್ದ. ಯಾವ್ಯಾವ ಗ್ರಾಹಕರು ಬಹಳಷ್ಟು ಸಲ ಬ್ಯಾಂಕಿಗೆ ಬರುತ್ತಾರೆ? ಯಾರು ವರ್ಷದಲ್ಲಿ ಒಂದೋ ಅಥವ ಎರಡೋ ಬಾರಿ ಮಾತ್ರ ಬರ್ತಾರೆ? ಯಾರ್‍ಯಾರ ಅಕೌಂಟಿನಲ್ಲಿ ಎಷ್ಟೆಷ್ಟು ಹಣ ಇದೆ - ಹೀಗೆ ತನಗೆ ಅವಶ್ಯವಿರುವ ಎಲ್ಲಾ ಮಾಹಿತಿಯನ್ನು ಈತ ಸ್ಟಡಿ ಮಾಡಿದ್ದ. ಬ್ಯಾಂಕಿಗೆ ವಿರಳವಾಗಿ ಭೇಟಿ ನೀಡುವ ಗ್ರಾಹಕರನ್ನೇ ತನ್ನ ವಂಚನೆಯ ಟಾರ್ಗೆಟ್ ಮಾಡಿಕೊಂಡಿದ್ದ.

ಈತ ಗ್ರಾಹಕರನ್ನು ವಂಚಿಸುವುದಕ್ಕೆ ಅಳವಡಿಸಿದ ಮಾಡಸ್ ಅಪರೆಂಡಿಯಿಂದಾಗಿಯೇ ಈ ಹಗರಣ ಈತನಕ ಬಯಲಾಗಿರಲಿಲ್ಲ. ಗ್ರಾಹಕರಿಗೆ ಅನುಮಾನ ಬಾರದಿರಲೆಂದು ಅವರು ಹಣ ಕಟ್ಟಿದಾಗಲೆಲ್ಲಾ ಅವರಿಗೆ ಶೀಲು ಹಾಕಿದ ಚಲನ್ ನೀಡಿದ್ದಾನೆ; ಅವರ ಪಾಸ್‌ಪುಸ್ತಕಕ್ಕೆ ಕಟ್ಟಿದ ಅಷ್ಟೂ ಮೊತ್ತವನ್ನು ನಮೂದಿಸಿಕೊಟ್ಟಿದ್ದಾನೆ. ಚಲನ್ ಮತ್ತು ಪಾಸ್ ಬುಕ್ ಎರಡರಲ್ಲಿಯೂ ತಾವು ಕಟ್ಟಿದ ಹಣ ನಮೂದಿತಗೊಂಡ ಮೇಲೆ ಯಾರು ತಾನೆ ಅನುಮಾನ ಪಡ್ತಾರೆ ಹೇಳಿ? ಆದರೆ, ಆತ ಬ್ಯಾಂಕಿನ ಲೆಡ್ಜರ್‌ಪುಸ್ತಕದಲ್ಲಿ ಇದನ್ನು ನಮೂದಿಸುತ್ತಿರಲಿಲ್ಲ! ತನ್ನದೇ ಆದ ಪ್ರತ್ಯೇಕ ಲೆಡ್ಜರ್ ಒಂದನ್ನು ತಂದಿಟ್ಟುಕೊಂಡು ಅದರಲ್ಲಿ ನಮೂದಿಸಿಕೊಳ್ಳುತ್ತಿದ್ದ.

ಯಾರಾದರೂ ಹಣ ಡ್ರಾ ಮಾಡಿಕೊಳ್ಳುವುದಕ್ಕೆ ಚೆಕ್ ಹಿಡಿದುಕೊಂಡು ಬಂದರೆ "ನಾಳೆ ಬನ್ನಿ" ಎಂಬುದು ಈತನ ಮಾಮೂಲಿ ಉತ್ತರವಾಗಿತ್ತು. ಮರುದಿನ ಮತ್ತೆ ಅವರು ಬಂದಾಗ ಎಲ್ಲಿಂದಲೋ ಹಣ ಹೊಂದಿಸಿ ಕೊಟ್ಟು ಕಳಿಸುತ್ತಿದ್ದ. ಅವರು ಡ್ರಾ ಮಾಡಿದ ಮೊತ್ತವನ್ನು ತನ್ನ ಪ್ರತ್ಯೇಕ ಲೆಡ್ಜರ್ ಪುಸ್ತಕದಲ್ಲಿ ನಮೂದಿಸಿ ಅಕೌಂಟಿನ ಬ್ಯಾಲೆನ್ಸ್ ಸಿದ್ಧಪಡಿಸಿಕೊಂಡಿರುತ್ತಿದ್ದ. ಆದರೆ, ಇದನ್ನೆಲ್ಲಾ ಬ್ಯಾಂಕಿನ ಅಧಿಕೃತ ಲೆಡ್ಜರ್ ಪುಸ್ತಕದಲ್ಲಿ ನಮೂದಿಸುತ್ತಲೇ ಇರಲಿಲ್ಲ. ಅಂದರೆ, ಬ್ಯಾಂಕಿನೊಳಗೊಂದು ಮಿನಿ ಬ್ಯಾಂಕ್ ವ್ಯವಸ್ಥೆಯನ್ನು ಈತ ಸೃಷ್ಟಿಸಿಕೊಂಡಿದ್ದ!


ಎಚ್.ಕೆ.ಶಶಿಧರ್

ಈತನ ವಂಚನೆಗೆ ಕೇವಲ ಬಿಡಿ ಬಿಡಿ ಗ್ರಾಹಕರು ಮಾತ್ರವಲ್ಲ, ಚಿಕ್ಕಮಗಳೂರಿನ ಕೆಲವು ಫೈನಾನ್ಸುಗಳೂ ಬಲಿಯಾಗಿವೆ. ಭೂಮಿ ಫೈನಾನ್ಸ್‌ನ ಮಾಲಿಕ ವಿಶ್ವನಾಥ್ ಸೇರಿದಂತೆ ಮೂರು ಫೈನಾನ್ಸುಗಳ ಮಾಲಿಕರಿಗೆ ತಲಾ ಹತ್ತು ಲಕ್ಷ ಟೋಪಿ ಹಾಕಿದ್ದಾನೆ ಈ ಬಸವರಾಜು.

## ಆರು ವರ್ಷ ರಜೆಯೇ ಹಾಕಿರಲಿಲ್ಲ!

ಇಷ್ಟೆಲ್ಲಾ ರಂಪ ಆಗುವುದಕ್ಕೆ ಮೊದಲೇ ಇಬ್ಬರು ರೈತರು ತಮ್ಮ ಖಾತೆಯಲ್ಲಿದ್ದ ಹಣ ಮಾಯವಾಗಿದೆ ಎಂದು ದೂರಿದ್ದರು. ಆಗಲೇ ಬ್ಯಾಂಕಿನ ಈ ಹಿಂದಿನ ಅಧ್ಯಕ್ಷ ಎಚ್.ಕೆ.ಶಶಿಧರ್‌ಗೆ ಹಗರಣದ ವಾಸನೆ ಬಡಿದು ಮ್ಯಾನೇಜರ್ ಪಿ.ಪಾಲ್ ಅವರನ್ನು ಸಂಪರ್ಕಿಸಿ ಈ ಬಗ್ಗೆ ಎಚ್ಚರಿಸಿದ್ದರು. ಆಗಲೇ ಬಸವರಾಜ್ ಆ ಇಬ್ಬರೂ ರೈತರ ಕಾಲಿಗೆ ಬಿದ್ದು ಮೇಲಿನ ಅಧಿಕಾರಿಗಳಿಗೆ ಲಿಖಿತ ದೂರು ಕೊಡದಂತೆ ಕಣ್ಣೀರಿಟ್ಟಿದ್ದ. ಮರುದಿನವೇ ಆ ರೈತರ ಖಾತೆಯಲ್ಲಿದ್ದ ಹಣವೆಲ್ಲ ಬಡ್ಡಿ ಸಮೇತವಾಗಿ ಪ್ರತ್ಯಕ್ಷವಾಗಿತ್ತು. ರೈತರೂ ಕೂಡ ತಮ್ಮ ಹಣ ತಮಗೆ ವಾಪಾಸ್ಸು ಸಿಕ್ಕಿತಲ್ಲ ಎಂಬ ಖುಷಿಯಲ್ಲಿ ಬಸವರಾಜ್ ವಿರುದ್ಧ ದೂರು ಕೊಡುವ ಗೊಡವೆಗೆ ಹೋಗಿರಲಿಲ್ಲ. ಮ್ಯಾನೇಜರ್ ಪಿ.ಪಾಲ್ ಆವತ್ತೇ ತನ್ನ ಕುಂಭಕರ್ಣ ನಿದ್ರೆಯಿಂದ ಎಚ್ಚರಗೊಳ್ಳಬೇಕಿತ್ತು. ಆತನ ಉದಾಸೀನವೇ ಈವೊತ್ತು ಇಷ್ಟೊಂದು ರಂಪವಾಗಲು ಕಾರಣ ಎಂದರೆ ತಪ್ಪಾಗಲಾರದು.

ಬಸವರಾಜ್ ಒಂದಿಷ್ಟು ದಿನ ಸುಮ್ಮನಿದ್ದವನಂತೆ ಕಂಡನಾದರೂ ಬಹುಬೇಗ ತನ್ನ ಹಳೇ ಚಾಳಿ ಶುರುವಿಟ್ಟುಕೊಂಡಿದ್ದ. ತಾನು ಮಾಡುತ್ತಿರುವ ದಂಧೆ ಬೆಳಕಿಗೆ ಬರಬಾರದೆಂದು ಕಳೆದ ಆರು ವರ್ಷಗಳಲ್ಲಿ ಆತ ಒಮ್ಮೆಯೂ ರಜೆ ಹಾಕಿರಲಿಲ್ಲ! ಇದರ ಉದ್ದೇಶ ಎರಡಿರಬಹುದು. ಒಂದು, ತಾನೊಬ್ಬ ನಿಷ್ಠಾವಂತ ನೌಕರ ಎಂದು ತೋರಿಸಿಕೊಳ್ಳುವುದು; ಎರಡು, ತಾನು ರಜೆಯ ಮೇಲೆ ಹೋದಾಗಲೇ ತಾನು ಯಾವ ಖಾತೆಯಿಂದ ಹಣವನ್ನು ಗುಳುಂ ಮಾಡಿದ್ದಾನೋ ಅದೇ ಖಾತೆದಾರ ಹಣ ಬಿಡಿಸಿಕೊಳ್ಳಲು ಬಂದುಬಿಟ್ಟರೆ ಬ್ಯಾಂಕಿನಲ್ಲಿದ್ದ ಕರ್ತವ್ಯನಿರತ ಕ್ಯಾಶಿಯರ್‌ಗೆ ಮತ್ತು ಅವನಿಂದ ಇಡೀ ಬ್ಯಾಂಕಿಗೆ ತನ್ನ ಮೋಸ ಗೊತ್ತಾಗಿಬಿಡುತ್ತದೆಯಾದ್ದರಿಂದ ಅದನ್ನು ತಡೆಯುವುದು. ಅಂತೂ ಆರು ವರ್ಷಗಳ ಕಾಲ ಚಿಕ್ಕದಾಗಿ ಮೆಂಟೇನ್ ಮಾಡಿಕೊಂಡೇ ಬಂದಿದ್ದ ಈ ಬಸವರಾಜ್.

## ಕರ್ತವ್ಯನಿರತವಾಗಿದ್ದಾಗಲೇ ಸತ್ತುಹೋದ!

ಅವತ್ತು ಏಪ್ರಿಲ್ 23. ಅಂದರೆ ಬ್ಯಾಂಕಿನ ಹಗರಣ ಹೊರಬೀಳುವ ಕೇವಲ ಎರಡು ದಿನ ಮುಂಚೆ. ಬಸವರಾಜ್ ಬ್ಯಾಂಕಿಗೆ ಬರುವ ಮೊದಲು ತನ್ನಲ್ಲಿದ್ದ ಬಂಗಾರದ ಸರ, ಉಂಗುರ, ವಾಚು ಮುಂತಾದ ಅಮೂಲ್ಯ ಮತ್ತು ಬೆಲೆ ಬಾಳುವ ವಸ್ತುಗಳನ್ನು ಮನೆಯಲ್ಲಿಯೇ ಬಿಟ್ಟು ಬ್ಯಾಂಕಿಗೆ ಬಂದಿದ್ದಾನೆ. ಬ್ಯಾಂಕಿಗೆ ಬಂದು ಇನ್ನೂ ಒಂದು ತಾಸು ಆಗಿರಲಿಲ್ಲ, ಆತ ಕುಳಿತಲ್ಲಿಯೇ ಹೆಣವಾಗಿದ್ದ.

ಅದನ್ನು ಹೃದಯಾಘಾತ ಎಂದು ಹೇಳಲಾಯಿತು. ಜನ ಅದನ್ನು ನಂಬಿದರು. ಆದರೆ, ಯಾವಾಗ ಅವನ ಟೋಪಿ ಹಾಕುವ ಕೆಲಸ ಬಯಲಿಗೆ ಬಂತೋ ಅದೊಂದು ಆತ್ಮಹತ್ಯೆ ಎಂದು ಗಾಢವಾಗಿ ಹಬ್ಬತೊಡಗಿತು. ಬ್ಯಾಂಕಿಗೆ ಬರುವ ಮುನ್ನ ಆತ ಎಲ್ಲ ಅಮೂಲ್ಯ ವಸ್ತುಗಳನ್ನು ಮನೆಯಲ್ಲಿಟ್ಟು ಬಂದಿರುವುದು ಇದಕ್ಕೆ ಮತ್ತಷ್ಟು ಇಂಬು ಕೊಡುತ್ತದೆ.

ಪ್ರಾಯಶಃ ತಾನು ಮಾಡಿದ ಅಪರಾಧ ಇನ್ನೇನು ಬಯಲಿಗೆ ಬಂದೇ ಬಿಡುತ್ತೆ ಎಂಬುದು ಬಸವರಾಜ್‌ಗೆ ಗೊತ್ತಾಗಿರಬೇಕು. ತಾನು ತಪ್ಪಿಸಿಕೊಳ್ಳಲು ಯಾವುದೇ ದಾರಿ ಕಾಣದಿದ್ದಾಗ ಆತ್ಮಹತ್ಯೆಯ ದಾರಿಯನ್ನು ಆತ ಕಂಡುಕೊಂಡಿರಬೇಕು.

ಈಗ ಕೋಟೆ ಸೂರೆಗೈದ ಮೇಲೆ ದಿಡ್ಡಿ ಬಾಗಿಲು ಹಾಕಿದ್ದಾರೆ. ಬ್ಯಾಂಕಿನ ವಂಚನೆಯ ಬಗ್ಗೆ ಹಲವಾರು ಸಂಘಸಂಸ್ಥೆಗಳು, ಗ್ರಾಹಕರು ಜೋರಾಗಿ ಪ್ರತಿಭಟಿಸಿದ ಮೇಲೆ ಈಗ ಮ್ಯಾನೇಜರ್ ಪಿ.ಪಾಲ್ ಅವರನ್ನು ಅಮಾನತ್ತುಗೊಳಿಸಿ ಹನ್ನೆರಡು ಉನ್ನತಾಧಿಕಾರಿಗಳ ತಂಡ ರಚಿಸಿ ತನಿಖೆ ನಡೆಸಲಾಗುತ್ತಿದೆ. ಗ್ರಾಹಕರು ಹಣ ಕಟ್ಟಿರುವ ಬಗ್ಗೆ ದಾಖಲೆಗಳಿದ್ದರೆ ಅವರ ಹಣವನ್ನು ಮರಳಿಸಲಾಗುವುದು ಎಂದು ಹೇಳಲಾಗುತ್ತಿದೆ. ಆದರೆ, ಅದಕ್ಕೆ ಬಡ್ಡಿಯನ್ನೂ ಕೊಡಬೇಕು ಎಂಬ ಬೇಡಿಕೆಯ ಬಗ್ಗೆ ಯಾರೂ ಚಕಾರವೆತ್ತುತ್ತಿಲ್ಲ.

■ ಅಜೀಜ್ ಕಿರಗುಂದ

# ದಿವಾಳಿಯೆದ್ದ ಕೆಸಿಸಿ ಬ್ಯಾಂಕಿಗೆ ಏಳು ವರ್ಷಗಳ ನಂತರ ಚುನಾವಣೆ

ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಹೆಚ್ಚೂಕಡಿಮೆ ಮೂರು ಲಕ್ಷ ರೈತರ ಬದುಕಿಗೆ ಆಸರೆಯಂತಿದ್ದ ಧಾರವಾಡದ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ಗೆ (ಕೆಸಿಸಿ ಬ್ಯಾಂಕ್) ಏಳು ವರ್ಷಗಳ ನಂತರ ಮತ್ತೆ ರೈತ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಭಾಗ್ಯ ಬಂದಿದೆ. ಜುಲೈ 27ಕ್ಕೆ ಧಾರವಾಡದ ಲಿಂಗಾಯತ ಟೌನ್ ಹಾಲ್‌ನಲ್ಲಿ ಚುನಾವಣೆ ನಡೆಯಲಿದ್ದು ಅಂದೇ ಫಲಿತಾಂಶ ಕೂಡ ಹೊರಬೀಳಲಿದೆ.

ಎಸ್.ವಿ.ಮೆಣಸಿನಕಾಯಿ ನೇತೃತ್ವದಲ್ಲಿ 1816ರಲ್ಲಿ ಪ್ರಾರಂಭವಾದ ಕೆಸಿಸಿ ಬ್ಯಾಂಕ್ ಮೊದಲಿಗೆ ಅವಿಭಜಿತ ಧಾರವಾಡ ಜಿಲ್ಲೆ ಮತ್ತು ಬೆಳಗಾವಿ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿತ್ತು. ಆದರೆ, ರೆಡ್ಡಿ ಸಾಮ್ರಾಜ್ಯದ ಕುತಂತ್ರದಿಂದಾಗಿ ಅದು ಸ್ಥಾಪನೆಯಾದ ಎರಡೇ ವರ್ಷದಲ್ಲಿ ಕೇವಲ ಧಾರವಾಡ ಜಿಲ್ಲೆಗೆ ಮಾತ್ರ ಸೀಮಿತವಾಗಿಬಿಟ್ಟಿತು (ಅಂದರೆ, ಈಗಿನ ಹಾವೇರಿ, ಗದಗ ಮತ್ತು ಧಾರವಾಡ). ಇದು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ರಾಜ್ಯದ ಇತರ ಅನೇಕ ಬ್ಯಾಂಕುಗಳಿಗೂ ಸಾಲ ನೀಡುತ್ತಿತ್ತು, ಅನೇಕ ಸಹಕಾರಿ ಬ್ಯಾಂಕುಗಳು ಇದರಲ್ಲಿ ಠೇವಣಿ ಇಟ್ಟಿದ್ದವು. ಇಂತಹ ಉತ್ತಮ ಬ್ಯಾಂಕು 80ರ ದಶಕದಲ್ಲಿ ಪ್ರಾರಂಭವಾದ ಗುಂಪುಗಾರಿಕೆಯ ಕಾರಣದಿಂದಾಗಿ ಕ್ಷೀಣಿಸುತ್ತಾ ಹೋಗಿ 2001ರ ಹೊತ್ತಿಗೆ ದಿವಾಳಿಯ ಅಂಚಿಗೆ ಬಂದು ನಿಂತಿತ್ತು.

ಮೂರು ಜಿಲ್ಲೆಗಳ 526 ವ್ಯವಸಾಯ ಸಹಕಾರ ಸಂಘಗಳ ಸದಸ್ಯತ್ವ ಹೊಂದಿರುವ ಕೆಸಿಸಿ ಬ್ಯಾಂಕಿನ ನೆರವಿನಲ್ಲಿ ಆರು ಸಹಕಾರಿ ನೂಲಿನ ಗಿರಣಿ, ಮೂರು ಎಣ್ಣೆ ಗಿರಣಿ, ಮೂರು ಸಹಕಾರಿ ಕಾರ್ಖಾನೆಗಳು ನಡೆಯುತ್ತಲಿದ್ದವು. ಇವೆಲ್ಲವೂ ಜೆಡಿಎಸ್ ಆಡಳಿತದಲ್ಲಿ ದೊಡ್ಡಗೌಡರ ಹಿಡಿತಕ್ಕೆ ಬಂದುಬಿಟ್ಟವು. ಗದಗ, ಹುಲಕೋಟಿ, ಹುಬ್ಬಳ್ಳಿ, ಧಾರವಾಡ, ಹಾವೇರಿ, ರಾಣೇಬೆನ್ನೂರುಗಳಲ್ಲಿದ್ದ ನೂಲಿನ, ಎಣ್ಣೆಯ, ಹತ್ತಿಯ ಗಿರಣಿಗಳು ಈ ಬ್ಯಾಂಕಿನಿಂದ ಕೋಟಿ ಕೋಟಿ ಸಾಲ ಎತ್ತಿದ್ದವು. ಆದರೆ, ಯಾವುದನ್ನೂ ಸರಿಯಾಗಿ ಮರುಪಾವತಿ ಮಾಡಿಲ್ಲ, ಇವುಗಳು ಬಾಕಿ ಉಳಿಸಿಕೊಂಡಿರುವ ಮೊತ್ತ ಏನಿಲ್ಲವೆಂದರೂ 45 ಕೋಟಿ ಆಗುತ್ತದೆ. ಸಕ್ಕರೆ ಕಾರ್ಖಾನೆಗಳು ಉಳಿಸಿಕೊಂಡಿರುವ ಬಾಕಿಯೇ ಮೂರು ಕೋಟಿಗೂ ಅಧಿಕವಿದೆ. ವಾಸ್ತವದಲ್ಲಿ ಈ ಸಾಲ ವಸೂಲಾತಿಯಲ್ಲಿ ನಡೆದ ಗುಂಪುಗಾರಿಕೆಯೇ ಕೆಸಿಸಿ ಬ್ಯಾಂಕನ್ನು ದಿವಾಳಿಯ ಅಂಚಿಗೆ ತಂದು ನಿಲ್ಲಿಸಿತು.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿಯ ಸಹಕಾರಿ ಬ್ಯಾಂಕುಗಳಾದ ಮರಾಠಾ ಬ್ಯಾಂಕ್, ಗುರುಸಿದ್ದೇಶ್ವರ ಬ್ಯಾಂಕ್, ನವಕಲ್ಯಾಣ ಬ್ಯಾಂಕ್, ರಾಣಿ ಚೆನ್ನಮ್ಮ ಬ್ಯಾಂಕ್, ರೆಡ್ಡಿ ಬ್ಯಾಂಕ್, ಆಜಾದ್ ಬ್ಯಾಂಕ್ - ಹೀಗೆ ಇನ್ನೂ ಹಲವಾರು ಬ್ಯಾಂಕುಗಳು ಕೆಸಿಸಿ ಬ್ಯಾಂಕಿನಲ್ಲಿ ದೊಡ್ಡ ಪ್ರಮಾಣದಲ್ಲಿ ಠೇವಣಿಯಿಟ್ಟಿದ್ದವು.

2001ರ ಡಿಸೆಂಬರ್‌ನಲ್ಲಿ ಸರ್ಕಾರವು ಮಾಜಿ ಸಚಿವ ಎಸ್.ಎಸ್.ಪಾಟೀಲರ ಪುತ್ರ ಶಿವಕುಮಾರ್ ಗೌಡ ಪಾಟೀಲರ ಅಧ್ಯಕ್ಷತೆಯಲ್ಲಿ ಇದ್ದ ಆಡಳಿತ ಮಂಡಳಿಯನ್ನು ಸೂಪರ್ ಸೀಡ್ ಮಾಡಿ ಆಡಳಿತಾಧಿಕಾರಿಯನ್ನು ನೇಮಿಸಿತು. ನಿಯಮಗಳ ಪ್ರಕಾರ ಬ್ಯಾಂಕಿನ ಸೂಪರ್ ಸೀಡ್ ಆದ ವರ್ಷದಲ್ಲಿ ಸರ್ಕಾರ ಚುನಾವಣೆ ನಡೆಸಬೇಕಿತ್ತು, ಆದರೆ, ರಾಜ್ಯದಲ್ಲಿ ಆಗ ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ಚುನಾವಣೆಯನ್ನು ಮುಂದೂಡಿಬಿಟ್ಟಿತು. ಅದಕ್ಕೂ ಒಂದು ಕಾರಣವಿತ್ತು. ಇದೇ ಕಾಂಗ್ರೆಸ್ಸಿನ ನಾಯಕರೆ ನಡೆಸುತ್ತಿದ್ದ ಕಾರ್ಖಾನೆಗಳಿಗೆ, ಗಿರಣಿಗಳಿಗೆ ಈ ಬ್ಯಾಂಕಿನಿಂದ ಕೋಟ್ಯಂತರ ರೂ. ಸಾಲ ತೆಗೆದುಕೊಂಡಿದ್ದರು. ಚುನಾವಣೆ ನಡೆದರೆ ಅದನ್ನು ವಾಪಾಸ್ಸು ಕಟ್ಟಬೇಕಾಗುತ್ತದೆ ಎಂಬುದು ಇದರ ಹಿಂದಿನ ಆಲೋಚನೆಯಾಗಿತ್ತು.

2001ರಿಂದ 2004ರ ತನಕ ಬ್ಯಾಂಕಿನ ವ್ಯಾಪ್ತಿಯಲ್ಲಿರುವ ರೈತರು, ಬ್ಯಾಂಕಿನ ಸಿಬ್ಬಂದಿ ಪಡಬಾರದ ಕಷ್ಟಪಟ್ಟರು. ಕೆಲವರು ಪಗಾರವಿಲ್ಲದೇ ಪರದಾಡಿದರೆ ಮತ್ತೆ ಕೆಲವರು ಸಾವಿನ ದವಡೆಯನ್ನೂ ತಟ್ಟಿದರು. ಇಲ್ಲಿ ಠೇವಣಿ ಇಟ್ಟಿರುವ 38 ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳು ಠೇವಣಿ ಮರಳಿ ಪಡೆಯಲು ಇಂದಿಗೂ ಪರದಾಡುತ್ತಿವೆ. ಸುಮಾರು 14 ಲಕ್ಷ ಠೇವಣಿದಾರರದ್ದೂ ಇದೇ ಕತೆ.

ಈ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದ ಮರಾಠಾ ಬ್ಯಾಂಕ್ ಮತ್ತು ರಾಣಿ ಚೆನ್ನಮ್ಮ ಮಹಿಳಾ ಬ್ಯಾಂಕ್ ಈಗಾಗಲೇ ಬಂದ್ ಆಗಿವೆ. ನವಕಲ್ಯಾಣ ಬ್ಯಾಂಕ್ ದಿವಾಳಿಯ ಅಂಚಿನಲ್ಲಿದೆ. ಆರ್ಯ ವೈಶ್ಯ ಬ್ಯಾಂಕ ದಿವಾಳಿಯೆದ್ದು ಹೋಗಿದೆ. ಈ ಬ್ಯಾಂಕಿನಲ್ಲಿ ಠೇವಣಿಯಿಟ್ಟಿದ್ದ ಹಲವರು ಸಾವಿಗೆ ಶರಣಾಗಿದ್ದೂ ಆಗಿದೆ. 2003-04ರಲ್ಲಿ ಎಸ್.ಎಂ.ಕೃಷ್ಣ ಸರ್ಕಾರ ಬ್ಯಾಂಕಿಗೆ ಮರು ಜೀವ ನೀಡಲು ಒಂದು ಪ್ಯಾಕೇಜ್ ಪ್ರಕಟಿಸಿತಾದರೂ ಅದು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರಲೇ ಇಲ್ಲ. 2007ರಲ್ಲಿ ಬ್ಯಾಂಕಿನ ಆಡಳಿತಾಧಿಕಾರಿಯಾಗಿದ್ದ ಜಿಲ್ಲಾಧಿಕಾರಿ ಎಂ.ಎಸ್.ಶ್ರೀಕರ ಅವರ ಸಣ್ಣಪುಟ್ಟ ಸಾಲ ವಸೂಲಿ ಮಾಡಿ ಅಷ್ಟಿಷ್ಟು ಸಾಲವನ್ನು ರೈತರಿಗೆ ನೀಡಿದ್ದರೆ ಹೊರತು ದೊಡ್ಡ ಮೊತ್ತದ ಸಾಲ ಪಡೆದಿದ್ದ ಗಿರಣಿಗಳು, ಕಾರ್ಖಾನೆಗಳಿಂದ ಸಾಲ ಮರುಪಾವತಿಯಾಗಿರಲಿಲ್ಲ.

ಸೂಪರ್‌ಸೀಡ್ ಆಗಿ ಏಳು ವರ್ಷ ಕಳೆದ ಮೇಲೆ ಈಗ ಬ್ಯಾಂಕಿನ ಚುನಾವಣೆಗೆ ವೇದಿಕೆ ಸಜ್ಜಾಗಿದೆ. 23 ನಿರ್ದೇಶಕರ ಸ್ಥಾನಗಳ ಪೈಕಿ ಈಗ 20 ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಉಳಿದ ಮೂರು ಸ್ಥಾನಗಳನ್ನು ಸರ್ಕಾರವೇ ನಾಮನಿರ್ದೇಶನ ಮಾಡುತ್ತದೆ. ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಎಂ.ಜಿ. ವಿಜಯಕುಮಾರ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಮೂರು ಜಿಲ್ಲೆಯ 17 ತಾಲ್ಲೂಕುಗಳಿಗೂ ತಲಾ ಒಬ್ಬೊಬ್ಬ ನಿರ್ದೇಶಕ ಆಯ್ಕೆಗೊಳ್ಳುವರು. 526 ಸಹಕಾರ ಸಂಘಗಳು ತಲಾ ಒಬ್ಬೊಬ್ಬ ಪ್ರತಿನಿಧಿಗೆ ಮತ ಚಲಾಯಿಸುವ ಹಕ್ಕು ಸೇರಿದಂತೆ ಕೃಷಿ ಉತ್ಪನ್ನ ಮಾರುಕಟ್ಟೆ, ಸಹಕಾರಿ ಗಿರಣಿಗಳಿಗೂ ಮತದಾನದ ಹಕ್ಕು ಇದೆ.

ಪಾಟೀಲರ ಹಿಡಿತದಿಂದ ಕೆಸಿಸಿ ಬ್ಯಾಂಕ್ ಮುಕ್ತಗೊಂಡು ಮತ್ತೆ ರೈತರ ಜೀವನಾಡಿಯಾಗುತ್ತದೆಯೇ ಎಂಬುದನ್ನು ಕಾದುನೋಡಬೇಕು.

■ ಹುಬ್ಬಳ್ಳಿಯಾಂವ



# ಶೋಕಿಗೆಂದೇ ಖಾಸಗಿ ಏರ್‌ಪೋರ್ಟ್

ಕೊಳ್ಳೆಯ ದುಡ್ಡು ಹೇಗೆಲ್ಲ ಖದೀಮರ ಸೊಕ್ಕು ಕೊಬ್ಬಿಸುತ್ತದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ.

ಕಡಪಾದ ಬ್ರಾಹ್ಮಣಿ ಸ್ಟೀಲ್ಸ್ ಪಕ್ಕದಲ್ಲೇ ಐಷಾರಾಮಿ ಏರ್‌ಪೋರ್ಟ್ ಒಂದನ್ನು ನಿರ್ಮಿಸುವುದು ಜನಾರೆಡ್ಡಿಯ ಮತ್ತೊಂದು ಗುರಿ. ಉಕ್ಕಿನ ಕಾರ್ಖಾನೆಗೆಂದು ಈಗಾಗಲೇ ಹತ್ತು ಸಾವಿರಕ್ಕೂ ಅಧಿಕ ಎಕರೆಗಳ ಭೂಮಿ ಕಿತ್ತುಕೊಟ್ಟು ಆಂಧ್ರ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ಈಗ ಏರ್‌ಪೋರ್ಟಿಗೆಂದೇ



ಮತ್ತೆ ನಾಲ್ಕು ಸಾವಿರ ಎಕರೆಗಳಷ್ಟು ಹೆಚ್ಚುವರಿ ರೈತರ ಭೂಮಿ ಧಾರೆಯೆರೆದಿದ್ದಾರೆ. ಕಡಪಾ ಶ್ರೀಮಂತ ಊರೇನಲ್ಲ, ಅಲ್ಲಿಗೆ ಖಾಸಗಿ ವಿಮಾನ ನಿಲ್ದಾಣವೊಂದರ ಅಗತ್ಯವೂ ಇಲ್ಲ. ಆದರೆ ಜನಾರ್ದನ ರೆಡ್ಡಿ ತನ್ನ ಉಕ್ಕಿನ ಕಾರ್ಖಾನೆಗೆ ಬಂದು ಹೋಗಲು ಬೇಕಲ್ಲ, ಅದಕ್ಕೆಂದು ಖಾಸಗಿ ಏರ್‌ಪೋರ್ಟ್ ಬೇಕು. ಅದಕ್ಕೆ ಮತ್ತೆ 4000 ಎಕರೆ ಭೂಮಿ ರೆಡ್ಡಿಗೆ ಬೇಕು!

ಹೀಗೆ ಅನಗತ್ಯವಾಗಿ ಗಣಿರೆಡ್ಡಿಗೆ ಬಡರೈತರ ಭೂಮಿ ಕಿತ್ತುಕೊಟ್ಟ ಆಂಧ್ರದ ಮುಖ್ಯಮಂತ್ರಿಯ ವಿರುದ್ಧ ತೆಲುಗು ದೇಶಂ ದೊಡ್ಡ ಮಟ್ಟದಲ್ಲಿ ಪ್ರತಿಭಟನೆಗಿಳಿದಿದೆ. ತೆಲುಗು ದೇಶಂ ರಾಜ್ಯಸಭಾ ಸದಸ್ಯ ಮೈಸೂರಾರೆಡ್ಡಿ ಕರ್ನಾಟಕದ ಗಡಿಯನ್ನೇ ಬದಲಿಸಿದ ಜನಾರ್ದನ ರೆಡ್ಡಿಯ ಜೊತೆ ಮುಖ್ಯಮಂತ್ರಿ ಪುತ್ರ ಜಗನ್‌ರೆಡ್ಡಿ ಶಾಮೀಲಾಗಿದ್ದಾನೆಂದು ಬಹಿರಂಗವಾಗಿಯೇ ಆರೋಪಿಸಿದ್ದಾರೆ. ಓಬಳಾಪುರಂ ಗಣಿ ಲೂಟಿಯ ವಿರುದ್ಧ ತೆಲುಗು ದೇಶಂ ಭಾರೀ ಮುತ್ತಿಗೆಯನ್ನೇ ಹಮ್ಮಿಕೊಂಡಿತ್ತು, ಆದರೆ ಆಂಧ್ರದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿ ತನ್ನ ಪೊಲೀಸರನ್ನು ಛೂಬಿಟ್ಟು ತೆಲುಗು ದೇಶಂ ನಾಯಕರನ್ನು ಜೈಲಿಗೆ ದಬ್ಬಿದನೇ ಹೊರತು ಗಣಿ ಲೂಟಿಯನ್ನು ತಡೆಗಟ್ಟಲಿಲ್ಲ.

ಇಷ್ಟರಲ್ಲೇ ಗಣಿ ರೆಡ್ಡಿ ತನ್ನ ಉಕ್ಕಿನ ಕಾರ್ಖಾನೆಗಾಗಿ ಒರಿಸ್ಸಾದ ಕಾಡನ್ನು ಆಕ್ರಮಿಸುವ ಅಪಾಯವಿದೆ. ಜೊತೆಗೆ ಬಳ್ಳಾರಿಯ ಜಿಂದಾಲ್ ಫ್ಯಾಕ್ಟರಿಯನ್ನು ಮುಚ್ಚಿಸಲು ರೆಡ್ಡಿ ಮಸಲತ್ತು ಮಾಡುತ್ತಿರುವುದೂ ಸುಳ್ಳಲ್ಲ. ರೆಡ್ಡಿ ಭೂಮಾತೆಯ ಪಾಲಿಗೆ ಭಸ್ಮಾಸುರ.

# ಗಣಿಕಳ್ಳನ ಆಂಧ್ರಾಪ್ರೇಮ

ಉರ್ದು ಸೂಕ್ತಿಯೊಂದರ ಪ್ರಕಾರ ಯಾರು ಅನ್ನದ ಋಣ, ನೀರಿನ ಋಣ ಮತ್ತು ಮಣ್ಣಿನ ಋಣಕ್ಕೆ ನಿಷ್ಠನಲ್ಲವ್ರೋ ಆತ ದೇಶಕ್ಕೂ ನಿಷ್ಠನಲ್ಲ, ದೇವರಿಗೂ ನಿಷ್ಠನಲ್ಲ!

ಇದನ್ನು ಅಕ್ಷರಶಃ ಸಾಬೀತುಮಾಡಲಿಕ್ಕೋ ಏನೋ; ಬಳ್ಳಾರಿಯ ಗಣಿಕಳ್ಳ ಮತ್ತು ಹಾಲಿ ಪ್ರವಾಸೋದ್ಯಮ ಮಂತ್ರಿ ಜನಾರ್ದನ ರೆಡ್ಡಿ 'ನಮ್ಮಕ್ ಹರಾಮ್' ಕೃತ್ಯವೊಂದಕ್ಕೆ ಕೈಹಾಕಿದ್ದಾನೆ. ಅದರ ಹೆಸರು ಬ್ರಾಹ್ಮಣಿ ಸ್ಟೀಲ್ಸ್. ಸರಿಸುಮಾರು 25 ಸಾವಿರ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಆಂಧ್ರದ ಕಡಪಾ ಜಿಲ್ಲೆಯ ಜಮ್ಮಲ ಮಡಗು ಸಮೀಪದ ಅಂಬಾವರಂ ಎಂಬ ಗ್ರಾಮದಲ್ಲಿ ತಲೆ ಎತ್ತುತ್ತಿರುವ ಬ್ರಾಹ್ಮಣಿ ಸ್ಟೀಲ್ಸ್ ಇಂಡಸ್ಟ್ರೀಸ್‌ಗೆ ಗಾಲಿ ಜನಾರ್ದನ್ ರೆಡ್ಡಿಯೇ ಅಸಲೀ ಧಣಿ ದುಡ್ಡು ಮಾತ್ರ ಕರ್ನಾಟಕದಿಂದ ದೋಚಿದ್ದು, ಅರಣ್ಯ ಭೂಮಿಯಲ್ಲಿ ಅದಿರು ಕದ್ದದ್ದು.

ಬ್ರಾಹ್ಮಣಿ ಸ್ಟೀಲ್ಸ್

ಕಡಪಾ ಹೇಳಿಕೇಳಿ ಆಂಧ್ರದ ಮುಖ್ಯಮಂತ್ರಿ ವೈ.ಎಸ್. ರಾಜಶೇಖರ ರೆಡ್ಡಿಯ ತವರೂರು. ಆಂಧ್ರದ ಮುಖ್ಯಮಂತ್ರಿ ಪುತ್ರ ಜಗನ್ ಮೋಹನರೆಡ್ಡಿ ಕೂಡ ಬ್ರಾಹ್ಮಣಿ ಸ್ಟೀಲ್ಸ್ ಎಂಬ ಉಕ್ಕಿನ ಕಾರ್ಖಾನೆಗೆ ಪಾರ್ಟನರ್. ಜೊತೆಗೆ ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ ಬ್ರದರ್‌ಗಳಲ್ಲದೇ ಬಳ್ಳಾರಿಯ ಕಿರಾತಕ ರೌಡಿ ಶ್ರೀರಾಮುಲು ಕೂಡ ಇದೇ ಬ್ರಾಹ್ಮಣಿ ಸ್ಟೀಲ್ಸ್‌ನ ಡೈರೆಕ್ಟರ್‌ಗಳು. ಗಾಲಿ ರೆಡ್ಡಿಯೇ ಹೇಳಿಕೊಳ್ಳುವಂತೆ ಆತ ಬಳ್ಳಾರಿಯ ಮಣ್ಣಿನ ಮಗ. ಮಾತೆತ್ತಿದರೆ ಕನ್ನಡ ತಾಯಿ ಭುವನೇಶ್ವರಿಯ ಮೇಲೆ ಆಣೆ ಮಾಡುತ್ತಾನೆ. ರಕ್ಷಣಾ ವೇದಿಕೆಯ ನಾರಾಯಣಗೌಡನನ್ನು ಬಳ್ಳಾರಿಗೆ ಕರೆಸಿ ತನ್ನ ಕೈಯಾರೆ ಲಿಂಬಾವಳಿಗೆ 'ಆದರ್ಶ ಕನ್ನಡಿಗ'ನೆಂದು ಪ್ರಶಸ್ತಿ ಕೊಡುತ್ತಾನೆ. ಈತನ ಅಣ್ಣ ಕರುಣಾಕರ ರೆಡ್ಡಿಯನ್ನು ಇದೇ ಬಳ್ಳಾರಿಯ ಜನ ಗೆಲ್ಲಿಸಿ ಎಮ್ಮೆಲ್ಲೇ ಮಾಡಿದ್ದಾರೆ. ಮಂತ್ರಿಯಾಗಿಸಿದ್ದಾರೆ. ಮತ್ತೊಬ್ಬ ಅಣ್ಣ ಸೋಮಶೇಖರ ರೆಡ್ಡಿಯನ್ನೂ ಕನ್ನಡಿಗರೇ ಗೆಲ್ಲಿಸಿ ಎಮ್ಮೆಲ್ಲೇ ಮಾಡಿದ್ದಾರೆ. ಇವರ ಸಾಕುಬಂಟ ರೌಡಿ ಶ್ರೀರಾಮುಲು ಕೂಡ ಕರ್ನಾಟಕದ ಹಾಲಿ ಮಂತ್ರಿ!



ವ್ಯವಸ್ಥೆ ನೆಟ್ಟಗಿದ್ದಿದ್ದರೆ ಅದ್ಯಾವತ್ತಿಗೋ ಜೈಲು ಪಾಲಾಗಬೇಕಿದ್ದ ತಮ್ಮನ್ನು ಬೆಳೆಸಿದ, ಅರಣ್ಯ ಭೂಮಿಯಲ್ಲಿ ಗಣಿದೋಚಲು ನೆರವಾದ, ಓಟುಕೊಟ್ಟು ಗೆಲ್ಲಿಸಿದ ಬಳ್ಳಾರಿಯ ಜನರ ಋಣಕ್ಕಾದರೂ ಈ ಮಂದಿಗೆ ಉಕ್ಕಿನ ಕಾರ್ಖಾನೆಯ ವಿಷಯದಲ್ಲಿ ಮೊದಲು ಕರ್ನಾಟಕ ನೆನಪಾಗಬೇಕಿತ್ತು. ಆಂಧ್ರದ ಓಬಳಾಪುರಂ ಬಟ್ಟರೆ ರೆಡ್ಡಿಗಳು ದೊಡ್ಡ ಮಟ್ಟದಲ್ಲಿ ಅದಿರು ದೋಚಿದ್ದು ಕರ್ನಾಟಕದಲ್ಲೇ. ಇವತ್ತಿಗೂ ಅರಣ್ಯಾಧಿಕಾರಿಗಳನ್ನು ಹೆದರಿಸಿ, ಪೊಲೀಸರಿಗೆ ತಿನ್ನಿಸಿ ಕನ್ನಡಿಗರ ಭೂಸಂಪತ್ತನ್ನು ಲೂಟಿಮಾಡುತ್ತಿರುವ ರೆಡ್ಡಿ ಗ್ಯಾಂಗ್ ಬಳ್ಳಾರಿಯಲ್ಲೋ, ಹೊಸಪೇಟೆಯಲ್ಲೋ ಉಕ್ಕಿನ ಕಾರ್ಖಾನೆ ಮಾಡುತ್ತೇವೆಂದಿದ್ದರೆ ಯಾರು ವಿರೋಧಿಸುತ್ತಿದ್ದರು? ಅದ್ಯಾವುದೇ ಸರ್ಕಾರವಾಗಿದ್ದರೂ ಉಕ್ಕಿನ ಕಾರ್ಖಾನೆ ಬರುತ್ತದೆ ಎಂದರೆ, ಜನಕ್ಕೆ ಕೆಲಸ ಸಿಗುತ್ತದೆಯೆಂದರೆ ಕೇಳಿದಷ್ಟು ಜಮೀನು ಕೊಡುತ್ತಿತ್ತು. ಆದರೆ ರೆಡ್ಡಿ ಖದೀಮರಿಗೆ ಆಂಧ್ರದ ವ್ಯಾಮೋಹ. ಕಳ್ಳ ಯಾವತ್ತೂ ಕದ್ದ ಜಾಗದಲ್ಲಿ ಅಂಗಡಿ ಇಕ್ಕುವುದಿಲ್ಲ.




ಕರ್ನಾಟಕವೇನಿದ್ದರೂ ಲೂಟಿಗೆ ಮಾತ್ರ. ಸಂಪತ್ತೆಲ್ಲ ಆಂಧ್ರದಲ್ಲಿದ್ದರೇನೇ ಸುರಕ್ಷಿತ ಎಂದು ರೆಡ್ಡಿಗಳು ನಿರ್ಧರಿಸಿದ್ದಾರೆ. ಇದಕ್ಕೆ ಕುಮ್ಮಕ್ಕು ಕೊಟ್ಟವನು ಆಂಧ್ರದ ಮುಖ್ಯಮಂತ್ರಿ ಪುತ್ರ ಜಗನ್‌ಮೋಹನ್ ರೆಡ್ಡಿ. ಅದೆಷ್ಟು ವೇಗವಾಗಿ, ಜಬರ್‌ದಸ್ತಿಯಿಂದ ಬ್ರಾಹ್ಮಣಿ ಸ್ಟೀಲ್ಸ್ ತಲೆ ಎತ್ತಿದೆಯೆಂದರೆ: 2007 ರ ಮೇ 21 ಕ್ಕೆ ಹೈದರಾಬಾದಿನಲ್ಲಿ ಪತ್ರಿಕಾಗೋಷ್ಠಿ ಕರೆದು ತಾನು ಕಡಪಾದಲ್ಲಿ 25 ಸಾವಿರ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಉಕ್ಕಿನ ಕಾರ್ಖಾನೆ ಸ್ಥಾಪಿಸುತ್ತೇನೆಂದು ಗಾಲಿರೆಡ್ಡಿ ಘೋಷಿಸುತ್ತಾನೆ.




ಇದಾಗಿ ಹದಿನೈದನೇ ದಿನಕ್ಕೆ ಸರಿಯಾಗಿ ಅಂದರೆ 2007 ರ ಜೂನ್ 1 ರಂದು ಆಂಧ್ರದ ಮುಖ್ಯಮಂತ್ರಿ ಗೃಹ ಕಚೇರಿಯಲ್ಲಿ ಜನಾರ್ದನ ರೆಡ್ಡಿ ಮತ್ತು ರಾಜಶೇಖರ ರೆಡ್ಡಿ ಒಟ್ಟಿಗೇ ಕೂತು MOU ಗೆ ಸಹಿ ಹಾಕುತ್ತಾರೆ.

ಹೀಗೆ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ ಮರುದಿನಕ್ಕೇ ಕಡಪಾದ ಜಮ್ಮಲಮಡಗು ಸಮೀಪದ ಅಂಬಾವರಂ, ಚಿಂತಾಲತಾಂಡಾ ಮತ್ತು ಸುತ್ತಮುತ್ತಲ ಗ್ರಾಮಗಳ ಹತ್ತುಸಾವಿರ ಏಳುನೂರ ಅರವತ್ತೊಂದು ಎಕರೆಗಳಷ್ಟು ಭೂಮಿಯನ್ನು ಆಂಧ್ರಾ ಸರ್ಕಾರ ರೈತರಿಂದ ಕಿತ್ತು ಕೊಡುತ್ತದೆ. 2007 ರ ಜೂನ್ 10 ಕ್ಕೆ ಅಂದರೆ ಒಪ್ಪಂದವಾದ ಹತ್ತನೇ ದಿನಕ್ಕೆ ಸರಿಯಾಗಿ ಸಿಎಂ ರಾಜಶೇಖರರೆಡ್ಡಿಯೇ ಅಂಬಾವರಂಗೆ ಬಂದು ಬ್ರಾಹ್ಮಣಿ ಸ್ಟೀಲ್ಸ್ ಕಾರ್ಖಾನೆಗೆ ಶಂಕುಸ್ಥಾಪನೆ ಮಾಡುತ್ತಾರೆ.

ವಿಕಟವೆಂದರೆ ಹೀಗೆ ರೈತರಿಂದ ಅಗದೀ ಕಮ್ಮಿ ದರಕ್ಕೆ ಅಂದರೆ ಎಕರೆಗೆ ಹದಿನೆಂಟೂವರೆ ಸಾವಿರದಂತೆ ಒಟ್ಟೂ 10,761 ಎಕರೆ ಭೂಮಿ ಕಿತ್ತು ಕೊಟ್ಟದ್ದಕ್ಕಾಗಿ ಭಕ್ಷೀಸೋ ಎಂಬಂತೆ ಶಂಕುಸ್ಥಾಪನೆಗೆಂದು ಬಂದಿದ್ದ ಮುಖ್ಯಮಂತ್ರಿ ರಾಜಶೇಖರ ರೆಡ್ಡಿಗೆ ಗಾಲಿ ರೆಡ್ಡಿ ಏಳೂವರೆ ಕೋಟಿ ರೂಪಾಯಿ ಬೆಲೆಬಾಳುವ ಹೈಟೆಕ್ ವೋಲ್ವೋ ಬಸ್ ಒಂದನ್ನು ಕಾಣಿಕೆಯಾಗಿ ಕೊಡುತ್ತಾನೆ.



ಅದೂ ಎಂಥಾ ಬಸ್ಸೆಂದರೆ ಅದನ್ನು ಯಾವುದೇ ಚುನಾವಣಾ ಪ್ರಚಾರಕ್ಕಾದರೂ ಬಳಸಬಹುದು. ಪೂರ್ತಿ ಬುಲೆಟ್ ಪ್ರೂಫ್ ಬಸ್ಸು. ಒಳಗೇ ಬೆಡ್‌ರೂಮಿದೆ. ಮಿನಿ ಥಿಯೇಟರ್, ಮಿನಿ ಬಾರ್, ಕಿಚನ್, ಟಾಯ್ಲೆಟ್, ಕಂಪ್ಯೂಟರ್, ಇಂಟರ್‌ನೆಟ್ ಇತ್ಯಾದಿ ಸೌಲಭ್ಯಗಳುಳ್ಳ ಬಸ್‌ನ ಮೇಲ್ಭಾವಣಿಯನ್ನೇ ಪ್ರಚಾರಸಭೆಯ ವೇದಿಕೆಯನ್ನಾಗಿ ಬಳಸಬಹುದು. ರಾತ್ರಿ ಸಭೆಗೆ ಲೈಟಿಂಗ್ ವ್ಯವಸ್ಥೆಯೂ ಇದೆ.

ನಿಸ್ಸಂಶಯವಾಗಿ ಇದು ಮುಖ್ಯಮಂತ್ರಿಗೆ ಕೊಟ್ಟ ಲಂಚ. ಶಂಕುಸ್ಥಾಪನೆಯಲ್ಲಿ ವೈ.ಎಸ್. ರಾಜಶೇಖರರೆಡ್ಡಿಯ ಜತೆ ಗಾಲಿ ಜನಾರ್ದನರೆಡ್ಡಿ, ಕರುಣಾಕರ ರೆಡ್ಡಿ, ಸೋಮಶೇಖರ ರೆಡ್ಡಿ, ರೌಡಿ ಶ್ರೀರಾಮುಲು ಮುಂತಾದವರಿರುವ ಫೋಟೋಗಳು ಆಂಧ್ರದ ಬಹುತೇಕ ಪತ್ರಿಕೆಗಳಲ್ಲಿ ಅಚ್ಚಾಗಿವೆ. ಹೀಗೆ ಆಂಧ್ರದ ಮುಖ್ಯಮಂತ್ರಿಗೆಂದು ರೆಡ್ಡಿ ಭಕ್ಷೀಸು ಕೊಟ್ಟ ಬಸ್ಸಿನ ಹೆಸರು ರುಕ್ಮಿಣಿ!



ಚಿಂತಾಲ ತಾಂಡಾದ 165 ಕುಟುಂಬಗಳಿಗೂ ರೆಡ್ಡಿ ಕೆಲಸ ಕೊಡುತ್ತಾನಂತೆ. ಜೊತೆಗೆ 15 ಸಾವಿರ ನಿರುದ್ಯೋಗಿಗಳಿಗೆ ಅನ್ನದ ದಾರಿ ಕಲ್ಪಿಸುತ್ತಾನಂತೆ. ಪರೋಕ್ಷವಾಗಿ ಕಡಪಾ ಜಿಲ್ಲೆಯ ಒಂದು ಲಕ್ಷ ಜನಕ್ಕೆ ಉದ್ಯೋಗ ಕಲ್ಪಿಸುವುದು ರೆಡ್ಡಿಯ ಗುರಿಯಂತೆ. ಇದಕ್ಕೆಂದು ಗಂಡಿಕೋಟಾ ಜಲಾಶಯದಿಂದ 2 ಟಿಎಂಸಿ ನೀರು ಹರಿಸಲು ಆಂಧ್ರ ಸರ್ಕಾರ ಒಪ್ಪಿಕೊಂಡಿದೆ. ಅಗತ್ಯಬಿದ್ದರೆ ಸಮುದ್ರದ ನೀರನ್ನೂ ಬಳಸಿಕೊಳ್ಳಲು ರೆಡ್ಡಿ ಅಣಿಯಾಗಿದ್ದಾನೆ. 2017 ರ ಹೊತ್ತಿಗೆ 20 ಮಿಲಿಯನ್ ಟನ್ ಕಬ್ಬಿಣ ಉತ್ಪಾದಿಸುವುದು ಬ್ರಾಹ್ಮಣಿ ಸ್ಟೀಲ್ಸ್‌ನ ಉದ್ದೇಶ. ಇದಕ್ಕೆಂದು ಚೈನಾದ sino ಸ್ಟೀಲ್ಸ್, ಎಂಸಿಸಿ ಮತ್ತು ಶೋಗ್ಯಾಂಗ್ ಎಂಬ ಮೂರು ಕಂಪೆನಿಗಳೊಡನೆ ಒಪ್ಪಂದವಾಗಿದೆ. ಘಟಕಕ್ಕೆ ಬೇಕಾದ ತಂತ್ರಜ್ಞಾನದ ಮತ್ತು ಯಂತ್ರೋಪಕರಣಗಳನ್ನು ಈ ಚೈನೀಸ್ ಕಂಪೆನಿಗಳೇ ಒದಗಿಸುತ್ತವೆ.

ಇದರರ್ಥ ಬ್ರಾಹ್ಮಣಿ ಸ್ಟೀಲ್ಸ್ ದಕ್ಷಿಣ ಭಾರತದ ಅತೀದೊಡ್ಡ ಉಕ್ಕಿನ ಕಾರ್ಖಾನೆಯಾಗಲಿದೆ. ಬ್ರಾಹ್ಮಣಿ ಎಂಬುದು ಗಾಲಿ ರೆಡ್ಡಿಯ ಮಗಳ ಹೆಸರು. 2017 ರ ಹೊತ್ತಿಗೆ ವರ್ಷಕ್ಕೆ 20 ಮಿಲಿಯನ್ ಟನ್ ಉಕ್ಕು ತಯಾರಿಸಬೇಕೆಂದರೆ ಕನಿಷ್ಠ ವರ್ಷಕ್ಕೆ 60 ಮಿಲಿಯನ್ ಟನ್ ಕಬ್ಬಿಣದ ಅದಿರುಬೇಕು. ಅಲ್ಲಿಯತನಕ ಪ್ರತಿನಿತ್ಯ ಸಾವಿರಾರು ಟನ್ ಕಬ್ಬಿಣದ ಅದಿರು ಸರಬರಾಜಾಗುತ್ತಲೇ ಇರಬೇಕು. ಇದಕ್ಕೆ ಕೇವಲ ಆಂಧ್ರದ ಕಾಡುಗಳ ಕಬ್ಬಿಣದ ಅದಿರು ಯಾವ ಲೆಕ್ಕ?

ನಿಸ್ಸಂಶಯವಾಗಿ ರೆಡ್ಡಿ ಕೈ ಹಾಕುವುದು ಕರ್ನಾಟಕದ ಭೂಸಂಪತ್ತಿಗೇ. ನಿನ್ನೆಮೊನ್ನೆಯ ತನಕ ಕರ್ನಾಟಕ ಸರ್ಕಾರದ ಮೇಲೆ ಗೂಂಡಾಗಿರಿ ಮಾಡಿ ಅದಿರು ದೋಚುತ್ತಿದ್ದ. ಕದ್ದ ಮಾಲನ್ನು ಜಬರ್‌ದಸ್ತಿಯಾಗೇ ಚೈನಾಕ್ಕೆ ಕಳ್ಳ ಸಾಗಾಣಿಕೆ ಮಾಡಿಕೊಂಡಿದ್ದ. ಈಗ ತಾನೇ ಉಕ್ಕಿನ ಕಾರ್ಖಾನೆ ಮಾಡುತ್ತಿದ್ದಾನೆ. ಅಂದರೆ ಗಣಿ ಲೂಟಿ ದುಪ್ಪಟ್ಟಾಗುತ್ತದೆ. ಅಂಥಾ ಕುಮಾರ ಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೇ ರೆಡ್ಡಿಯ ಗಣಿ ಲೂಟಿ ನಿಂತಿರಲಿಲ್ಲ. ರೆಡ್ಡಿ ಗ್ಯಾಂಗ್ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಂಡ ನಿಷ್ಠುರಿ ಅರಣ್ಯಾಧಿಕಾರಿ ರಾಜಶೇಖರ್ ವಿರುದ್ಧ ಲೋಕಾಯುಕ್ತರನ್ನು ಛೂಬಿಟ್ಟು ಎತ್ತಂಗಡಿಯಾಗುವಂತೆ ಮಾಡಿದ್ದು ರೆಡ್ಡಿಯ ಕ್ರಿಮಿನಲ್ ಬುದ್ಧಿಗೊಂದು ನಿದರ್ಶನವಷ್ಟೇ.

ಇಂಥವನು ಅದೂ ಆಂಧ್ರದಲ್ಲಿ ಉಕ್ಕಿನ ಕಾರ್ಖಾನೆ ತೆರೆದರೆ ಬಳ್ಳಾರಿ, ಸಂಡೂರು, ಹೊಸಪೇಟೆ ಕಾಡುಗಳ ಇನ್ನೆಷ್ಟು ಕಬ್ಬಿಣದ ಅದಿರು ಲೂಟಿಯಾಗಲ್ಲ?

ಗಣಿ ಲೂಟಿಗಾಗಿ ಕರ್ನಾಟಕದ ನಕಾಶೆಯನ್ನೇ ತಿದ್ದಿ ಗಡಿಯನ್ನೇ ಬದಲಿಸಿದವನಿಗೆ ಅಧಿಕಾರ ಬೇಕು. ಒಂದೇ ಮನೆಯಿಂದ ಮೂವರನ್ನು ಮಂತ್ರಿಗಳನ್ನಾಗಿಸಿದವನಿಗೆ ಕರ್ನಾಟಕದ ಅರಣ್ಯ ಭೂಮಿಗೆ ಕನ್ನ ಹಾಕುವುದು ಯಾವ ಕಷ್ಟ? ಈಗ ಉಕ್ಕಿನ ಕಾರ್ಖಾನೆಗೆಂದು ರೆಡ್ಡಿ ಹಾಕಿದ 25 ಸಾವಿರ ಕೋಟಿಯ ಬಂಡವಾಳ ಕೂಡ ಕರ್ನಾಟಕದ ಗಣಿ ಸಂಪತ್ತಿನ ಲೂಟಿಯಿಂದಲೇ ಗಳಿಸಿದ್ದು. ಎಲ್ಲಿಂದಲೋ ಬಂದು, ರಾಜಾರೋಷವಾಗಿ ಅದಿರು ಕದ್ದು, ಅದೇ ದುಡ್ಡಲ್ಲಿ ಅಧಿಕಾರ ಹಿಡಿದು, ಈಗ ಉಕ್ಕಿನ ಕಾರ್ಖಾನೆ ಮಾಡಿ, ಮತ್ತೆ ಬೃಹತ್ ಪ್ರಮಾಣದ ಗಣಿ ಲೂಟಿಗಾಗಿ ರಾಜ್ಯದ ಮುಖ್ಯಮಂತ್ರಿಯಾಗಲು ಹೊರಟ ಜನಾರ್ದನ್ ರೆಡ್ಡಿ ಮತ್ತು ಆತನ ಕಸಿಸಂತತಿಯನ್ನು ಕನ್ನಡಿಗರು ಇನ್ನೂ ಸಹಿಸಿಕೊಂಡಿದ್ದಾರೆಂದರೆ ಲಾಲೂಪ್ರಸಾದ್ ಯಾದವ್ ಹೇಳಿದಂತೆ ಕನ್ನಡಿಗರು ಮುಠ್ಠಾಳರಲ್ಲದೆ ಮತ್ತೇನು?

ರಾಜ್ಯದ ಮಂತ್ರಿಯೊಬ್ಬ ಆಂಧ್ರದಲ್ಲಿ ಉಕ್ಕಿನ ಕಾರ್ಖಾನೆ ಮಾಡಿದಾಗಲೂ ಜನ ಸಹಿಸಿಕೊಂಡಿದ್ದಾರೆಂದರೆ ಲೂಟಿಗೆ ಕರ್ನಾಟಕಕ್ಕಿಂತ ಪ್ರಶಸ್ತ ರಾಜ್ಯಬೇಕೆ?

■ ರಾ. ಸೋಮನಾಥ್

# ಸೋಮಣ್ಣ ಈಗ ರೆಬೆಲ್ ಸ್ಟಾರ್!


ಬೆಂಗಳೂರಿನ ವಿಜಯನಗರದ 'ವೀರಪುತ್ರ' ಶಾಸಕ ವಿ. ಸೋಮಣ್ಣ ಈಗ ಕಾಂಗ್ರೆಸ್ ವಲಯದಲ್ಲಿ 'ರೆಬೆಲ್ ಸ್ಟಾರ್' ಸೋಮಣ್ಣನಾಗಿ ರಾರಾಜಿಸುತ್ತಿದ್ದಾರೆ. ದಿನವೂ ಪತ್ರಿಕೆಗಳಿಗೆ ಮತ್ತು ಟಿವಿ ಚಾನೆಲ್‌ಗಳಿಗೆ ಸಂದರ್ಶನ ನೀಡಿ, ಈ ಬಾರಿಯ ಸೋಲಿಗೆ ಕಾಂಗ್ರೆಸ್ ಹೈ ಕಮಾಂಡ್ ಕಾರಣ, ಕೇಂದ್ರ ವೀಕ್ಷಕರಾದ ಪೃಥ್ವಿರಾಜ್ ಚೌವ್ಹಾಣ್ ಕಾರಣ, ರಾಜ್ಯದ ನಾಯಕರು ಕಾರಣ ಎಂದು ಅವರು ಡಂಗೂರ ಬಾರಿಸುತ್ತಲೇ ಇದ್ದಾರೆ. ಪಕ್ಷದ ಶಿಸ್ತಿನ ಸಿಪಾಯಿಯಂತಿದ್ದ ಸೋಮಣ್ಣ ಈ ರೀತಿ ರೆಬೆಲ್ ಸ್ಟಾರ್ ಆಗಿ ರೂಪಾಂತರಗೊಳ್ಳಲು ಹಲವಾರು ಕಾರಣಗಳಿವೆ.

ಅದೆಲ್ಲ ಆಮೇಲಿನ ಮಾತು. ಆದರೆ ಸೋಮಣ್ಣ ಈ ರೀತಿ ಹೈಕಮಾಂಡ್ ವಿರುದ್ಧ ಹರಿಹಾಯ್ದ ಕೂಡಲೇ ಕಾಂಗ್ರೆಸ್ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಈ 'ವೀರಪುತ್ರ'ನಿಗೆ ಪಕ್ಷದ ವತಿಯಿಂದ ಶೋಕಾಸ್ ನೋಟೀಸ್ ಕಳಿಸಿಕೊಟ್ಟಿದ್ದಾರೆ. ಇದನ್ನು ನಿರೀಕ್ಷಿಸಿದ್ದ ಸೋಮಣ್ಣ "ಪ್ರಬಲವಾದ ಲಿಂಗಾಯತ ಸಮುದಾಯದ ಸದಸ್ಯನಾಗಿರುವ ನನ್ನನ್ನು, ನಾಲ್ಕು ಬಾರಿ ಗೆದ್ದು ಶಾಸಕನಾಗಿರುವ ನನ್ನನ್ನು ನಡೆಸಿಕೊಳ್ಳುವ ರೀತಿಯಾ ಇದು?" ಎಂದು ಹೈಕಮಾಂಡ್‌ಗೆ ಬರೆದ ಪತ್ರದಲ್ಲಿ ಪ್ರಶ್ನಿಸಿ ಅವರನ್ನು ಪೇಚಿಗೆ ಸಿಲುಕಿಸಿದ್ದಾರೆ.

ಯಾಕೆಂದರೆ ಈಗಾಗಲೇ ಲಿಂಗಾಯತ ಸಮುದಾಯದ ಅನೇಕರು ಕಾಂಗ್ರೆಸ್‌ಗೆ ಗುಡ್‌ಬೈ ಹೇಳಿ ಬಿಜೆಪಿಯ ಜೊತೆ ಗುರುತಿಸಿಕೊಂಡಿರುವ ಈ ಸಂದರ್ಭದಲ್ಲಿ ಈ 'ವೀರಶೈವ' ಸೋಮಣ್ಣನನ್ನು ಉಚ್ಚಾಟಿಸುವುದು ಕಾಂಗ್ರೆಸ್ ಪಾಲಿಗೆ ಸುಲಭದ ಮಾತಲ್ಲ.

ಇದೆಲ್ಲವನ್ನು ಲೆಕ್ಕಹಾಕಿರುವ ಸೋಮಣ್ಣ ಈಗ ರಾಜಕೀಯರಂಗದಲ್ಲಿ ಅತ್ಯಂತ ಪ್ರಮುಖವಾದ ಆಟವನ್ನು ನಿಧಾನವಾಗಿ ಪ್ರಾರಂಭಿಸಿದ್ದಾರೆ. ಇದಕ್ಕೆ ಹಿನ್ನೆಲೆಯೂ ಇದೆ. ಕಳೆದ ಚುನಾವಣೆಯಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರ ತನಗೇ ಬೇಕೆಂದು ಹಠ ಹಿಡಿದು ಕುಳಿತಿದ್ದರು ಸೋಮಣ್ಣ. ಆದರೆ ಅದು ಲೇಟೆಸ್ಟ್ ಕೃಷ್ಣಪ್ಪನವರ ಪಾಲಾಯಿತು. ತಾನೇ ಸ್ಥಾಪಿಸಿರುವ ಈ 'ವಿಜಯನಗರ ಸಾಮ್ರಾಜ್ಯ' ತನ್ನ ಎದುರಾಳಿ ಕೃಷ್ಣಪ್ಪನವರ ಪಾಲಾದಾಗ ಸಹಜವಾಗಿಯೇ ಸೋಮಣ್ಣ ಕೆಂಡಾಮಂಡಲವಾದರು. ಈ 'ಅವಮಾನ' ಸಾಲದೆಂಬಂತೆ ಸೋಮಣ್ಣನಿಗೆ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರವನ್ನು ಕೊಟ್ಟಾಗ ಅವರು ಇನ್ನಷ್ಟು ಕುಪಿತಗೊಂಡಿದ್ದರು. ಯಾಕೆಂದರೆ ಸೋಮಣ್ಣನ ಪಾಲಿಗೆ ಇದು ಅಪರಿಚಿತ ಕ್ಷೇತ್ರವಾಗಿತ್ತು. ಇದೆಲ್ಲ ನಡೆದ ನಂತರ ಸೋಮಣ್ಣನವರ ರಾಜಕೀಯ ಗಾಡ್‌ಫಾದರ್ ಎಸ್.ಎಂ.ಕೃಷ್ಣರನ್ನು ಚುನಾವಣಾ ಕಣದಿಂದ ಹೈಕಮಾಂಡ್ ದೂರವಿಟ್ಟಾಗ ಸೋಮಣ್ಣನ ಜಂಘಾಬಲವೇ ಕುಗ್ಗಿಹೋಗಿತ್ತು. ಅದರ ಹಿಂದೆಯೂ ಸೋಮಣ್ಣನ ರಾಜಕೀಯ ಲೆಕ್ಕಾಚಾರಗಳಿದ್ದವು. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಆಗ ಈ ಖರ್ಗೆ, ಸಿದ್ದರಾಮಯ್ಯ ಮೊದಲಾದವರು ತನ್ನ ಬೆಳವಣಿಗೆಗೆ ಅಡ್ಡಿಯಾಗುತ್ತಾರೆ ಎಂಬುದು ಸೋಮಣ್ಣನವರ ಭಯವಾಗಿತ್ತು.






ಆದರೆ ಈಗ ಈ ಲೆಕ್ಕಾಚಾರವೆಲ್ಲ ಮಣ್ಣುಪಾಲಾಗಿ ಕಾಂಗ್ರೆಸ್ ಪಕ್ಷವೇ ಮುಳುಗುವ ದೋಣಿ ಯಂತಾಗಿದೆ. ಹೀಗಾಗಿ ಈ ಮುಳುಗುವ ದೋಣಿಯಿಂದ ಬೇರೆ ದೋಣಿಗೆ ಹಾರುವ ಮತ್ತು ಆ ಪಕ್ಷದಲ್ಲಿ ವಿಜೃಂಭಿಸುವ ತಂತ್ರವನ್ನು ಸೋಮಣ್ಣ ಹೆಣೆಯುತ್ತಿರುವಂತಿದೆ.

ಹಾಗೆ ನೋಡಿದರೆ ಚುನಾವಣೆಯ ಮೊದಲೇ ಸೋಮಣ್ಣ ಬಿಜೆಪಿಗೆ ಹಾರಲಿದ್ದಾರೆ ಎಂಬ ಸುದ್ದಿ ಎಲ್ಲೆಡೆ ಹರಡಿತ್ತು, ಆದರೆ ಹೈಕಮಾಂಡನ್ನು ಹೆದರಿಸಿ ತನಗೆ ಬೇಕಿದ್ದ ವಿಜಯನಗರ ಕ್ಷೇತ್ರವನ್ನು ಪಡೆಯಲು ಸೋಮಣ್ಣನೇ ಸೃಷ್ಟಿಸಿದ್ದ ಸುದ್ದಿ ಅದಾಗಿತ್ತು, ಈಗಲೂ ಅಂತಹ ಸುದ್ದಿಗೆ ಮತ್ತೆ ಜೀವ ಕೊಡಲು ಸೋಮಣ್ಣ ಪ್ರಯತ್ನಿಸುತ್ತಿದ್ದಾರೆ. ಅವರ ಈ ಪ್ರಯತ್ನಕ್ಕೆ ಅವರ ಜಾತಿ ಬಾಂಧವರಾದ ಮುಖ್ಯಮಂತ್ರಿ ಯಡಿಯೂರಪ್ಪನವರೂ ಸ್ಪಂದಿಸುತ್ತಿರುವುದು ರಾಜಕೀಯ ವಲಯದಲ್ಲಿ ನಡೆಯುತ್ತಿರುವ ಒಂದು ಬೆಳವಣಿಗೆಯಾಗಿದೆ.

ಹೇಗಿದ್ದರೂ ಯಡಿಯೂರಪ್ಪನವರು ಬಿಜೆಪಿಯನ್ನು ಸಂಪೂರ್ಣವಾಗಿ ಲಿಂಗಾಯತರ ಪಕ್ಷವಾಗಿ ಪರಿವರ್ತಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಉದಾಹರಣೆಗೆ ಬಿಜೆಪಿ ಪಕ್ಷ ಅಧಿಕಾರಕ್ಕೆ ಬಂದ ಕೂಡಲೇ ಬೆಳಗಾವಿಯ ಕ್ಯಾಪಿಟೇಷನ್ ಕುಳ, ಲಿಂಗಾಯತ ಸಮುದಾಯಕ್ಕೆ ಸೇರಿದ ಪ್ರಭಾಕರ ಕೋರೆಯನ್ನು ಬಿಜೆಪಿಗೆ ಸೇರಿಸಿಕೊಂಡು ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿಸಿದ್ದು ಯಡ್ಡಿ ಮಾಡಿದ ಮೊದಲನೆ ಮಹಾ ಸಾಧನೆ. ಹಾಗೆಯೇ ಹುಬ್ಬಳ್ಳಿ-ಧಾರವಾಡದ ವಿಜಯ ಸಂಕೇಶ್ವರ ಎಂಬ ಮತ್ತೊಬ್ಬ ಲಿಂಗವಂತನನ್ನೂ ಯಡ್ಡಿ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದಾರೆ.

ಇನ್ನು ಚುನಾವಣೆಯ ಮೊದಲೇ ಬೊಮ್ಮಾಯಿ ಪುತ್ರ ಬಸವರಾಜ್ ಬೊಮ್ಮಾಯಿ ಅವರನ್ನು ಹಾರ ಹಾಕಿ ಪಕ್ಷಕ್ಕೆ ಯಡ್ಡಿ ಸ್ವಾಗತಿಸಿದರಲ್ಲದೆ ಅವರನ್ನೀಗ ಕ್ಯಾಬಿನೆಟ್ ದರ್ಜೆಯ ಸಚಿವರನ್ನಾಗಿಸಿದ್ದಾರೆ. ಇದೆಲ್ಲದರೊಂದಿಗೆ ಮತ್ತೊಬ್ಬ ಲಿಂಗಾಯತ ಲೀಡರ್ ಜಗದೀಶ ಶೆಟ್ಟರ್ ಮುಂದೊಂದು ದಿನ ತನಗೆ ಪರ್ಯಾಯ ಲಿಂಗಾಯತ ನಾಯಕನಾಗಿ ಬೆಳೆಯಬಾರದೆಂದು ಅವರಿಗೆ ಸ್ಪೀಕರ್ ಸ್ಥಾನ ಕೊಟ್ಟು ಮೂಲೆಗುಂಪು ಮಾಡಿದ್ದಾರೆ ಯಡ್ಡಿ.



ಇದೆಲ್ಲದರ ಹಿಂದೆ ಯಡ್ಡಿಯ ಜಾತಿರಾಜಕಾರಣದೊಂದಿಗೆ ಬಿಜೆಪಿ ಪಕ್ಷದೊಳಗಿನ ಮೇಲಾಟದ ತಂತ್ರವೂ ಅಡಗಿದೆ. ಒಂದೆಡೆ ತಮ್ಮ ಹಿಂದೆ ತನ್ನ ಜಾತಿಯವರನ್ನೇ ಸೇರಿಸಿಕೊಳ್ಳುವುದು, ಇನ್ನೊಂದೆಡೆ ತನ್ನ ಪರಮ ವೈರಿ ಅನಂತಕುಮಾರನ ಬೆಂಬಲಿಗರನ್ನು ಮೂಲೆಗುಂಪು ಮಾಡಿ ಪಕ್ಷದ ಮೇಲೆ ತನ್ನ ಹಿಡಿತವನ್ನು ಗಟ್ಟಿಮಾಡಿಕೊಳ್ಳುವುದು. ಹೀಗೆ ಒಂದು ಕಲ್ಲಿನಿಂದ ಎರಡು ಗುರಿಗಳನ್ನು ತಲುಪುತ್ತಿರುವ ಯಡ್ಡಿ ಈಗ ಸೋಮಣ್ಣನ ಮೂಲಕ ಒಂದೇ ಕಲ್ಲಿನಿಂದ ಮೂರು ಗುರಿಗಳನ್ನು ತಲುಪಲು ಯತ್ನಿಸುತ್ತಿದ್ದಾರೆ.

ಆ ಮೂರನೆ ಗುರಿ ಸದ್ಯದಲ್ಲೇ ಬೃಹತ್ ಬೆಂಗಳೂರು ಮಹಾಪಾಲಿಕೆಗೆ ನಡೆಯಲಿರುವ ಚುನಾವಣೆಗಳು!

ಹೇಗಿದ್ದರೂ ಈ ಬಾರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ನಡೆಯಲಿರುವ ಚುನಾವಣೆಯಲ್ಲಿ ಮೇಯರ್ ಪದವಿಗೆ ನೇರವಾದ ಮತದಾನ ನಡೆಸುವ ಪ್ರಯತ್ನವನ್ನು ಬಿಜೆಪಿ ಮಾಡುತ್ತಿದೆ. ಅಂದರೆ ಅಧಿಕ ಸ್ಥಾನಗಳನ್ನು ಪಡೆಯುವ ಪಕ್ಷದ ಕಾರ್ಪೊರೇಟರ್‌ಗಳು ಮೇಯರ್‌ಅನ್ನು ಆಯ್ಕೆ ಮಾಡುವ ಬದಲಾಗಿ ಬೆಂಗಳೂರಿನ ನಾಗರಿಕರೇ ನೇರವಾಗಿ ಮೇಯರ್ ಅನ್ನು ಆಯ್ಕೆ ಮಾಡುವ ವ್ಯವಸ್ಥೆಯನ್ನು ತರಲು ಬಿಜೆಪಿಗಳು ಕುತಂತ್ರವನ್ನು ರೂಪಿಸುತ್ತಿದ್ದಾರೆ.

ಅದು ಯಶಸ್ವಿಯಾದರೆ, ಯಾರು ಬೆಂಗಳೂರಿನ ಮಹಾನಗರ ಪಾಲಿಕೆಯ ಮೇಯರ್ ಆಗಿ ಮುಂದಿನ ಆರು ವರ್ಷಗಳ ಅವಧಿಗೆ ಆಯ್ಕೆಯಾಗುತ್ತಾರೋ, ಅವರು ಪರೋಕ್ಷವಾಗಿ ಬೆಂಗಳೂರು ನಗರದ ಮುಖ್ಯಮಂತ್ರಿಯಂತಿರುತ್ತಾರೆ. ಅಷ್ಟೇ ಅಲ್ಲ, ಅಂತಹ ಅಧಿಕಾರದೊಂದಿಗೆ ಅಭಿವೃದ್ಧಿಯ ಹೆಸರಲ್ಲಿ ಹರಿದು ಬರಲಿರುವ ಕೋಟ್ಯಂತರ ರೂಪಾಯಿಗಳ ಮೇಲೂ ಮೇಯರ್‌ಗೆ ಹಿಡಿತವಿರುತ್ತದೆ. ಈಗಾಗಲೇ ಬೆಂಗಳೂರಿನ ಯೋಜನೆಗಳಿಗೆಂದೇ ಯಡ್ಡಿ ಸರ್ಕಾರ ಹಲವಾರು 'ಸ್ಕೀಮ್'ಗಳನ್ನು ಹಾಕಿದೆಯಲ್ಲದೆ ಅದಕ್ಕೆಂದು ಸಾಕಷ್ಟು ಹಣವನ್ನು ಚೆಲ್ಲಲು ರೆಡಿ ಇದೆ. ಅಫ್ ಕೋರ್ಸ್, ಇದೆಲ್ಲದರೊಂದಿಗೆ ತಾನು ಹೈಟೆಕ್ ನಗರವಾದ ಬೆಂಗಳೂರಿನ ಪ್ರಥಮ ಪ್ರಜೆಯೆಂದು ಇಡೀ ವಿಶ್ವದ ಮುಂದೆ ಮೆರೆಯುವ ಅವಕಾಶವೂ ಅಂತಹ ವ್ಯಕ್ತಿಗೆ ಸಿಗುತ್ತದೆ!

ಇಂತಹ ಒಂದು ಸ್ಥಾನ-ಮಾನದ ಮೇಲೆ ಈಗಾಗಲೇ ಪರಮ ಭ್ರಷ್ಟ ಮತ್ತು ಬೆಂಗಳೂರಿನ ದೊಡ್ಡ ಭೂ ಕಳ್ಳ ಸಚಿವ ಅಶೋಕ್ ಕಣ್ಣಿಟ್ಟಿದ್ದರು. ಆದರೆ ಹಿಂದೊಮ್ಮೆ ತನ್ನ ಎದುರಾಳಿ ಅನಂತಕುಮಾರನ ಪಟ್ಟದ ಶಿಷ್ಯ ಆಗಿದ್ದ ಅಶೋಕ್ ಬಗ್ಗೆ ಯಡ್ಡಿಗೆ ನಂಬಿಕೆ ಇಲ್ಲ, ಅಕಸ್ಮಾತ್ ಅಶೋಕ್ ಈ ಮೇಯರ್ ಸ್ಥಾನವನ್ನು ಅಲಂಕರಿಸಿದ್ದೇ ಆದರೆ ಭವಿಷ್ಯದ ದಿನಗಳಲ್ಲಿ ತನಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂಬುದು ಯಡಿಯೂರಪ್ಪನವರ ಲೆಕ್ಕಾಚಾರ. ಈ ಕಾರಣಕ್ಕಾಗಿಯೇ ನಗರಾಭಿವೃದ್ಧಿ ಖಾತೆಯನ್ನು ತನಗೆ ನೀಡಬೇಕೆಂದು ಅಶೋಕ್ ಬೇಡಿಕೊಂಡಿದ್ದರೂ ಆತನಿಗೆ ಯಡ್ಡಿ ಸಾರಿಗೆ ಇಲಾಖೆ ನೀಡಿ ತೆಪ್ಪಗಾಗಿಸಿದ್ದರು.

ಹೇಳಿಕೇಳಿ ಸೋಮಣ್ಣ ಕಾರ್ಪೊರೇಟರ್ ಆಗಿ ತನ್ನ ರಾಜಕೀಯ ಜೀವನವನ್ನು ಆರಂಭಿಸಿದವರು. ಅಷ್ಟೇ ಅಲ್ಲ, ಬಹುತೇಕ ಕಾರ್ಪೊರೇಟರ್‌ಗಳು ಯಾವುದೇ ಪಕ್ಷದಲ್ಲಿದ್ದರೂ ಅವರೆಲ್ಲ ಸೋಮಣ್ಣನ ಸ್ನೇಹಿತರು. ಇದಕ್ಕೂ

# ಶಿವಮೊಗ್ಗ: ಶುರುವಾಗಿದೆ ಗುಜರಾತ್ ಮಾದರಿ ಆಡಳಿತ

'ನಮ್ಮ ಹೃದಯದಲ್ಲಿ ಕೇಸರಿಯಿದೆ. ಹಸಿರು ಶಾಲು ಹೊದ್ದಿದ್ದು ಜನರಿಗೆ-ರೈತರಿಗೆ ತೋರಿಸಲು ಮಾತ್ರ' ಎಂದು ಬಿಜೆಪಿಯ ಹಿರಿಯ ಮುಖಂಡ, ಇಂಧನ ಸಚಿವ ಕೆ.ಎಸ್. ಈಶ್ವರಪ್ಪ ವಿಧಾನ ಸಭೆಯಲ್ಲಿ ತಮ್ಮ ಮನದಾಳದ ಮಾತನ್ನು ಧೈರ್ಯವಾಗಿ ಹೇಳುತ್ತಿದ್ದರೆ, ರೈತ ನನ್ನು ಗುಂಡಿಕ್ಕಿ ಕೊಂದ ಮುಖ್ಯ ಮಂತ್ರಿ ಯಡಿಯೂರಪ್ಪ 'ಹೌದೌದು' ಎಂಬಂತೆ ಗೋಣು ಆಡಿಸುತ್ತಿದ್ದರು.



ಈ ಚೆಡ್ಡಿಗಳ ಮನಸ್ಸಿನಲ್ಲಿ ಅದೆಂತಹ ಕ್ರೌರ್ಯ ಮತ್ತು ಕಿಡಿಗೇಡಿತನ ಅಡಗಿದೆ ಎಂಬುದಕ್ಕೆ, ಶಿವಮೊಗ್ಗೆಯ ಈ ಇಬ್ಬರು ನಾಯಕರ ನಡೆನುಡಿಯಲ್ಲಿ ಮಾತ್ರವಲ್ಲ, ಅವರ ಹಿಂಬಾಲಕರು ಇವತ್ತು ಅವರ ಜಿಲ್ಲೆಯಾದ ಶಿವಮೊಗ್ಗೆಯಲ್ಲೇ ನಡೆಸುತ್ತಿರುವ ದೌರ್ಜನ್ಯದಲ್ಲೂ ವ್ಯಕ್ತವಾಗುತ್ತಿದೆ. ಇದಕ್ಕೆ ಇತ್ತೀಚೆಗೆ ಶಿವಮೊಗ್ಗ ಮತ್ತು ಶಿಕಾರಿಪುರದಲ್ಲಿ ನಡೆದ ಎರಡು ಘಟನೆಗಳೇ ಸಾಕ್ಷಿ ನೀಡುತ್ತವೆ. ಯಾಕೆಂದರೆ ಅಲ್ಲಿ ಇವರಿಬ್ಬರ ಶಿಷ್ಯಂದಿರು 'ಗುಜರಾತ್ ಮಾದರಿ'ಯ ಆಡಳಿತವನ್ನು ಪ್ರಾರಂಭಿಸಿದ್ದಾರೆ. ಆ ಮಾದರಿ ಅದೆಂತಹದ್ದು ಎಂಬುದನ್ನು ರಾಜ್ಯದ ಇತರೆ ಜಿಲ್ಲೆಗಳಲ್ಲಿನ ಜನರ ಅರಿವಿಗೆ ಬರಲೆಂದು ಇಲ್ಲಿ ನೀಡುತ್ತಿದ್ದೇವೆ.


ವಾಸ್ತವವಾಗಿ ಹೇಳಬೇಕೆಂದರೆ ಇವತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಸರ್ಕಾರಿ ಆಡಳಿತ ಮತ್ತು ನ್ಯಾಯಾಂಗ ಎಂಬುದು ನೆಪಮಾತ್ರಕ್ಕೆ ಇರುವಂತಿವೆ. ಯಾಕೆಂದರೆ ಅಲ್ಲಿ ನಮ್ಮ ಪ್ರಜಾಪ್ರಭುತ್ವದ ಈ ಅಂಗಗಳ 'ಜವಾಬ್ದಾರಿ'ಯನ್ನು ಚೆಡ್ಡಿ ಸಂಘಟನೆಗಳ ಸದಸ್ಯರೇ ವಹಿಸಿಕೊಂಡಿದ್ದಾರೆ!

### ಸರ್ಕಾರಿ ಕಚೇರಿಯ ಮೇಲೆ ಚೆಡ್ಡಿಗಳ ದಾಳಿ

'ಹಿಡಿ -ಕಟ್ಟು-ಕೊಲ್ಲು' ಎಂಬುದನ್ನೇ ತನ್ನ ಧ್ಯೇಯ ವಾಕ್ಯವಾಗಿಸಿಕೊಂಡಿರುವ ಸಂಘಪರಿವಾರದ ಗೂಂಡಾ ಪಡೆ ಬಜರಂಗದಳ ಇತ್ತೀಚೆಗೆ ಶಿವಮೊಗ್ಗದಲ್ಲಿ ರಾಜಸ್ವ ನಿರೀಕ್ಷಕರ ಕಚೇರಿ ಮೇಲೆ ದಾಳಿ ನಡೆಸಿ, ಅವರ ಕಚೇರಿ ಯನ್ನು ತೆರವುಗೊಳಿಸುವ ಕೆಲಸ ಮಾಡಿದೆ. ಆ ಮೂಲಕ ಕಾನೂನ ನ್ನು ಅಕ್ರಮವಾಗಿ ಕೈಗೆತ್ತಿಕೊಂಡಿದೆ.

ಹೊಳಲೂರಿನ ರಾಜಸ್ವ ನಿರೀಕ್ಷಕ ನಾರಾಯಣ್ ಸಾರ್ವಜನಿಕರ ಅನುಕೂಲಕ್ಕೆಂದು ಕೋಟೆ ಆಂಜನೇಯ ದೇವಾಲಯದ ಮುಂಭಾಗವಿರುವ ವಾಣಿಜ್ಯ ಮಳಿಗೆಯಲ್ಲಿ ಕಚೇರಿಯೊಂದನ್ನು ತೆರೆದಿದ್ದರು. ಈ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು, ಮಳಿಗೆಗಳನ್ನು ಇಲಾಖೆಯೇ ಬಾಡಿಗೆಗೆ ನೀಡಿದೆ.

ಅದ್ಯಾವ ಕಾರಣಕ್ಕೋ ರಾಜಸ್ವ ನಿರೀಕ್ಷಕ ನಾರಾಯಣ್ ಕಳೆದ ಒಂದೂವರೆ ವರ್ಷದಿಂದ ಸರಿಯಾಗಿ ಬಾಡಿಗೆ ನೀಡಿರಲಿಲ್ಲ, ತಹಶೀಲ್ದಾರರು ಈ ಬಗ್ಗೆ ನೋಟೀಸ್ ಕೂಡ ಅವರಿಗೆ ನೀಡಿದ್ದರು. ಅದಕ್ಕೆ ಪ್ರತಿಕ್ರಿಯಿಸಿದ ನಾರಾಯಣ್ "ಬಾಡಿಗೆ ಜಾಸ್ತಿ ಆಯಿತು, 400 ರೂ. ಬಾಡಿಗೆಯಾದರೆ ಪಾವತಿ ಮಾಡುತ್ತೇನೆ" ಎಂಬ ವಿವರಣೆಯನ್ನು ತಹಶೀಲ್ದಾರರಿಗೆ ನೀಡಿದ್ದರು. ಸರಕಾರದ ಎರಡು ಇಲಾಖೆಗಳ ನಡುವಿದ ಈ ವಿವಾದ ಸದ್ಯದಲ್ಲೇ ಕಾನೂನು ಪ್ರಕಾರ ಇತ್ಯರ್ಥವಾಗಲಿತ್ತು.



ಅಷ್ಟರಲ್ಲಿ ಬಜರಂಗದಳ ಎಂಬ ಚೆಡ್ಡಿ ಸಂಘಟನೆಯ ಮಂಗಗಳು ಕಾನೂನನ್ನು ತಮ್ಮ ಕೈಗೆತ್ತಿಕೊಂಡರು. ತಮ್ಮ ಸಂಘಟನೆಯ ಜಿಲ್ಲಾ ಸಂಚಾಲಕ ದೀನದಯಾಳ್ ಎಂಬ ಹಿರಿಮಂಗನ ನೇತೃತ್ವದಲ್ಲಿ ನಾಲ್ಕೈದು ಪುಂಡರು ಜೂನ್ 17ರಂದು ರಾಜಸ್ವ ನಿರೀಕ್ಷಕರ ಕಚೇರಿ ಮೇಲೆ ದಾಳಿ ನಡೆಸಿ, ಅವರ ಕಚೇರಿಯ ಪೀಠೋಪಕರಣಗಳನ್ನು ಬೀದಿಗೆ ಬಿಸಾಕಿ, ಕಚೇರಿಯನ್ನು ತೆರವುಗೊಳಿಸಿದರು. ಭಜರಂಗದಳದ ಈ ಪುಂಡಾಟಿಕೆ ನಡೆಯುತ್ತಿದ್ದಾಗ ಸ್ಥಳದಲ್ಲೇ ಇದ್ದ ಕೋಟೆ ಪೊಲೀಸ್ ಠಾಣೆಯ ಸಿಬ್ಬಂದಿ ಕೈಕಟ್ಟಿ ನೋಡುತ್ತಾ ನಿಂತಿದ್ದರೆ ಹೊರತು ಈ ಪುಂಡರಿಗೆ ನಾಲ್ಕು ಬಗಿದು ಅವರನ್ನು ಬಂಧಿಸುವುದಕ್ಕೆ ಮುಂದಾಗಲಿಲ್ಲ.

ಅಂದಹಾಗೆ ಈ ಕೃತ್ಯ ನಡೆದದ್ದು 'ಬಾಯಿ ಹರುಕ' ಎಂಬ ಖ್ಯಾತಿಯ ಸಚಿವ ಈಶ್ವರಪ್ಪನ ಮನೆಯಿಂದ ಮಾರುದೂರದಲ್ಲಿ! ಕೋಟೆ ಪೊಲೀಸ್ ಠಾಣೆಯ ಹತ್ತಿರದಲ್ಲಿ! ಹೇಗಿದ್ದರೂ ತಮ್ಮಂತಹ ಪುಂಡರೇ ಅಧಿಕಾರದಲ್ಲಿರುವಾಗ ಯಾವ ಪೊಲೀಸ್ ತಾನೇ ತಮಗೇನು ಮಾಡಲು ಸಾಧ್ಯ ಎಂಬ ಅಹಂನಿಂದ ಈಗಾಗಲೇ ಶಿವಮೊಗ್ಗೆಯ ಚೆಡ್ಡಿಗಳು ಮೆರೆಯಲು ಶುರುಮಾಡಿದ್ದಾರೆ. ಅವರ ಇಂತಹ ದೌರ್ಜನ್ಯವನ್ನು ಹೀಗೆ ಮುಂದುವರೆಯಲು ಬಿಟ್ಟರೆ ನಾಳೆ ಶಿವಮೊಗ್ಗೆ ಬಿಹಾರವನ್ನೂ ಮೀರಿಸಿದರೆ ಆಶ್ಚರ್ಯವಿಲ್ಲ.



ಶಿವಮೊಗ್ಗೆಯ ಪೊಲೀಸರಿಗೆ ಬಜರಂಗದಳದ ಪುಂಡರು ಸರ್ಕಾರಿ ಕಚೇರಿಯ ಮೇಲೆ ದಾಳಿ ನಡೆಸುತ್ತಿದ್ದಾರೆ ಎಂಬುದೂ ಅರಿವಾಗದಿದ್ದದ್ದು 'ಗುಜರಾತ್ ಮಾದರಿ'ಯೇ ಆಗಿದೆ. ಹೇಗಿದ್ದರೂ ನರೇಂದ್ರ ಮೋದಿಯ ಗುಜರಾತಿನಲ್ಲಿ ಇಂತಹದ್ದೇ ಹಿಂದೂತ್ವದ ಪುಂಡರು ಅಮಾಯಕ ಅಲ್ಪಸಂಖ್ಯಾತರನ್ನು ಅಟ್ಟಾಡಿಸಿಕೊಂಡು ಬಡಿಯುವಾಗ, ಅವರ ಮಹಿಳೆಯರ ಮೇಲೆ ಅತ್ಯಾಚಾರ ಮಾಡುವಾಗ, ಅವರ ಮನೆಗಳನ್ನು ಲೂಟಿ ಮಾಡಿ ಬೆಂಕಿ ಹಚ್ಚುತ್ತಿರುವಾಗ ಅಲ್ಲಿನ ಪೊಲೀಸರೂ ಹೀಗೆ ಕೈಕಟ್ಟಿ ನಿಂತಿದ್ದರಲ್ಲವೇ?!


### ದೂರು ಕೊಟ್ಟವರನ್ನು ಬಡಿಗೆಯಿಂದ ಬಡಿದರು!

ಓರ್ವ 'ಮಾಮೂಲಿ' ಸಚಿವ ಈಶ್ವರಪ್ಪನ ಶಿಷ್ಯಂದಿರೇ ಶಿವಮೊಗ್ಗೆಯಲ್ಲಿ ಹೀಗೆ ಕಾನೂನನ್ನು ತಮ್ಮ ಕೈಗೆತ್ತಿಕೊಂಡು ಪುಂಡಾಟಿಕೆ ನಡೆಸಿದ್ದರೆ ಇನ್ನು ಶಿಕಾರಿಪುರದಲ್ಲಿರುವ 'ಮಾನ್ಯ' ಮುಖ್ಯಮಂತ್ರಿ ಯಡ್ಡಿಯೂರಪ್ಪನ ಪಟಾಲಂ ಸುಮ್ಮನಿರಲು ಸಾಧ್ಯವೇ? ಅವರೂ ಕೂಡ ತಮ್ಮ ಇಂತಹ 'ತಾಕತ್ತನ್ನು' ಇತ್ತೀಚೆಗೆ ಮೆರೆದಿದ್ದಾರೆ. ಸರ್ಕಾರದ ವಿರುದ್ಧ ಮಾತನಾಡಿದವರನ್ನು ಬಡಿಗೆಯಿಂದ ಬಡಿಯುವಷ್ಟು ಮುಂದುವರೆದಿದ್ದಾರೆ.

ನಡೆದದ್ದು ಇಷ್ಟೇ: ಮುಖ್ಯಮಂತ್ರಿ

ಮಿಗಿಲಾಗಿ, ಯಾರು ಮಹಾನಗರ ಪಾಲಿಕೆಯ ಮೇಯರ್ ಆಗಬೇಕು, ಯಾರು ಉಪ ಮೇಯರ್ ಆಗಬೇಕು ಎಂದು ನಿರ್ಧರಿಸುವವರು ಸೋಮಣ್ಣ, ರಾಮಲಿಂಗಾರೆಡ್ಡಿ ಮತ್ತು ಬಿ.ಕೆ. ಹರಿಪ್ರಸಾದ್. ಈ ಮೂವರಲ್ಲಿ ಪ್ರತೀ ಬಾರಿಯೂ ಕಿಂಗ್‌ಮೇಕರ್ ಆಗಿ ಹೊಮ್ಮಿರುವವರು ದಿ ಗ್ರೇಟ್ ಸೋಮಣ್ಣ!

ಈ ಎಲ್ಲ ವಿಷಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಯಡಿಯೂರಪ್ಪನವರು ಸೋಮಣ್ಣನಿಗೆ ವೀಳ್ಯದೆಲೆ ಕೊಟ್ಟು ಬಿಜೆಪಿ ಪಕ್ಷ ಸೇರುವಂತೆ ಅವರನ್ನು ಆಹ್ವಾನಿಸಿದ್ದಾರೆ. "ನೀವು ನಮ್ಮ ಪಕ್ಷಕ್ಕೆ ಬಂದಲ್ಲಿ ಮುಂದಿನ ಆರು ವರ್ಷಗಳ ಕಾಲ ಬೆಂಗಳೂರಿನ ಪ್ರಥಮ ಪ್ರಜೆಯಾಗಿ ಮೆರೆಯುವಂತೆ ನೋಡಿಕೊಳ್ಳುತ್ತೇನೆ" ಎಂಬ ಅಶ್ವಾಸನೆಯನ್ನೂ ನೀಡಿದ್ದಾರೆ. ಬೆಂಗಳೂರಿನಿಂದ ಈಗಾಗಲೇ 18 ಜನ ಭಾರತೀಯ ಜನತಾ ಪಕ್ಷದ ಶಾಸಕರು ಆಯ್ಕೆಯಾಗಿರುವುದರಿಂದ ಮತ್ತು ಬೆಂಗಳೂರಿನಲ್ಲಿ ಬಿಜೆಪಿ ಹವಾ ಬೀಸುತ್ತಿರುವುದರಿಂದ ನಗರಪಾಲಿಕೆ ಚುನಾವಣೆಯಲ್ಲೂ ಬಿಜೆಪಿಯೇ ಅಧಿಕಾರಕ್ಕೆ ಬರಬಹುದು ಎಂದು ಬಹುತೇಕ ರಾಜಕೀಯ ಪಂಡಿತರು ಭವಿಷ್ಯ ನುಡಿದಿದ್ದಾರೆ.



ಆಕಸ್ಮಾತ್ ಈ ಹೊಸ ಕಲ್ಪನೆಯ ಮೇಯರ್ ಸ್ಥಾನಮಾನ ನನಸಾಗದಿದ್ದರೂ ಮಹಾನಗರ ಪಾಲಿಕೆಯ ಚುನಾವಣೆಯಲ್ಲಿ ಪ್ರಮುಖ ಪಾತ್ರ ವಹಿಸಿ ಆ ಪಕ್ಷದ ಗೆಲುವಿಗೆ ನೆರವಾದರೆ ಮುಂದೆ ಬಿಜೆಪಿಯಲ್ಲಿ ತನಗೆ ಸೂಕ್ತ ಸ್ಥಾನ ಸಿಗುತ್ತದೆ ಎಂಬ ನಂಬಿಕೆ ಸೋಮಣ್ಣನವರದ್ದು. ಹೀಗಾಗಿ ಯಡ್ಡಿಯ ಈ ಆಹ್ವಾನದಿಂದ ಪುಳಕಿತಗೊಂಡಿರುವ ಸೋಮಣ್ಣ ತಾವೀಗ ಇರುವ ಕಾಂಗ್ರೆಸ್ ಪಕ್ಷದ ಹೈ ಕಮಾಂಡ್ ವಿರುದ್ಧ ದಿನಕ್ಕೊಂದು ಬಾಂಬ್ ಸಿಡಿಸುತ್ತಲೇ ಇದ್ದಾರೆ.

ಸೋಮಣ್ಣನವರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವುದರಿಂದ ತಾನು ಆರಾಮಾಗಿರಬಹುದು ಎಂಬ ದೂರದೃಷ್ಟಿ ಯಡಿಯೂರಪ್ಪನದ್ದು. ಯಾಕೆಂದರೆ ಈತ ತನ್ನ ಜಾತಿ ಬಾಂಧವ ಮಾತ್ರವಲ್ಲ, ಮುಂದೆ ಪಕ್ಷೇತರರು ಬಿಜೆಪಿಗೆ ನೀಡಿರುವ ಬೆಂಬಲವನ್ನು ವಾಪಾಸು ಪಡೆದು ತಮ್ಮ ಸರ್ಕಾರವನ್ನು ಸಂಕಷ್ಟಕ್ಕೆ ದೂಡಿದರೆ ಆಗ ಇದೇ ಸೋಮಣ್ಣ ತಮ್ಮ ನೆರವಿಗೆ ಬರಬಲ್ಲ ಆಸಾಮಿಯಂತೆ ಯಡ್ಡಿಗೆ ಕಾಣಿಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಈಗ ಕಾಂಗ್ರೆಸ್‌ನಲ್ಲಿ ಅತೃಪ್ತ ಪ್ರೇತಾತ್ಮಗಳಂತೆ ಓಡಾಡುತ್ತಿರುವ ಉಮೇಶ್ ಕತ್ತಿ, ಮಹದೇವಪ್ರಸಾದ್, ಕಡೂರು ಕೃಷ್ಣಮೂರ್ತಿ, ಅಮರೇಗೌಡ ಬಯ್ಯಾಪುರ ಮೊದಲಾದವರನ್ನು ಬಿಜೆಪಿಗೆ ಕರೆತರುವ ಮಾಸ್ಟರ್‌ಪ್ಲಾನ್ ಅನ್ನು ಯಡ್ಡಿ ಸೋಮಣ್ಣನ ಜೊತೆ ಸೀಕ್ರೆಟ್‌ಆಗಿ ರೆಡಿ ಮಾಡಿದ್ದಾರಂತೆ.

ಇಷ್ಟಾದರೂ ಸೋಮಣ್ಣ ಬಿಜೆಪಿಗೆ ಸೇರುವುದು ಖಚಿತ ಎಂದು ಈಗಲೇ ಹೇಳಲಾಗುವುದಿಲ್ಲ. ಮೇಯರ್ ಪದವಿ ನೇರವಾಗಿ ಜನರಿಂದಲೇ ಆಯ್ಕೆಯಾಗುವುದಾದರೆ ಮಾತ್ರ ಸೋಮಣ್ಣ ಬಿಜೆಪಿಗೆ ಪಕ್ಷಾಂತರ ಮಾಡಬಹುದು. ಇಲ್ಲದಿದ್ದರೆ ಸದ್ಯ ಈಗ ಕಾಂಗ್ರೆಸ್‌ನಲ್ಲಿರುವ ಲಿಂಗಾಯತ ಸಮುದಾಯದ ಎಂ.ವಿ.ರಾಜಶೇಖರನ್, ಕೌಜಲಗಿ ತರಹದ ನಾಯಕರೆಲ್ಲಾ ಮುದಿಯರಾಗಿರುವುದರಿಂದ ಭವಿಷ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಲಿಂಗಾಯತ ಕೋಮಿನಿಂದ ಮುಂದಿನ ತಲೆಮಾರಿನ ನಾಯಕ ತಾನೇ ಎಂಬ ಅರಿವೂ ಸೋಮಣ್ಣನಿಗಿದೆ.

ಆದರೆ ಸದ್ಯಕ್ಕೆ ಸೋಮಣ್ಣ ಕಾಂಗ್ರೆಸ್‌ನಲ್ಲೇ ಇದ್ದುಕೊಂಡು ಅಲ್ಲಿ ರಾಜಕೀಯ ದೊಂಬರಾಟ ಶುರುಹಚ್ಚಿಕೊಂಡಿದ್ದಾರೆ. ಹೈಕಮಾಂಡ್‌ನ ವೀಕ್ಷಕರಾದ ಪೃಥ್ವಿರಾಜ್ ಚೌವ್ಹಾಣ್ ಮತ್ತು ದಿಗ್ವಿಜಯ ಸಿಂಗ್ ಒಳಗೊಂಡ ಸತ್ಯಶೋಧನಾ ಸಮಿತಿಯ ಮುಂದೆ ಕೂಡಾ ಸೋಮಣ್ಣ ಹೈಕಮಾಂಡ್ ವಿರುದ್ಧ ಬೇಜಾನ್ ದೂರುಗಳನ್ನು ನೀಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರನ್ನು ಕೆಪಿಸಿಸಿ ನಾಯಕತ್ವದಿಂದ ಇಳಿಸಿದರೆ ಮಾತ್ರ ಪಕ್ಷಕ್ಕೆ ಭವಿಷ್ಯವಿದೆ ಎಂದೂ ಆರ್ಭಟಿಸಿದ್ದಾರೆ. ಖರ್ಗೆಯವರು ಚುನಾವಣಾ ಸಂದರ್ಭದಲ್ಲಿ ಕೆ.ಸಿ. ಕೊಂಡಯ್ಯ ಅವರನ್ನು ಮುಂದಿಟ್ಟು 'ವಸೂಲಾತಿ ಕಾರ್ಯಕ್ರಮ'ವನ್ನು ಮಾಡಿದ್ದಾರೆಯೇ ಹೊರತು ಪಕ್ಷವನ್ನು ಬಲಪಡಿಸಲು ಏನೂ ಮಾಡಿಲ್ಲ ಎಂದು ಆರೋಪಿಸಿದ್ದಾರೆ. ಎಸ್ಸೆಂ ಕೃಷ್ಣ ಅವರನ್ನು ಬೆಂಗಳೂರಿನಿಂದ ಸ್ಪರ್ಧಿಸಲು ಬಿಟ್ಟಿದ್ದರೆ ಕಾಂಗ್ರೆಸ್ ಪಕ್ಷಕ್ಕೆ ಕನಿಷ್ಠ ಇಪ್ಪತ್ತು ಹೆಚ್ಚು ಸ್ಥಾನಗಳು ದೊರಕುತ್ತಿದ್ದವು ಮಾತ್ರವಲ್ಲ, ತಮ್ಮ ಪಕ್ಷವೇ ಅಧಿಕಾರದ ಗದ್ದುಗೆ ಹಿಡಿಯಬಹುದಿತ್ತು ಎಂದೂ ಹೇಳಿದ್ದಾರೆ.

ಅದೇನೇ ಇರಲಿ, ಕಾಂಗ್ರೆಸ್ ಬಗ್ಗೆ ಈ 'ವೀರ'ಶೈವ ಎಷ್ಟೇ ಕೂಗಾಡಿದರೂ ಆತನ ವಿರುದ್ಧ ಆ ಪಕ್ಷ ಸದ್ಯದಲ್ಲೇ ಶಿಸ್ತು ಕ್ರಮವನ್ನು ಕೈಗೊಳ್ಳುವ ಸಾಧ್ಯತೆ ಇಲ್ಲ. ಯಾಕೆಂದರೆ ಆಕಸ್ಮಾತ್ ಸೋಮಣ್ಣನನ್ನು ಕಾಂಗ್ರೆಸ್ ಪಕ್ಷದ ಸದಸ್ಯತ್ವದಿಂದಲೇ ಹೊರಹಾಕಿದರೆ ಅದು ಸೋಮಣ್ಣನ ಮಾರ್ಗವನ್ನು ಇನ್ನಷ್ಟು ಸುಲಭವಾಗಿಸುತ್ತದೆ. ಆಗ ಸೋಮಣ್ಣನ ಶಾಸಕತ್ವ ಉಳಿಯುತ್ತದೆಯಲ್ಲದೆ, ತನ್ನ ಜಾತಿ ಬಂಧು ಯಡ್ಡಿಯೊಂದಿಗೆ ಕೈಜೋಡಿಸಿ ಕಾಂಗ್ರೆಸ್ ಪಕ್ಷಕ್ಕೆ ಇನ್ನಷ್ಟು ಮಣ್ಣು ತಿನ್ನಿಸುವುದಕ್ಕೆ ಯಾವ ಅಡಚಣೆಯೂ ಇಲ್ಲದಂತಾಗುತ್ತದೆ. ಅಂತಹ ಪೆದ್ದುತನ ಕಾಂಗ್ರೆಸ್ ಪಕ್ಷಕ್ಕಿಲ್ಲ ಎಂಬುದೇ ಸೋಮಣ್ಣನವರ ಸದ್ಯದ ಕೊರಗು!

ಅದೆಲ್ಲ ಏನೇ ಇರಲಿ, ಈಗ ದಿನಕ್ಕೊಮ್ಮೆ ಹೈಕಮಾಂಡ್ ವಿರುದ್ಧ ಹೇಳಿಕೆ ನೀಡುತ್ತಿರುವ ಸೋಮಣ್ಣ ಒಮ್ಮೆ ರೆಬೆಲ್ ಸ್ಟಾರ್‌ನಂತೆಯೂ, ಮತ್ತೊಮ್ಮೆ ವಿದೂಷಕನಂತೆಯೂ ಕಾಣಿಸುತ್ತಿರುವುದು ಮಾತ್ರ ಸಂಪೂರ್ಣವಾಗಿ ಸತ್ಯ!

-ಸದಾಶಿವ ಶೆಣೈ

---

ಯಡ್ಡಿಯ ಸ್ವಕ್ಷೇತ್ರದಲ್ಲಿಯೇ ರಸಗೊಬ್ಬರ ಸಿಗಲಿಲ್ಲವೆಂದು ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಈ ರೈತನ ಕುಟುಂಬಕ್ಕೆ ಸಾಂತ್ವನ ಹೇಳಲೆಂದು ವಿರೋಧ ಪಕ್ಷದ ನಾಯಕ ಕಾಂಗ್ರೆಸ್‌ನ ರಾಜ್ಯಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಮನೆಗಳಿಗೆ ಭೇಟಿ ನೀಡಿದಂತೆ ಶಿಕಾರಿಪುರದ ಅಂಜನಾಪುರಕ್ಕೂ ಇತ್ತೀಚೆಗೆ ಹೋಗಿದ್ದರು. ಅಲ್ಲಿಗೆ ಬಂದಿದ್ದ ಹಿತ್ತಲದ ಸೊಸೈಟಿ ನಿರ್ದೇಶಕ ಮತ್ತು ಜಾತ್ಯತೀತ ಜನತಾದಳದ ಮುಖಂಡ ಗಜೇಂದ್ರ ಎಂಬುವವರು ಖರ್ಗೆ ಅವರೊಂದಿಗೆ ಮಾತನಾಡುತ್ತ ಆ ಪ್ರದೇಶದಲ್ಲಿ ಗೊಬ್ಬರದ ಕೊರತೆ ಇದೆ ಎಂದು ವಿವರಿಸಿದರು.

"ನಮ್ಮ ಸೊಸೈಟಿಗೆ ಆರು ಲೋಡ್ ಗೊಬ್ಬರ ಬೇಕಿತ್ತು. ಇದುವರೆಗೆ ಎರಡು ಲೋಡ್ ಮಾತ್ರ ಬಂದಿದೆ. ಇನ್ನು ನಾಲ್ಕು ಲೋಡ್ ಯಾವಾಗ ಬರುತ್ತೋ, ರೈತರಿಗೆ ಏನು ಉತ್ತರ ಕೊಡುವುದೋ ಗೊತ್ತಾಗುತ್ತಿಲ್ಲ" ಎಂದು ಗಜೇಂದ್ರರವರು ಖರ್ಗೆಯವರ ಮುಂದೆ ತಮ್ಮ ಆತಂಕವನ್ನು ತೋಡಿಕೊಂಡರು.

ಇದನ್ನು ಕೇಳಿಸಿಕೊಂಡ ಯಡ್ಡಿಯ ಬಂಟರಾದ ಸಿಕಂದ್ರಪ್ಪ ಮತ್ತು ಇತರರು ಖರ್ಗೆ ಅತ್ತ ತೆರಳುತ್ತಿದ್ದಂತೆಯೇ ಗಜೇಂದ್ರನನ್ನು ಸುತ್ತುವರೆದರು. ತಮ್ಮ ಕೈಗಳಿಗೆ ಸಿಕ್ಕ ಬಡಿಗೆಗಳನ್ನೇ ಹಿಡಿದು "ಖರ್ಗೆಗೆ ನಮ್ಮ ಯಡಿಯೂರಪ್ಪನ ವಿರುದ್ಧ ದೂರು ನೀಡುತ್ತೀಯಾ?" ಎಂದು ದಬಾಯಿಸುತ್ತಾ ಅವರನ್ನು ಮನಸ್ಸೋಇಚ್ಛೆ ಬಡಿಯಲಾರಂಭಿಸಿದರು.

ಅವರ ದಬ್ಬಾಳಿಕೆ ಎಂತಹ ಮಟ್ಟದೆಂದರೆ ಅಲ್ಲಿ ಮಾಧ್ಯಮದ ಮಂದಿ ಇದ್ದರೂ ಅವರೆದುರೇ ತಮ್ಮ ಗೂಂಡಾಗಿರಿ ನಡೆಸಿದರು. ಆಕಸ್ಮಾತ್ ಅಂದು ಖರ್ಗೆಯವರೊಂದಿಗೆ ಮಾಧ್ಯಮದವರೂ ಜಾಗ ಖಾಲಿ ಮಾಡಿದ್ದರೆ ಇವತ್ತು ಗಜೇಂದ್ರ ಬದುಕಿರುತ್ತಿರಲಿಲ್ಲ. ಆತ ತನ್ನ ಸಮುದಾಯದ, ತನ್ನ ಪ್ರದೇಶದ ರೈತರ ಬಿಕ್ಕಟ್ಟಿನ ಬಗ್ಗೆ ತನ್ನ ಆತಂಕವನ್ನು ವ್ಯಕ್ತಪಡಿಸಿದ್ದೇ ಚಡ್ಡಿಗಳ ಕಣ್ಣಿನಲ್ಲಿ ದೊಡ್ಡ ಅಪರಾಧವಾಗಿದ್ದರಿಂದ ಖಂಡಿತವಾಗಿಯೂ ಆತನ ಹೆಣ ಬಿದ್ದಿರುತ್ತಿತ್ತು.

ಯಡ್ಡಿಯ ಬಂಟರು ತಮ್ಮ ಮೇಲೆ ದಾಳಿ ಮಾಡಿದರೆಂದು ಗಜೇಂದ್ರರವರು ಪೊಲೀಸರಿಗೆ ದೂರು ನೀಡಿದರೆ, ಶಿಕಾರಿಪುರದ ಭಟ್ಟಂಗಿ ಪೊಲೀಸರು ಮಾಡಿದ್ದೇನು ಗೊತ್ತೆ? ಅವರ ಮೇಲೆ ಹಲ್ಲೆ ಮಾಡಿದವರಿಗೆ ಜಾಮೀನು ಸಿಗುವಂತಹ ಸಣ್ಣ ಪುಟ್ಟ ಕಲಂಗಳಡಿ ಕೇಸನ್ನು ದಾಖಲಿಸಿಕೊಂಡು ಅವರನ್ನೆಲ್ಲ ಸುರಕ್ಷಿತವಾಗಿ ಮನೆಗೆ ಕಳುಹಿಸಿದರು. ತಮ್ಮ ದಕ್ಷತೆಯನ್ನು ಮೆರೆಯಲು ಇದು ಸಾಲದೆಂಬಂತೆ ಹಲ್ಲೆಗೊಳಗಾದ ಗಜೇಂದ್ರರ ಮೇಲೆಯೇ ಕೇಸೊಂದನ್ನು ದಾಖಲಿಸಿಕೊಂಡರು!

ಅಂದರೆ, ಇವತ್ತು ಶಿಕಾರಿಪುರದಲ್ಲಿ ಯಡ್ಡಿಯ ವಿರುದ್ಧ ಅವರ ಸರ್ಕಾರದ ದೌರ್ಜನ್ಯದ ವಿರುದ್ಧ ಅವರ ಜೋಭದ್ರಗೇಡಿತನದ ವಿರುದ್ಧ ಯಾರೂ ಸೊಲ್ಲೆತ್ತುವಂತಿಲ್ಲ. ರೈತನ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಯಡ್ಡಿಯ ಊರಲ್ಲಿ ಈಗ ರೈತರೇ 'ರಸಗೊಬ್ಬರ ಇಲ್ಲ' ಎಂದು ಗೋಳಾಡುವುದೂ ಅಪರಾಧವಾಗಿದೆ.

ಮೊನ್ನೆ ಶಿಕಾರಿಪುರಕ್ಕೆ ಬಂದ ಎರಡು ಲೋಡ್ ಗೊಬ್ಬರಕ್ಕಾಗಿ ಸಾವಿರಾರು ರೈತರು ಸಂಜೆಯವರೆಗೂ ಕ್ಯೂ ನಿಂತಿದ್ದರು. ಅವರಲ್ಲಿ ಅದೆಷ್ಟೋ ಮಂದಿ ಗೊಬ್ಬರ ಸಿಗದೆ ಬರಿಗೈಯಲ್ಲಿ ಮನೆಗೆ ಹಿಂದಿರುಗಿದರು.

ಪಾಪ, ಶಿಕಾರಿಪುರದ ರೈತರ ಪಾಡು ಬೇರೆಡೆಗಿನ ರೈತರಿಗಿಂತ ಶೋಚನೀಯವಾಗಿದೆ. ಯಾಕೆಂದರೆ ಬೇರೆಡೆ ರೈತರು ಪ್ರತಿಭಟಿಸಬಹುದು, ಯಡ್ಡಿಯ ವಿರುದ್ಧ ಘೋಷಣೆಗಳನ್ನು ಕೂಗಬಹುದು. ಆದರೆ ಆ ಸಣ್ಣ ಸ್ವಾತಂತ್ರ್ಯವೂ ಶಿಕಾರಿಪುರದ ರೈತರಿಗೆ ಇವತ್ತು ಇಲ್ಲವಾಗಿದೆ. ಯಾಕೆಂದರೆ ಅವರು ತಮ್ಮ ಕಷ್ಟ ಹೇಳಿಕೊಂಡರೆ ಯಡ್ಡಿಯ ಬೆಂಬಲಿಗರು ಬಡಿಗೆ ತೆಗೆದುಕೊಂಡು ಹೊಡೆಯುತ್ತಾರೆ.

ಯಡ್ಡಿಯ 'ಗುಜರಾತ್ ಮಾದರಿ'ಯ ಆಡಳಿತದಲ್ಲಿ ಅಪರಾಧವೇ ಅಧಿಕಾರವಾಗಿದೆ!

-ವರದಿಗಾರ

---

# ನನ್ನ ಖಾತೆಲಿ ಸ್ವಲ್ಪ ಓಲ್ಟೇಜ್ ಕಡಿಮೆ ಆಗಿದೆ ಕಂಡ್ರಿ!

ಸದನದಲ್ಲಿ ಹೇಗೆ ಮಾತನಾಡಬೇಕು, ಹೇಗೆ ಕೂರಬೇಕು, ಮಾತನಾಡುವಾಗ ಯಾವ ಭಾಷೆ ಬಳಸಬೇಕೆಂದು ಮಾಜಿ ಪ್ರಧಾನಿಗಳು ತಮ್ಮ ಮಕ್ಕಳನ್ನು ಕೂರಿಸಿ ಪಾಠಮಾಡಿದರಂತಲ್ಲ, ಅಪ್ಪನ ಮಾತನ್ನು ದೇಖಾಗ್ರಚಿತ್ತವಾಗಿ ಕೇಳಿದ ರೇವಣ್ಣ ಸದನದಲ್ಲಿ ಮಾತನಾಡಿದ ವೈಖರಿಗೆ ಸದನವೇ ನಕ್ಕುನಕ್ಕು ಕೆಮ್ಮಿಗೆ ತುತ್ತಾಯ್ತಂತಲ್ಲ, ಅಣ್ಣನ ಮಾತಿಗೆ ಜನ ನಗುತ್ತಿರುವುದು ನಿಜವೊ ಸುಳ್ಳೋ ಅಥವಾ ಆಡಿಕೊಳ್ಳಲೊ ಎಂಬ ಗೊಂದಲಕ್ಕೆ ಬಿದ್ದ ಕುಮಾರಸ್ವಾಮಿ ತಾನೂ ಕೂಡ ತೂಕವಾಗಿ ಮಾತನಾಡಲು ಯತ್ನಿಸುತ್ತ, ಸಾಧಾರಣ ಪದಗಳನ್ನೇ ಯಾರಿಗೂ ಅರ್ಥವಾಗದಂತೆ ಮಾತನಾಡಲಾರಂಭಿಸಿದರಂತಲ್ಲಾ. ಆಗ ಹಲ್ಲು ಕಟ್ಟಿಸಿಕೊಂಡ ನಂತರ ಅಸಂಬದ್ಧವಾಗಿ ಮಾತನಾಡುವುದನ್ನು ಜಾಸ್ತಿ ಮಾಡಿಕೊಂಡಿರುವ ಈಶ್ವರಪ್ಪ "ನಮ್ಮ ಸರಕಾರದ ಹೆಗಲ ಮೇಲೆ ಹಸಿರುಶಾಲು ಇರಬಹುದು, ಅದರ ಕೆಳಗೆ ಕೇಸರಿ ಶಾಲುಗಳಿವೆ. ಅದರೊಳಗೆ ಜನಿವಾರಗಳಿವೆ, ಶಿವದಾರಗಳಿವೆ, ನನ್ನಲ್ಲಿ ಉಡುದಾರ ಮಾತ್ರ ಇದೆ" ಎಂದರಂತಲ್ಲಾ, ಥೂತ್ತೇರಿ!

* * * *

## ಥೂತ್ತೇರಿ

ಯಾಹೂ

ಇಷ್ಟೊಂದು ದಿಟ್ಟವಾಗಿ ಮಾತನಾಡುವ ಈಶ್ವರಪ್ಪನನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಫೋನ್ ಮಾಡಲಾಗಿ ಸಿಕ್ಕಿದರು.

ರಿಂಗ್‌ಟೋನ್ : "ಅಗ್ರತೊ ನಾರಸಿಂಹಶ್ಚ ಪೃಷ್ಠತೋಗೋಪಿ ನಂದನಃ..."

"ಹಲೋ ಯಾರು?"

"ನಾನು ಸಾರ್ ಯಾಹೂ ಅಂತ, ಪತ್ರಕರ್ತ."

"ಏಳಿ ಇವರೆ, ಚೆನ್ನಾಗಿದೀರ? ಏನ್ಸಮಾಚಾರ"

"ಏನಿಲ್ಲ ಸಾರ್, ತಮ್ಮನ್ನ ಒಂದೆರಡು ಪ್ರಶ್ನೆ ಕೇಳಬೇಕಾಗಿತ್ತು."

"ಕೇಳಿ ಅದಕ್ಕೇನಂತೆ"

"ನೀರಾವರಿ ಖಾತೆನ ತಾವು ಚೆನ್ನಾಗಿ ನಿಭಾಯಿಸಿದ್ರೂ ಇಂಧನ ಖಾತೆ ತಗೊಂಡಿದ್ದೀರಲ್ಲ, ಯಾಕ್ ಸಾರ್?"

"ನಾನ್ ತಗೊಳ್ಳಿಲ್ಲರೀ, ಅವ್ರುರೇ ಕೊಟ್ರು, ಕೊಟ್ಟಮೇಲೆ ಬೇಡ ಅನ್ನಕಾಗ್ತದಾ?"

"ಆಗಲ್ಲ, ಆದ್ರೂ ನೀರಾವರಿ ಖಾತೆ ತರ ಇದನ್ನು ನಿಭಾಯಿಸಬೇಡಿ ಸಾರ್."

"ಯಾಕ್ರಿ ಹಾಗಂತಿರಿ? ಚೆನ್ನಾಗಿ ನಿಭಾಯಿಸಿದ್ರಿ ಅಂತ ನೀವೇ ಹೇಳಿದ್ರಿ?"

"ಚೆನ್ನಾಗಿ ನಿಭಾಯಿಸಿದ್ರಿ ಅನ್ನೊ ಮಾತನ್ನ ತಾವು ಅರ್ಥಮಾಡಿಕೋಬೇಕಾಗಿತ್ತು, ಭದ್ರಾ ಕಾಲುವೆ ರಿಪೇರಿ ಕಾರಣಕ್ಕೆ ರೈತರು ಒಂದು ಬೆಳೆ ಕಳಕೊಂಡರಂತೆ. ಕೆಳಗಡೆ ಕಾಲುವೆ ರಿಪೇರಿ ಕಾಮಗಾರಿ ನೆಡಿತಾಯಿದ್ರೆ, ಮೇಲಿಂದ ನೀರು ಬಟ್ರಂತೆ. ಇದರಿಂದ ಕಾಲುವೆಗಳೆಲ್ಲ ಮೊದಲಿಗಿಂತ್ಲೂ ಕಿತ್ತು ಹೋದವಂತೆ."

"ಯಾರ್ರಿ ಹೇಳಿದೋರು?"

"ಕಾಲುವೆ ಅಕ್ಕಪಕ್ಕದ ರೈತರು ಹೇಳಿದ್ರು ಸಾರ್."

"ಅಂಗಾದ್ರೆ ಅವ್ರುರು ರೈತರೇ ಅಲ್ಲ ಕಂಡ್ರಿ."

"ಇದೇನ್ ಸಾರ್, ನಿಮ್ಮ ಪಾರ್ಟಿಯೋರೆಲ್ಲ ಹೀಗೆ ಮಾತಾಡ್ತಿರಿ? ಸತ್ತೀರೋರೆಲ್ಲ ರೈತರಲ್ಲ ಅಂತಿರಿ. ನೀರಿನ ವಿಷಯ, ಕಾಲುವೆ ವಿಷಯ ಮಾತಾಡೋರೆಲ್ಲ ರೈತರಲ್ಲ ಅಂತಿರಿ. ಯಾರು ಏನು ಮಾತನಾಡಬೇಕು ಅದನ್ನಾದ್ರೂ ಹೇಳಿ."

"ಅಲ್ರಿ, ಹಾಳಾಗಿರೊ ಕಾಲುವೆನ ರಿಪೇರಿ ಮಾಡಬಾರ್ದಾ? ಮಾಡಿದ ಮೇಲೆ ನೀರು ಬಿಡಬಾರ್ದ? ಇದರಲ್ಲಿ ನನ್ನ ತಪ್ಪೇನಿದೆ?"

"ಅಂದ್ರೆ, ಗುತ್ತಿಗೆದಾರರ ತಪ್ಪು ಅಂತಿರಾ?"

"ಹೌದು ಮತ್ತೆ, ಸಕಾಲದಲ್ಲಿ ಮಾಡದೆಯಿದ್ರೆ ಅದು ನನ್ನ ತಪ್ಪಾ?"

"ಖಂಡಿತ ತಪ್ಪಲ್ಲ ಸಾರ್. ಒಂದು ಬಾರಿ ಗುತ್ತಿಗೆದಾರರ ಜೊತೆ ತಾವು ಮಾತನಾಡಿ, ಒಪ್ಪಂದ ಮಾಡಿಕೊಂಡು, ವ್ಯವಹಾರ ಮುಗಿಸಿಕೊಂಡ ಮೇಲೆ, ಗುತ್ತಿಗೆದಾರ ರೈತ ಗುದ್ದಾಡಿಕೊಂಡ್ರೆ, ಅದರಲ್ಲಿ ನಿಮ್ಮ ತಪ್ಪಿಲ್ಲ."

"ಮತ್ತೆ, ಹೇಳ್ತಿರಲ್ರಿ ನೀವು. ತಿಳಕೊಂಡು ಮಾತನಾಡಬೇಕು."

"ಇನ್ನೊಂದು ವಿಷಯ ತಿಳಕೊಂಡೆ ಸಾರ್."

"ಯಾವ ವಿಷಯನ್ರಿ?"

"ತಾವು ಅಧಿಕಾರದಲ್ಲಿ ಇರೋದೆ ಆದ್ರೆ ಕಾಂಗ್ರೆಸ್ಸು, ಜೆಡಿಎಸ್ ಯರಡು ಪಾರ್ಟಿನೂ ವಡದಾಕ್ತಿರಂತಲ್ಲ ಸಾರ್?"

"ಹೊಡದಾಕದಲ್ಲ, ಹೊಡಕೊಂಡು ಅವ್ರುರೇ ಬರಂಗೆ ಮಾಡ್ತೀವಿ"

"ಯಾವ ತರ ಮಾಡ್ತೀರಿ ಸಾರ್?"

"ಆ ಜವಾಬ್ದಾರಿನ ಬಳ್ಳಾರಿ ಲೀಡ್ರುಗಳಿಗೆ ವಯಿಸಿಬಿಡ್ತಿವಿ. ಜೊತೆಗೆ ಆ ಕಡೆಯಿಂದ ಪೇಜಾವರಶ್ರೀ, ಈ ಕಡೆಯಿಂದ ಸುತ್ತೂರು ಸ್ವಾಮಿಗಳನ್ನ ಆಶೀರ್ವಾದದ ಉಸ್ತುವಾರಿಗೆ ಬಿಡ್ತಿವಿ."

"ಒಳ್ಳೆ ಐಡಿಯಾ ಸಾರ್. ಆದ್ರು ಪಾರ್ಟಿ ವಡಿಯೋ ಮಾತು ಈಗ್ಯಾಕೆ ಸಾರ್?"

"ಅಂತ ಪರಿಸ್ಥಿತಿ ನಿರ್ಮಾಣ ಆಗಿದೆ ಕಂಡ್ರೀ."

"ನಿಮ್ಮ ಪರಿಸ್ಥಿತಿ ಅನ್ನೋ ಪದ ನನಿಗೆ ತುಂಬಾ ಕನ್‌ಫ್ಯೂಜಾಯ್ತದೆ ಸಾರ್."

"ಯಾಕ್ರಿ ಕನ್‌ಫ್ಯೂಜ್?"

"ಹಿಂದೆ ಒಂದು ಸರಿ ಭಾಷಣ ಮಾಡ್ತ ನೀವು ಇವತ್ತು ಕನ್ನಡಕ್ಕೆ ಏಳು ಜ್ಞಾನಪೀಠ ಪ್ರಶಸ್ತಿ ಬರೋ ಅಂತ ಪರಿಸ್ಥಿತಿ ನಿರ್ಮಾಣ ಆಗಿದೆ ಅಂತ ಹೇಳಿದ್ರಿ."

"ರೀ ಅಷ್ಟು ಸರಳವಾದ ಮಾತು ನಿಮಗೆ ಅರ್ಥವಾಗಲ್ಲವಲ್ರಿ. ಇವತ್ತು ನಾವೆಲ್ಲ ಮಂತ್ರಿಗಳಾಗಿದ್ದಿವಿ, ಸಂತೋಷವಾಗಿದ್ದಿವಿ, ಯಾಕೆ ಅಂದ್ರೆ ಅಂತ ಪರಿಸ್ಥಿತಿ ನಿರ್ಮಾಣ ಆಗಿತ್ತು. ಅದೇ ರೀತಿ ಇವತ್ತು ಕನ್ನಡಕ್ಕೆ ಏಳು ಜ್ಞಾನಪೀಠಗಳು ಸಿಕ್ಕಿವೆ ಅಂದ್ರೆ ಅಂತ ಪರಿಸ್ಥಿತಿ ನಿರ್ಮಾಣ ಆಗಿತ್ತು. ಇಷ್ಟು ಗೊತ್ತಾಗಲ್ಲವಲ್ರಿ ನಿಮಗೆ?"

"ಸಾರಿ ಸಾರ್, ನಿಮ್ಮಂತವರಿಂದ ಬುದ್ಧಿ ಹೇಳಿಸಿಗಳೋ ಪರಿಸ್ಥಿತಿ ನನಗೆ ಬಂದಿದೆಯಲ್ಲ, ಆ ಬಗ್ಗೆ ಬೇಸರ ಆಗ್ತಾಯಿದೆ. ಇರ್ಲಿ ನಿಮ್ಮ ಖಾತೆ ಬಗ್ಗೆ ಹೇಳಿ ಸಾರ್."

"ನನ್ನ ಖಾತೆಲಿ ಸ್ವಲ್ಪ ಓಲ್ಟೇಜ್ ಕಡಿಮೆ ಆಗಿದೆ."

"ಮತ್ತೆ ಹೇಗೆ ಮಾಡ್ತೀರಿ ಸಾರ್?"

"ಅಕ್ಕಪಕ್ಕದ ರಾಜ್ಯಕ್ಕೆ ಕೈ ಹಾಕ್ತಿನಿ."

"ಥೂತ್ತೇರಿ!!!" ■



## ಗಲ್ಲಿ ಪ್ರಶಸ್ತಿ ವೀರ

ನೊಬೆಲ್ ಪ್ರಶಸ್ತಿಗಾಗಿ ಹೊಂಚು ಹಾಕಿ ಕಾದು ಕುಳಿತಿರುವ ರವಿಶಂಕರ ಹಾಗೆಂದು ಬೇರೆ ಪ್ರಶಸ್ತಿಗಳನ್ನೇನು ಬೇಡ ಅನ್ನುವವನಲ್ಲ.

ಅವನಿಗೆ ಕುವೆಂಪು ವಿವಿ ಸೇರಿದಂತೆ ಬೇರೆಯವರೂ ಡಾಕ್ಟರೇಟ್ ಅವಾರ್ಡ್ ಕೊಟ್ಟಿದ್ದಾರೆ. ಇದರ ಜೊತೆಗೆ ತಮಾಷೆ ಅನ್ನಿಸುವ ಬೇರೆ ಅವಾರ್ಡುಗಳೂ ಅವನಿಗೆ ಸಿಕ್ಕಿವೆ.

ಉದಾಹರಣೆಗೆ ಮಹಾವೀರ ಪ್ರಶಸ್ತಿ ಅಂತ ಒಂದು ರವಿಶಂಕರಗೆ ಬಂದಿದೆ. ಯಾರಪ್ಪ ಇದನ್ನು ಕೊಟ್ಟು ಕೈತೊಳೆಕೊಂಡವರು ಅಂತ ಚೆಕ್ ಮಾಡಿದರೆ ಇಂಗ್ಲೆಂಡಿನ ಮಾರ್ವಾಡಿಗಳ ಯಂಗ್ ವೆಜಿಟೇರಿಯನ್ ಸಂಘದವರು. ಅದೇ ರೀತಿ ಅಡ್ರಸ್ಸೇ ಇರದ Harmontyian Amity V.V. ಅನ್ನೋದು 'Leadership Award For Extrodinary Promotion of World Peace' ಅನ್ನೋ ಪ್ರಶಸ್ತಿ ಕೊಟ್ಟಿದ್ದಾರೆ. 2006 ರಲ್ಲಿ ಈ TV 'ವರ್ಷದ ಕನ್ನಡಿಗ' ಅಂತ ಘೋಷಿಸಿದ್ದರು.

ಇದನ್ನೆಲ್ಲಾ ಒಂದರ ಮೇಲೊಂದು ಏಣಿ ಥರ ಜೋಡಿಸಿಕೊಂಡೇ ಈಗ ನೊಬೆಲ್ ಪ್ರಶಸ್ತಿಗೆ ರವಿಶಂಕರ ಲಾಬಿ ಮಾಡುತ್ತಿದ್ದಾನೆ. ಇಂಟರ್‌ನೆಟ್‌ನಲ್ಲಿ ಇವನ ಪರ ಪ್ರಚಾರ ನಡೆಸುತ್ತಿರುವ ವಿಪ್ರರು 'ನಂ ಗುರು ಅರ್ಜೆಂಟೀನಾದಿಂದ ಸೈಬೀರಿಯಾ ತನಕ, ದಕ್ಷಿಣ ಆಫ್ರಿಕಾದಿಂದ ಫಿಜಿ ತನಕ ಶಾಂತಿ ಸ್ಥಾಪನೆಗೆ ಓಡಾಡಿದ್ದಾರೆ ನೊಬೆಲ್ ಶಾಂತಿ ಪ್ರಶಸ್ತಿ ಕೊಡಲೇಬೇಕು' ಅಂತ ಹೇಳಿಕೊಂಡು ನಲಿಯುತ್ತಿದ್ದಾರೆ.

### ನಿಮಗೊಂದು ವಿಚಾರ ಗೊತ್ತೆ?

ಪ್ರತಿ ವರ್ಷ ನೊಬೆಲ್ ಪ್ರಶಸ್ತಿ ಜೊತೆಜೊತೆಗೆ ಇಗ್ನೋಬೆಲ್ ಪ್ರಶಸ್ತಿ ಅಂತಲೂ ಇನ್ನೊಂದು ಪ್ರಶಸ್ತಿಯೂ ಘೋಷಣೆಯಾಗುತ್ತದೆ. ವರ್ಷದ ಅತೀ ಪೆದ್ದು ಸಂಶೋಧನೆಗೆ, ಅವಾಂತರಕ್ಕೆ, ಅಸಂಬದ್ಧ ವ್ಯಕ್ತಿಗಳಿಗೆ ಕೊಡುವ ಪ್ರಶಸ್ತಿ ಅದು.



ಕೆಲ ನಿಷ್ಠುರ ವ್ಯಕ್ತಿಗಳು ಸೇರಿ ಈ ಆಯ್ಕೆ ನಡೆಸುತ್ತಾರೆ.

ನೊಬೆಲ್ ಪ್ರಖ್ಯಾತ ಪ್ರಶಸ್ತಿಯಾದರೆ ಇಗ್ನೋಬೆಲ್ ಕುಖ್ಯಾತ ಪ್ರಶಸ್ತಿ.

ಈ ರವಿಶಂಕರನ ಇಗ್ನೋಬೆಲ್ ಶಾಂತಿ ಪ್ರಶಸ್ತಿ ಪಡೆಯಲು ಕರೆಕ್ಟಾದ ಅಸಾಮಿ.

ಯುದ್ಧ, ಸಂಘರ್ಷ ನಡೆಯುತ್ತಿರುವ ಜಾಗಗಳಿಗೆಲ್ಲಾ ಹೋಗಿ ಅರ್ಧರ್ಧ ಗಂಟೆ ಕಾಲ ಕೂತು ಶಾಂತಿದೂತದ ಪಟ್ಟ ಗಳಿಸಲು ಲಾಗಾ ಹಾಕುತ್ತಿರುವ ರವಿಶಂಕರನಿಗೆ ತಕ್ಕನಾದ ಪ್ರಶಸ್ತಿ ಅದು.

### ವಿಶ್ವ ಸಂಸ್ಥೆಲೂ ಮಾನ್ಯತೆ

ರವಿಶಂಕರನ ಅಸಾಧ್ಯ ಬುದ್ಧಿವಂತಿಕೆಗೆ ನಿದರ್ಶನ ಇದು.

ವಿಶ್ವಸಂಸ್ಥೆಯ Economic and Social Council (Ecosoc) ಎಂಬ ಅಂಗ ಸಂಸ್ಥೆಯಲ್ಲಿ ರವಿಶಂಕರನ International Association for human value ಎಂಬ ಇನ್ನೊಂದು ಅಂಗಡಿಗೆ ಮಾನ್ಯತೆ ಸಿಕ್ಕಿದೆ.

Special consultant status ಅದು.

ನಿಮಗೆಲ್ಲಾ ರವಿಶಂಕರನ ಆರ್ಟ್ ಆಫ್ ಲೀವಿಂಗ್ ಮಾತ್ರ ಗೊತ್ತಿರಬಹುದು. ಅದಕ್ಕಿಂತಲೂ ವ್ಯಾಪ್ತಿ ವ್ಯವಹಾರಗಳಲ್ಲಿ ಈ ಇಂಟರ್‌ನ್ಯಾಷನಲ್ ಸಂಸ್ಥೆಯ ಹೆಸರು ದೊಡ್ಡದು.

ಈ ಸಂಸ್ಥೆ ಮೂಲಕ ತಾನು ಏನೇನು ಸಾಧಿಸಿದ್ದೀನಿ ಅಂತ ರವಿಶಂಕರ ಹೇಳಿಕೊಂಡಿದ್ದಾನೆ ಗೊತ್ತೆ?

- ಭಾರತದ 25 ರಾಜ್ಯಗಳ 25 ಸಾವಿರ ಹಳ್ಳಿಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಕಾರ್ಯ ನಡೆಸುತ್ತಿದ್ದೇನೆ. ಆತ್ಮಹತ್ಯೆ ಮಾಡಿಕೊಳ್ಳಲು ರೆಡಿಯಾಗಿದ್ದ ವಿದರ್ಭದ ಒಂದು ಸಾವಿರ ರೈತರ ಮನ ಬದಲಾಯಿಸಿ ಬದುಕಿಸಿದ್ದೇನೆ.

- ಭಾರತದ ಜೈಲುಗಳಲ್ಲಿರುವ ಲಕ್ಷಾಂತರ ಖೈದಿಗಳ ಮನ ಪರಿವರ್ತನೆ ಮಾಡುತ್ತಿದ್ದೇವೆ.

- ಸುನಾಮಿ ಸಂತ್ರಸ್ತ ಲಕ್ಷಾಂತರ ಜನರಿಗೆ ಪುನರ್‌ವಸತಿ ಕಲ್ಪಿಸಲು ನೆರವಾಗಿದ್ದೇವೆ.

- ಯುದ್ಧ ಪೀಡಿತ ಕೊಸವೊದಲ್ಲಿ ಲಕ್ಷಾಂತರ ಜನರ ಮಾನಸಿಕ ಕ್ಲೇಷ ಒತ್ತಡ, ಭೀತಿ, ದ್ವೇಷ ಹೋಗಲಾಡಿಸಿ ಮುಖ್ಯವಾಹಿನಿಗೆ ತಂದಿದ್ದೇನೆ.

- Prison smart (prison smart management and rehabilitation programme) ನಡಿ ವಿಶ್ವಾದ್ಯಂತ ಜೈಲುಗಳಿಗೆ ಭೇಟಿ ನೀಡಿ 'ನವ ಚೇತನ ಶಿಬಿರ' ಮಾಡಿದ್ದೇವೆ

-ಇದುವರೆಗೂ 25 ಸಾವಿರ ಗ್ರಾಮ ಕಾರ್ಯಕ್ರಮ ನಡೆಸಿ ಎರಡೂ ಕಾಲು ಕೋಟಿ ಜನರಿಗೆ 'ಬದುಕುವ ಕಲೆ' ಕಲಿಸಿದ್ದೇವೆ.

ಇದರಲ್ಲಿ ಸತ್ಯ ಎಷ್ಟಿರಬಹುದು, ಸುಳ್ಳೆಷ್ಟಿರಬಹುದೆಂಬುದು ನಿಮಗೂ ಗೊತ್ತಿರುತ್ತದೆ. ಬಿಡಿ. ಆದರೂ ಸಾಕ್ಷಾತ್ ವಿಶ್ವಸಂಸ್ಥೆಯವರು ರವಿಶಂಕರನ ಮಾತನ್ನು ನಂಬಿ ಮಾನವ ಅಭಿವೃದ್ಧಿ ಸಾಮಾಜಿಕ ಸಂಘರ್ಷಗಳಿಗೆ ಸಂಬಂಧಿಸಿದ ಸಮಾವೇಶಗಳು ನಡೆದಾಗ ರವಿಶಂಕರ್‌ನ ಸಂಸ್ಥೆಯನ್ನು ಆಹ್ವಾನಿಸುತ್ತಿದೆ. ■

---

ಮದರ್ ತೆರೇಸಾ, ಡೆಸ್ಮಂಡ್ ಟುಟು, ಯಾಸರ್ ಅರಾಫತ್, ಆಂಗ್ ಸಾನ್ ಸೂಕಿಯಂಥವರಿಗೆ ಸಿಕ್ಕಿರುವ ನೊಬೆಲ್ ಶಾಂತಿ ಪ್ರಶಸ್ತಿ ನಕಲಿ ಗುರು ರವಿಶಂಕರನಿಗೇನಾದರೂ ಸಿಕ್ಕಿಬಿಟ್ಟರೆ ಅವತ್ತು ಅವರೆಲ್ಲರ ಘನತೆ ಚರಂಡಿ ಪಾಲಾದಂತೆಯೇ ಸರಿ. ಆದರೂ ರವಿಶಂಕರನ ವಂಚಕ, ಕೋಮಲ ವಯ್ಯಾರಿ ಕೈ ನೊಬೆಲ್‌ನಷ್ಟು ಎತ್ತರಕ್ಕೆ ಚಾಚಲು ಹವಣಿಸುತ್ತಿವೆಯಲ್ಲ ಎಂಬುದೇ ಖೇದಕರ ಸಂಗತಿ ಅಲ್ಲವೆ?



ವಯ್ಯಾರಿ ರವಿಶಂಕರ

# ನೊಬೆಲ್ ಮೇಲೆ ಕಣ್ಣು

■ ಬಿಳಿದಾಳೆ ಪಾರ್ವತೀಶ

ವಯ್ಯಾರಿ ಧರ್ಮಗುರು ಆರ್ಟ್ ಆಫ್ ಲೀವಿಂಗ್‌ನ ಶ್ರೀ ಶ್ರೀ ರವಿಶಂಕರ ಗುರೂಜಿ ದಿಢೀರನೆ ನೊಬೆಲ್ ಶಾಂತಿ ಪ್ರಶಸ್ತಿಯ ಮೇಲೆ ಕಣ್ಣು ಮಡಗಿ ಬಿಟ್ಟಿದ್ದಾರೆ.

ಹಾಗಂತ ಈ ಚಿಲ್ಲರೆ ಅರ್ಧ ಗಂಡಸು ಎಲ್ಲಿ, ಆ ನೊಬೆಲ್ ಬಹುಮಾನವೆಲ್ಲಿ, ಎತ್ತಣಿಂದೆತ್ತ ಸಂಬಂಧವಯ್ಯ ಅಂತ ನಿಮಗನ್ನಿಸಬಹುದು. ಅಜಗಜಾಂತರ ಅಂತರವಿದೆ ಅಂತಲೂ ಯೋಚಿಸಬಹುದು.



ಇಸ್ರೇಲ್ ಪ್ರಧಾನಿಯೊಂದಿಗೆ



ಲೆಬನಾನ್ ಪ್ರಧಾನಿಯೊಂದಿ



ಬಾಗ್ದಾದ್ ರಾಜಕೀಯ ನಾಯಕನೊಂದಿಗೆ.

ಆದರೆ ಆ ಅಂತರ ತುಂಬುವ ಕಲೆ ಕೆಲವು ಕಲಾದಿಗಳಿಗೆ ಗೊತ್ತಿರುತ್ತದೆ.

ಈ ಆರ್ಡಿನರಿ ಯೋಗಪಟು ರವಿಶಂಕರನೂ ಅಂತವರಲ್ಲೊಬ್ಬ, ಅಂದಹಾಗೆ ಎಲ್ಲೇ ಹಿಂಸೆ, ಪ್ರತಿಭಟನೆಗಳು ನಡೆಯಲಿ, ರಾಜಾಸ್ತಾನದಲ್ಲಿ ಗುಜ್ಜಾರರ ಮೀಸಲು ಹೋರಾಟ ಭುಗಿಲೇಳಲಿ.... ರವಿಶಂಕರ ಅಲ್ಲಿಗೆ ಓಡಿ ಹೋಗುತ್ತಾನೆ. ಶಾಂತಿ ಮಾತುಕತೆ ಅಂತ ಕುಳಿತು ಬರುತ್ತಿದ್ದಾನೆ. ಅಲ್ಲಿಂದ ಯಾರಾದರೂ ತನ್ನನ್ನು ಕರೆಯಲಿ ಅಂತ ಇವನೇನು ಕಾಯುತ್ತಾ ಕೂರುವವನೂ ಅಲ್ಲ, ಹೀಗೆ ನಾಲ್ಕಾರು ಕಡೆ ಕರೆಯದಿದ್ದರೂ ಹೋಗಿಬರುತ್ತಿದ್ದರೆ ಬಿಡಿ ಪತ್ರಿಕೆಗಳಲ್ಲಿ 'ಶಾಂತಿದೂತ' ಅಂತ ಹೇಗೂ ಪ್ರಚಾರ ಕೊಡುತ್ತಾರೆ. ಆಮೇಲೆ ಪರಸ್ಪರ ಹೊಡೆದಾಡಿಕೊಳ್ಳುತ್ತಿರುವ ಉಳಿದವರೂ ತನ್ನನ್ನು ಶಾಂತಿ ಮಾತುಕತೆಗೆ ಕರೆದು ಮಣೆ ಹಾಕಿ ಕೂರಿಸುತ್ತಾರೆಂಬ ದುರಾಲೋಚನೆ ರವಿಶಂಕರನದ್ದು.

ನೀವೇ ಒಮ್ಮೆ ಯೋಚಿಸಿ ನೋಡಿ. ದೂರದ ರಾಜಾಸ್ಥಾನದಲ್ಲಿ ಗುಜ್ಜಾರ್ ಸಮುದಾಯ ಮೀಸಲಾತಿಗಾಗಿ ಒತ್ತಾಯಿಸಿ ಹೋರಾಟ ಕ್ಕಿಳಿಯಿತು. ಇದು ಶುರುವಾಗಿದ್ದು ಮೇ 23 ರಂದು. ವಸುಂಧರ ರಾಜೇ ನೇತೃತ್ವದ ಬಿಜೆಪಿ ಸರ್ಕಾರ ಮೊದಮೊದಲು ಗುಜ್ಜಾರರನ್ನು ನಿರ್ಲಕ್ಷಿಸಿತು. ಮೀಸಲಾತಿ ಸೌಲಭ್ಯ ಕಲ್ಪಿಸುವುದಾಗಿ ಚುನಾವಣೆ ಸಮಯದಲ್ಲಿ ತಾನೇ ನೀಡಿದ್ದ ಭರವಸೆಯನ್ನು ಮರೆತು ಗೋಲಿಬಾರ್ ಮಾಡಿಸಿ 43 ಗುಜ್ಜಾರರನ್ನು ಕೊಲ್ಲಿಸಿತು. ಆದರೆ ಪೊಲೀಸರ ಗುಂಡೇಟಿಗೆ ಹೆದರದ ಗುಜ್ಜಾರರು ಯಾವಾಗ ಹೋರಾಟ ಇನ್ನು ತೀವ್ರಗೊಳಿಸಿದರೋ ವಸುಂಧರ ಸರ್ಕಾರ ತರಾತುರಿಯಲ್ಲಿ ಒಂದು ಮೀಸಲು ಪ್ರಸ್ತಾಪ ರೆಡಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ತಾನು ತಪ್ಪಿಸಿಕೊಳ್ಳಲು ನೋಡಿತು. ಅತ್ತ ಕೇಂದ್ರ ಸರ್ಕಾರ ಈ ಪ್ರಸ್ತಾಪ ಪೂರ್ಣವಲ್ಲ ಎಂದು ತಿರುಗಾ ವಾಪಸ್ ಕಳಿಸಿದಾಗ ಗಲಾಟೆ ಜಾಸ್ತಿಯಾಯಿತು.

ಆಗ ಅಲ್ಲಿ ಕಾಣಿಸಿಕೊಂಡವನೇ ಗುರು ರವಿಶಂಕರ್.

ಜೂನ್ 10 ರ ಪ್ರಮುಖ ದಿನಪತ್ರಿಕೆಗಳನ್ನು ತೆರೆದು ನೋಡಿದವರಿಗೆ ಆಶ್ಚರ್ಯವೋ ಆಶ್ಚರ್ಯ. ರಾಜಾಸ್ತಾನದ ಮುಖ್ಯಮಂತ್ರಿ ವಸುಂಧರಾ ಪಕ್ಕ ಕುಳಿತು ಹಡಬೆ ಗುರು ಏನೋ ಮಾತಾಡುತ್ತಿದ್ದಾನೆ. ಅದನ್ನೇ 'ಶಾಂತಿ ಸಂಧಾನ ಮಾತುಕತೆ' ಎಂಬಂತೆ ಮೀಡಿಯಾಗಳು ಬಿಂಬಿಸಿದ್ದವು.

ಅಸಲಿಗೆ ಈ ರವಿಶಂಕರ ಯಾರು? ಎಷ್ಟರವನು? ಅವನಿಗೂ ಗುಜ್ಜಾರ್ ಮೀಸಲಾತಿ ಹೋರಾಟಕ್ಕೂ ಏನು ಸಂಬಂಧ?

ಇವನೇನು ಮಹಾತ್ಮಾ ಗಾಂಧಿ ತುಂಡಾ ಅಂತ ಯಾರೂ ಪ್ರಶ್ನಿಸಲೂ ಇಲ್ಲ ಬಿಡಿ.

### ಆದರೆ ಒಳಗಿಂದೊಳಗೆ ನಡೆದಿದ್ದೇನು ಗೊತ್ತೆ?

ಬಿಜೆಪಿಯ ರಾಜ್ಯಸಭಾ ಮೆಂಬರ್ ರಾಂದಾಸ್ ಅಗರವಾಲ್ ಎಂಬ ಮಾರ್ವಾಡಿ ಈ ಭೇಟಿ ಅರೇಂಜ್ ಮಾಡಿದ್ದ. ನಿಮಗೆಲ್ಲಾ ಗೊತ್ತಿರಬಹುದು. ಈ ಢೋಂಗಿ ಗುರು ರವಿಶಂಕರನನ್ನು ಇನ್ನಿಲ್ಲದಂತೆ ಹೊತ್ತು ಮೆರೆಸುತ್ತಿರುವವರು ಟೈಮ್ಸ್ ಆಫ್ ಇಂಡಿಯಾದ ಮಾರ್ವಾಡಿಗಳು. ಈ ರಾಂದಾಸನೂ ಅಂತವರಲ್ಲೊಬ್ಬ.

ಕಾಮನ್‌ಸೆನ್ಸ್ ಇರುವ ಯಾರಿಗಾದರೂ ಅರ್ಥವಾಗುವ ಸಂಗತಿ ಏನೆಂದರೆ ಸಾಮಾಜಿಕ ಅಸಮಾನತೆಯ ಸಂಘರ್ಷಗಳು ಯೋಗ ಅಥವಾ ಲಾಗ ಹಾಕುವ ಕೆಲಸದಿಂದ ಬಗೆಹರಿಯುವುದಿಲ್ಲ, ಸುದರ್ಶನ ಕ್ರಿಯೆ, ಪುಳಿಯೊಗರೆ ಗೊಜ್ಜಿನಿಂದಲೂ ಅವಕ್ಕೆ ಪರಿಹಾರ ಸಿಗುವುದಿಲ್ಲ, ಅದು ಸಂವಿಧಾನ, ಕಾನೂನಿಗೆ ಸಂಬಂಧಿಸಿದ ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿದ ವಿಚಾರ.

ಆದರೂ ಗದ್ದಲ, ಗಲಾಟೆಗಳಿರುವ ಕಡೆಯೆಲ್ಲಾ ರವಿಶಂಕರ ಯಾಕೆ ಓಡಿಹೋಗುತ್ತಿರುತ್ತಾನೆ ಅಂದರೆ ಅವನಿಗೆ ತಾನೊಬ್ಬ ಶಾಂತಿದೂತ ಎನಿಸಿಕೊಳ್ಳಬೇಕಿದೆ.

ಕಳೆದ ಮೂರ್ನಾಲ್ಕು ವರ್ಷಗಳ ರವಿಶಂಕರನ ಓಡಾಟಗಳನ್ನು ಗಮನಿಸಿದರೆ ಈ ತರ್ಕಕ್ಕೆ ಇನ್ನಷ್ಟು ಸಾಕ್ಷಿ ಪುರಾವೆಗಳು ಸಿಗುತ್ತವೆ.

ಈ ರವಿಶಂಕರ ಒಂದು ಸಾರಿ ಶ್ರೀಲಂಕಾಗೆ ಹೋಗಿ ತಮಿಳು ಟೈಗರ್‌ಗಳಿಗೂ ಲಂಕಾ ಸರ್ಕಾರಕ್ಕೂ ಶಾಂತಿ ಸಂಧಾನ ಮಾಡಿಸುತ್ತೇನೆ ಅಂದಿದ್ದ. ಹಾಗೆಂದು ಪತ್ರಿಕೆಗಳಲ್ಲಿ ಅವನ ಫೋಟೋಗಳೂ ಪ್ರಕಟವಾದವು. ಆದರೆ ಅಲ್ಲಿನ ಸಂಘರ್ಷದ ಬೇರುಗಳಿರುವುದು ಜನಾಂಗೀಯ ತಾರತಮ್ಯ ಅಸಮಾನತೆಗಳಲ್ಲಿ, ಆದರೆ ಈ ಅವಿವೇಕಿ ಗುರು ಬಾಂಬು ಬಂದೂಕುಗಳು ಆರ್ಭಟಿಸುತ್ತಿರುವ ಕಡೆ 'ನೀವು ಸರಿಯಾಗಿ ಉಸಿರಾಡಿ, ನವಚೇತನ ಪಡೆಯಿರಿ' ಅಂದರೆ ಯಾವನು ಕಿವಿಗೊಡುತ್ತಾನೆ. ಅಲ್ಲಿ ಈಗಲೂ ನಿತ್ಯ ಹೆಣಗಳ ರಾಶಿ ಬೀಳುತ್ತಲೇ ಇದೆ.

ರವಿಶಂಕರ ಹಿಂಸೆ, ರಕ್ತಪಾತ ನಡೆಯುತ್ತಿರುವ ಇನ್ನೊಂದು ಜಾಗ ಹುಡುಕಿಕೊಂಡು ಹೋಗುತ್ತಾನೆ.

▶▶▶

ದೇ ರೀತಿ ಇವನು ಜಮ್ಮು ಕಾಶ್ಮೀರ, ಬಿಹಾರ, ಮ ಬಂಗಾಳ, ಅಸ್ಸಾಂಗಳಲ್ಲಿ ಹೋಗಿ ಅಲ್ಲಿನ ಕೆಲ ಪೀಡಿ ನಾಯಕರನ್ನು ಭೇಟಿಯಾಗಿ ಬಂದಿದ್ದಾನೆ. ಇವನ ಶಾಂತಿಯಾತ್ರೆಯು ಅತೀ ತಮಾಷೆ ಪ್ರಸಂಗ ಶೋಷಿತ ಇರಾಕ್‌ನಲ್ಲೂ ನಡೆದುಹೋಗಿದೆ. ಕಳೆದ ರವಿಶಂಕರ ಹೇಗೋ ಮಾಡಿ ಬಾಗ್ದಾದ್‌ಗೂ ಳಿ ಪ್ರಧಾನಿ ನೂರ್-ಅಲ್-ಮಾಲಿಕಿ ಭೇಟಿಯಾಗಿ ಬುಟ್ಟ. ಆ ಫೋಟೋಗಳು ವಿಜಯ ಕರ್ನಾಟಕ ಪ್ರಮುಖವಾಗಿ ಪ್ರಕಟವಾಯಿತು. ಈಗ ಸಾಕ್ಷಾತ್ ಮಂತನೇ ಬಂದರೂ ಬಗೆಹರಿಸಲಿಕ್ಕಾಗದ ಇರಾಕ್ ಸ್ಯೆಯನ್ನು ಈ ಕಳ್ಳಗುರು ರವಿಶಂಕರ ಬಗೆಹರಿಸು ಂದರೆ ಹೇಗೇಗೊ ನಗಬೇಕಾಗುತ್ತದೆ. ಆದರೆ ನಂಥ ಭಂಡನೆಂದರೆ ಫಲಿತಾಂಶಗಳ ಬಗ್ಗೆ ಉತ್ತರಿಸುವ ಣೆ ತನ್ನದಲ್ಲವೆನ್ನುವಂತೆ ಉಡಾಫೆ ತೋರು

ರವಿಶಂಕರ ಇದೇರೀತಿ ಅಫಘಾನಿಸ್ತಾನ, ಪಂಜಾಬ್, ನವೊಗೆಲ್ಲಾ ಹೋಗಿ ಬಂದಿದ್ದಾನೆ.

## ನೊಬೆಲ್‌ಗಾಗಿ ಲಾಬಿ

ಮೇಲೆ ಹೇಳಿದ್ದೆಲ್ಲಾ ಇವನ ಶಾಂತಿ ನಾಟಕದ ಧ ದೃಶ್ಯಗಳು. ಅದರ ಮುಂದುವರೆದ ಭಾಗವೇ ಬೆಲ್ ಶಾಂತಿ ಪ್ರಶಸ್ತಿಗಾಗಿ ಲಾಬಿ ಮಾಡುವುದು. ಈಗ್ಗೆ 20 ವರ್ಷಗಳ ಹಿಂದೆ ಜಯನಗರ ಪೋರ್ಟ್ ್‌ನಲ್ಲಿ ಪೋರ್ಕಿಯಂತೆ ತಲೆ ಕೆದರಿಕೊಂಡು ಯುತ್ತಿದ್ದ ರವಿಶಂಕರ ಕಷ್ಟಬಿದ್ದು ಒಂದೆರಡು ಸನ ಕಲಿತುಬಿಟ್ಟ. 1982 ರಲ್ಲಿ ಭದ್ರಾನದಿ ದಲ್ಲಿ ತಪೋನಿರತನಾಗಿದ್ದಾಗ 'ಸುದರ್ಶನ ಕ್ರಿಯೆ'



ಇರಾಕ್ ಪ್ರಧಾನಿಯೊಂದಿಗೆ ಕಳ್ಳ ರವಿಶಂಕರ

ವಿಶಿಷ್ಟ ಯೋಗದ ಬಗ್ಗೆ ತನಗೆ ಜ್ಞಾನೋದಯ ಬತೆಂದು ಪ್ರಚಾರ ಮಾಡಿಕೊಂಡ. ಬರೀ ಅಸಂಬದ್ಧ ಗಳಲ್ಲೇ ಮುಳುಗೇಳುತ್ತಿದ್ದ ಕೆಲವರಿಗೆ ಈ ವಯ್ಯಾರಿ ಇಷ್ಟವಾದ. ನೋಡನೋಡುತ್ತಿದ್ದಂತೆ ಕನಕಪುರ ಯಲ್ಲಿ ಒಂದಿಷ್ಟು ಬಡರೈತರ ಜಮೀನೂ ಕೆಗಿನ್ನೊಂದಿಷ್ಟು ಸರ್ಕಾರಿ ಭೂಮಿ ನುಂಗಿದ ಂಕರ `Art of Living' (ಬದುಕುವ ಕಲೆ) ರ್ಡ್ ನೇತು ಹಾಕಿಕೊಂಡು ಕುಳಿತುಬಿಟ್ಟ. ರ್ಶನ ಕ್ರಿಯೆ' ಎಂಬ ಉಸಿರಾಡುವ ಕೆಲಸಕ್ಕೇ ಗೆ, ಆಧ್ಯಾತ್ಮದ ಲೇಪ ಹಚ್ಚಿ ಮಾರಾಟಕ್ಕಿಟ್ಟ. ಶ ಅವನ ಪ್ರಕಾರ ಈ ಅವತಾರಪುರುಷ ಹುಟ್ಟುವ ದಲು ಭೂಮಿಯ ಮೇಲೆ ಯಾವನಿಗೂ ಾಡುವುದು ಗೊತ್ತಿರಲಿಲ್ಲ ಹಾಗೂ ಬದುಕುವ ಮೂ ತಿಳಿದಿರಲಿಲ್ಲ ಎಂದು ಕಾಣುತ್ತದೆ. ಹೀಗೆ ಗೆ ಮಳ್ಳಿಯಂತೆ ಚಿಗುರಿಕೊಂಡ ರವಿಶಂಕರ ಸಲು ಶ್ರೀಮಂತ ಕಾರ್ಪೊರೇಟ್ ಗಿರಾಕಿಗಳನ್ನು ಬಕೊಂಡು ತಲೆ ತಿಕ್ಕಿದ. ಅಲ್ಲಿ ಹಣ ಕಿತ್ತು ರು ಕಟ್ಟಡ ಕಟ್ಟಿಕೊಂಡ. ಅವರ ಸಂಪರ್ಕಗಳಿಂದಲೇ ರಾಜ್ಯ, ಹೊರ ದೇಶಗಳಲ್ಲೂ ನೆಟ್‌ವರ್ಕ್ ಕೊಂಡ. ಇತ್ತ ಬೆಂಗಳೂರಿನಲ್ಲೂ ಸರ್ಕಾರಿ ರಿಗೆ, ಪೊಲೀಸರಿಗೆ, ಕೊನೆಗೆ ಜೈಲಿನಲ್ಲಿರುವ ಗಳಿಗೂ ಮಾನಸಿಕ ಒತ್ತಡ ನಿವಾರಣೆಗಾಗಿ ಧ್ಯಾನ, ಗ-ಲಾಗಗಳ ಕೋರ್ಸ್ ಶುರುವಿಟ್ಟುಕೊಂಡ. ಕಾರಣೆಗಳಿಗೂ ವಿಶೇಷ ಶಿಬಿರ ನಡೆಸಿದ. ಯಾಗಳಲ್ಲಿರುವ ವಿಪ್ರೋತ್ತಮರ ಬೆಂಬಲ ಗಿಟ್ಟಿಸಿ ಕೊಡಗಿದ.

ಜಕ ಬೆರಗಾದರು.

ಗಾ ಕೊಟ್ಟು ಸುದರ್ಶನ ಲಾಗ ಹಾಕಿ ತಾವೂ ವಿಶೇಷ ಸಾಧನೆ ಮಾಡುತ್ತಿದ್ದೇವೆಂಬಂತೆ ಕೊಡಗಿದರು.

ಈಗ ನೋಡಿದರೆ ರವಿಶಂಕರ ಅಗಾಧ ಸಾಮ್ರಾಜ್ಯ ಕೊಂಡಿದ್ದಾನೆ. ವಿಶ್ವಾದ್ಯಂತ 150 ದೇಶಗಳಲ್ಲಿ ತನಗೆ ಯಾಯಿಗಳಿದ್ದಾರೆ ಎಂದು ಹೇಳಿಕೊಳ್ಳುತ್ತಿದ್ದಾನೆ. ಂಥ, ಜೈಲಿಗೆ ಹೋಗಿ ಖೈದಿಗಳಿಗೆ 'ಸಜಲೀಕರ

ಶಿಬಿರ' ಅಂತ ಎಂತದ್ದೋ ಬೋಧನೆ ಮಾಡಿದ್ದಾನೆ. ಬಿಹಾರ ವಿಧಾನಸಭೆಗೇ ಹೋಗಿ ಬದುಕಲು ಕಲಿಯಿರಿ ಅಂತ ಬೋಧಿಸಿ ಬಂದಿದ್ದಾನೆ. ಕಾಶ್ಮೀರ, ಅಸ್ಸಾಂ ಸಮಸ್ಯೆ ಬಗೆಹರಿಸಲು ರೆಡಿ ಅನ್ನುತ್ತಿದ್ದಾನೆ. ಕಟ್ಟಾ ನಾಸ್ತಿಕರಾದ ನಕ್ಸಲರ ಮನಃಪರಿವರ್ತನೆ ಮಾಡಿಬಂದಿದ್ದೇನೆ ಎಂದು ಕೊಚ್ಚಿಕೊಳ್ಳುತ್ತಿದ್ದಾನೆ. ಇದನ್ನು ಖುದ್ದು ಕಂಡವರು ಯಾರೂ ಇಲ್ಲ ಎಂಬುದು ಬೇರೆ ಮಾತು ಬಿಡಿ.



ವಿದೇಶದಲ್ಲಿ ಪೋಸು ನೀಡುತ್ತಿರುವ ರವಿಶಂಕ

ಆದರೆ ನೊಬೆಲ್ ಶಾಂತಿ ಪುರಸ್ಕಾರ ಪಡೆಯಲು ಇದೆಲ್ಲಿ ಸಾಕಾಗುತ್ತದೆ. ಹಾಗಾಗಿ ಪಾಕಿಸ್ತಾನ, ಇರಾಕ್, ರಷ್ಯಾ ಅಫಘಾನಿಸ್ತಾನ, ಶ್ರೀಲಂಕಾಗಳಿಗೆಲ್ಲಾ ಹೋಗಿ ರೌಂಡ್ ಹೊಡೆದು ಬಂದಿದ್ದಾನೆ.

ಇದನ್ನೆಲ್ಲಾ ಗುಡಿಸಿ ಗುಡ್ಡೆ ಹಾಕಿಕೊಂಡೇ ಅವನ ಚೇಲಾಗಳು ಈಗ ರವಿಶಂಕರನಿಗೆ `2008 ರ ನೊಬೆಲ್ ಶಾಂತಿ ಪ್ರಶಸ್ತಿ ಕೊಡಬೇಕು' ಎಂದು ಇಂಟರ್‌ನೆಟ್‌ನಲ್ಲಿ ಪ್ರಚಾರ ಆರಂಭಿಸಿದ್ದಾರೆ.

**Infact** ಅಮೆರಿಕಾದ ಚಿಕ್ಕ ಸೈಜಿನ ರಾಜಕಾರಣಿಯೊಬ್ಬ `2007 ರ ನೊಬೆಲ್ ಶಾಂತಿ ಪ್ರಶಸ್ತಿಗೆ ನಾನು ರವಿಶಂಕರನ ಹೆಸರು ಸೂಚಿಸಿದ್ದೇನೆ' ಎಂದಿದ್ದ. ಆತ ಜೋಸೆಫ್ ಕ್ರೌಲಿ. ಆಮೇಲೆ ಗೊತ್ತಾಗಿದ್ದೇನೆಂದರೆ ಅವನ ಚುನಾವಣಾ ಕ್ಷೇತ್ರದಲ್ಲಿ ಭಾರತೀಯ ಮತದಾರರ ಸಂಖ್ಯೆ ಜಾಸ್ತಿ ಇತ್ತಾದ್ದರಿಂದ ಅವರನ್ನು ಖುಷಿ ಪಡಿಸಲು ಜೋಸೆಫ್ ಈ ಹೇಳಿಕೆ ನೀಡಿದ್ದ ಎಂಬುದು.

ಒಂದೇ ಒಂದು ಸಮಾಧಾನದ ಸಂಗತಿ ಏನೆಂದರೆ ನೊಬೆಲ್ ಕಮಿಟಿಯವರು ರವಿಶಂಕರನಂಥ ಕಾಂಚೀಪೀಂಜಿಗಳತ್ತ ತಿರುಗಿಯೂ ನೋಡುತ್ತಿಲ್ಲ, ಅದರಲ್ಲೂ ಶಾಂತಿ ಪ್ರಶಸ್ತಿ ನೀಡುವಾಗ ಹತ್ತಾರು ರಾಜಕೀಯ ಆಯಾಮದಲ್ಲೂ ನೋಡಿ ವಿಜೇತರನ್ನು ಆರಿಸುತ್ತಾರೆ.

ಈ ವರ್ಷದ ಪ್ರಶಸ್ತಿಗೆ ಈಗಾಗಲೇ ಇಂಗ್ಲೆಂಡಿನ ಮಾಜಿ ಪ್ರಧಾನಿ ಟೋನಿ ಬ್ಲೇರ್, ರಷ್ಯಾ ಪ್ರಧಾನಿ ಪುಟಿನ್, ಎಸ್ಪೆರಾಂಟೊ ಎಂಬ ಹೊಸ ಭಾಷೆ, ಫಿನ್ಲೆಂಡಿನ ಶಾಂತಿ ರಾಯಭಾರಿ ಮಾರ್ಟಿಟ್, ರಾಕ್



ಶ್ರೀಲಂಕಾ ಪ್ರಧಾನಿಯೊಂದಿಗೂ ಹರಟುತ್ತಿರುವ ರವಿ

ಸಂಗೀತಗಾರ ಬಾಬ್ ಗೆಲ್‌ಡೋಫ್ ಹೆಸರು ಹೆಚ್ಚು ಕೇಳಿಬರುತ್ತಿವೆ.

ನೊಬೆಲ್ ಆಯ್ಕೆ ಕಮಿಟಿಯವರು, ವಿವಿಧ ದೇಶಗಳ ಸರ್ಕಾರಗಳು ಮುತ್ಸದ್ದಿಗಳು, ಬುದ್ಧಿಜೀವಿ, ಪ್ರೊಫೆಸರ್‌ಗಳು ಹಿಂದಿನ ಪ್ರಶಸ್ತಿ ವಿಜೇತರ ಅಭಿಪ್ರಾಯ ಕೇಳಿ **short list** ಮಾಡಿ ಕೊನೆಗೆ ಒಬ್ಬರನ್ನು ಶಾಂತಿ ಪ್ರಶಸ್ತಿಗೆ ಆಯ್ಕೆ ಮಾಡುತ್ತಾರೆ.

ಮದರ್ ತೆರೇಸಾ, ಡೆಸ್ಮಂಡ್ ಟುಟು, ಯಾಸರ್ ಅರಾಫತ್, ಆಂಗ್ ಸಾನ್ ಸೂಕಿಯಂಥವರಿಗೆ ಸಿಕ್ಕಿರುವ ನೊಬೆಲ್ ಶಾಂತಿ ಪ್ರಶಸ್ತಿ ನಕಲಿ ಗುರು ರವಿಶಂಕರನಿಗೇನಾದರೂ ಸಿಕ್ಕಿಬಿಟ್ಟರೆ ಅವತ್ತು ಅದರ ಘನತೆ ಚರಂಡಿ ಪಾಲಾದಂತೆಯೇ ಸರಿ.

ಆದರೂ ರವಿಶಂಕರನ ವಂಚಕ, ಕೋಮಲ ವಯ್ಯಾರಿ ಕೈ ನೊಬೆಲ್‌ನಷ್ಟು ಎತ್ತರಕ್ಕೆ ಚಾಚಲು ಹವಣಿಸುತ್ತಿದೆಯಲ್ಲ ಎಂಬುದೇ ಖೇದಕರ ಸಂಗತಿ ಅಲ್ಲವೆ? ■

# ಮಗುವಿನ ನಗುವಿಗೂ ಮರುಗದ ಜವರಾಯ



ಸಾವು ನಿರ್ದಯಿ. ತನ್ನ ಕಪಿಮುಷ್ಠಿಯಿಂದ ಹೇಗೋ ಬಚಾವಾದ ಆ ಮಗುವನ್ನು ಹೊಂಚು ಹಾಕಿ ಕರೆದೊಯ್ಯುವ ತನಕ ಬಿಡಲೇ ಇಲ್ಲ. ಮುಂಗಾರು ಮಳೆಯ ಹಾಡು, ಹೀರೋ ಗಣೇಶ್ ಕೊಟ್ಟ ಸಿಹಿಮುತ್ತು, ಎಂ.ಎಸ್. ರಾಮಯ್ಯ ಆಸ್ಪತ್ರೆಯ ವೈದ್ಯರ ಶತಪ್ರಯತ್ನ, ನಿಮ್ಹಾನ್ಸ್‌ನ ಪರಿಣಿತರು ಹರಿಸಿದ ಬೆವರು, ಪತ್ರಿಕೆಗಳ ಹಾರೈಕೆ ಮತ್ತು ಸಾವಿರಾರು ಹೃದಯವಂತರ ಹರಕೆ ಯಾವುದಕ್ಕೂ ಜವರಾಯ ಮಣಿಯಲಿಲ್ಲ.

ಮೋನಿಷಾ ಇನ್ನಿಲ್ಲ!

ಬೆಂಗಳೂರು ಎಂತೆಂಥದೋ ದುರಂತಗಳನ್ನು ಕಂಡಿದೆ. ಆದರೆ ಈ ಮಗು ಮೋನಿಷಾಳದ್ದು ಕಲ್ಲು ಕೂಡ ಕರಗುವ ಕತೆ. ತನ್ನ ಕಣ್ಣೆದುರೇ ಹೆಣವಾದ ಅಪ್ಪ ಅಮ್ಮಂದಿರ ಕಳೆಬರಗಳ ಮಧ್ಯೆ ಒಂದು ರಾತ್ರಿ ಎರಡು ಹಗಲುಗಳನ್ನು ಏಕಾಂಗಿಯಾಗಿ ಕಳೆದವಳು ಐದರ ಬಾಲೆ ಮೋನಿಷಾ. ತಂದೆ ನಾಗೇಶ್‌ಗೆ ಡಕ್‌ವರ್ತ್ ಫ್ಲೇವರ್ಸ್ ಇಂಡಿಯಾ ಕಂಪೆನಿಯಲ್ಲಿ ಕೆಲಸವಿತ್ತು, ತಾಯಿ ಸುಧಾ ಕೂಡ ಪ್ರಜ್ಞಾವಂತೆ. ಹುಟ್ಟಿದಾಗಿನಿಂದ ಕಷ್ಟವೇನೆಂಬುದನ್ನೇ ಅರಿಯದ, ಹಾಲುಗಲ್ಲದ ಹಸುಳೆಗೆ ಅದೆಂಥಾ ಆಘಾತ ಕಾದಿತ್ತೆಂದರೆ-



ಅದು 2007ರ ಡಿಸೆಂಬರ್ 24 ರ ಮುಸ್ಸಂಜೆ. ಯಾವುದೋ ಕಾರ್ಯಕ್ರಮಕ್ಕೆಂದು ನೆಂಟರೊಬ್ಬರ ಮನೆಗೆ ಹೋಗಿದ್ದ ತಾಯಿ ಮಗಳು ಬಾಗಿಲು ತೆರೆದರೆ ದೃಶ್ಯ ಭೀಕರವಾಗಿತ್ತು. ತಂದೆ ನಾಗೇಶ್‌ನ ಹೆಣ ಕುಣಿಕೆಯಲ್ಲಿ ನೇತಾಡುತ್ತಿತ್ತು. ಮುಂದಿನ ಸರದಿ ತಾಯಿಯದಾಗಿತ್ತು. ಏನು ಜಗಳ ವಿತ್ತೋ, ಯಾವ ಕಾರಣಕ್ಕೋ ಮಗುವಿಗೆಲ್ಲಿ ಗೊತ್ತಾಗಬೇಕು?

ನೋಡುನೋಡುತ್ತಿದ್ದಂತೆಯೇ ಮೋನಿಷಾಳ ಕೊರಳಿಗೆ ಕುಣಿಕೆ ಬಿಗಿದಳು ತಾಯಿ. ತಾನು ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ಕರುಳ ಕುಡಿಯನ್ನು ಕೊಂದೇ ಹೋಗುವುದು ತಾಯಿಯ ಉದ್ದೇಶವಾಗಿತ್ತು. ಹಾಗೇ ಮಗುವನ್ನು ನೇಣಿಗೇರಿಸಿದ ತಾಯಿ ಕ್ಷಣಾರ್ಧದಲ್ಲೇ ತಾನೂ ನೇಣಿಗೆ ಶರಣಾದಳು. ಆದರೆ ಮೋನಿಷಾಳ ಆಯುಸ್ಸು ಗಟ್ಟಿಯಿತ್ತು. ಕೊರಳಿಗೆ ಬಿಗಿದ ಹಗ್ಗವೇ ತುಂಡಾಗಿ ನೆಲಕ್ಕೆ ಬಿದ್ದ ಬಾಲೆಯ ಕಾಲಿಗೆ ಪೆಟ್ಟಾಗಿತ್ತು. ಬೆನ್ನಿಗೆ ಏಟಾಗಿತ್ತು. ಅಪ್ಪ ಅಮ್ಮಂದಿರ ಹೆಣಗಳ ನಡುವೆಯೇ ಒಂದು ರಾತ್ರಿ ಎರಡು ಹಗಲು ಕಳೆದಳು ಮೋನಿಷಾ.

ನೆಂಟರಿಷ್ಟರ ಬಂದು ಮನೆಬಾಗಿಲು ಬಡಿಯುವ ತನಕ ಮತಿಭ್ರಾಂತಳಂತೆ ಹೆಣಗಳ ಮಧ್ಯೆ ಕುಳಿತಿದ್ದ ಮೋನಿಷಾ ಆತನಕ ತೊಟ್ಟು ನೀರನ್ನೂ ಕುಡಿದಿರಲಿಲ್ಲ. ಗೋಡೆಯ ಸ್ವಿಚ್ಚುಗಳು ಕೈಗೆಟುಕದೇ ಕತ್ತಲಲ್ಲಿ ಇಡೀ ರಾತ್ರಿ ಕಳೆದಳು. ಮೂವತ್ತಾರು ಗಂಟೆಗಳ ಕಾಲ ಹೆಣಗಳ ಮಧ್ಯೆ ಕಂಗಾಲಾಗಿ ಕೂತೇ ಇದ್ದ ಆಕೆಯನ್ನು ಸಂಬಂಧಿಗಳು ಬಂದು ಬಚಾವು ಮಾಡುವ ಹೊತ್ತಿಗೆ ಒಂದು ಹಂತ ಮುಗಿದಿತ್ತಾದರೂ ಅಲ್ಲಿಗೆ ಆಕೆಯ ಸಾವು ಬದುಕಿನ ಮತ್ತೊಂದು ಯುದ್ಧ ಶುರುವಾಗಿತ್ತು.

ಕುತ್ತಿಗೆಗೆ ಬಿಗಿದಿದ್ದ ಉರುಳಿನ ಬಿಗಿತದಿಂದಾಗಿ ಆಕೆಯ ಮಿದುಳಿಗೆ ಆಮ್ಲಜನಕ ಸರಬರಾಜೇ ಕುಂಠಿತಗೊಂಡಿತ್ತು. ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಸತತ ಎರಡು ತಿಂಗಳುಗಳ ಕಾಲ ಆಮ್ಲಜನಕ ಕೊಟ್ಟು, ಜೀವರಕ್ಷಕಗಳ ಮೂಲಕ ಹೇಗೋ ಬದುಕಿಸಲಾಗಿತ್ತು. ಆದರೆ ಮಾನಸಿಕ ಆಘಾತ ಮತ್ತು ರಕ್ತನಾಳದ ಮೇಲೆ ಬಿದ್ದಿದ್ದ ಒತ್ತಡದಿಂದಾಗಿ ಮೋನಿಷಾಳ ಕುತ್ತಿಗೆ ಕೈಗಳು ದುರ್ಬಲಗೊಂಡಿದ್ದವು. ಆಕೆ ಮಾತನಾಡುವ ಶಕ್ತಿಯೇ ಉಡುಗಿ ಹೋಗಿತ್ತು. ಹೀಗೆ 2008 ರ ಜನವರಿ ಮತ್ತು ಫೆಬ್ರವರಿ ತಿಂಗಳನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ ಕಳೆದ ಆಕೆಯನ್ನು ಆನಂತರ ನಿಮ್ಹಾನ್ಸ್‌ಗೆ ಸೇರಿಸಲಾಯಿತು. ಅಲ್ಲಿ ಮೋನಿಷಾಳನ್ನು ಸಹಜ ಸ್ಥಿತಿಗೆ ತರುವ ಎಲ್ಲಾ ಚಿಕಿತ್ಸೆಗಳೂ ಆರಂಭವಾದವು. ಆದರೆ ಆಕೆಯ ದೇಹ ಮಾತ್ರ ವೈದ್ಯರ ವಿರುದ್ಧ ಮುನಿಸಿಕೊಂಡಿತ್ತು. ಏಪ್ರಿಲ್ 15 ರ ಹೊತ್ತಿಗೆ ಪವಾಡ ನಡೆದೇಹೋಯಿತು. ಅದೊಂದು ಮುಂಜಾನೆ ಇದ್ದಕ್ಕಿದ್ದಂತೆ ಮೋನಿಷಾ 'ಮುಂಗಾರು ಮಳೆ' ಚಿತ್ರದ ಹಾಡನ್ನು ಗುನುಗುತ್ತಿದ್ದಳು.

ನಿಮ್ಹಾನ್ಸ್ ವೈದ್ಯರ ಮಟ್ಟಿಗಿದು ಪವಾಡವೆ. ಯಾವ ಚಿಕಿತ್ಸೆಗೂ ಸ್ಪಂದಿಸದೇ ಮೂಕಿಯಂತಾಗಿದ್ದ ಮೋನಿಷಾ ಏಕಾಏಕಿ 'ಮುಂಗಾರು ಮಳೆ' ಹಾಡನ್ನು ಗುನುಗಿದಳೆಂದರೆ ಯಾರಿಗೆ ತಾನೇ ಅಚ್ಚರಿಯೆನಿಸೋಲ್ಲ?

ಇದು ಗೊತ್ತಾಗಿದ್ದೇ ಚಿತ್ರ ನಿರ್ಮಾಪಕ ಕೆ. ಮಂಜು ನಟ ಗಣೇಶ್‌ರನ್ನು ನಿಮ್ಹಾನ್ಸ್‌ಗೆ ಕರೆತಂದಾಗಿತ್ತು. ಅವತ್ತು ಮೋನಿಷಾ ಮುಖದಲ್ಲಿ ಹರುಷದ ಹೊನಲಿತ್ತು. ನಕ್ಕಳು. ಚಪ್ಪಾಳೆಯಿಟ್ಟಳು. ಗಣೇಶ್ ಆಕೆಯನ್ನೆತ್ತಿಕೊಂಡು ಮುದ್ದಾಡಿದರು. ಗಣೇಶ್ ಅಭಿನಯಿಸಿದ 'ಅರಮನೆ' ಚಿತ್ರವನ್ನು ಆಕೆಗೆಂದೇ ವಿಶೇಷ ಪ್ರದರ್ಶನ ಇಡುತ್ತೇನೆಂದರು ಕೆ. ಮಂಜು. ನಿನ್ನ ಜೊತೆ ಕುಂತೇ ಸಿನಿಮಾ ನೋಡ್ತೀನಿ ಎಂದಿದ್ದರು ಗಣೇಶ್. ಒಬ್ಬ ಸ್ಟಾರ್ ತನಗೆಂದೇ ವಿಶೇಷ ಪ್ರದರ್ಶನ ಏರ್ಪಡಿಸಿ ತನ್ನ ಜೊತೆ ಕುಂತೇ ಸಿನಿಮಾ ನೋಡುತ್ತಾನೆಂದರೆ, ಅಂಥದೊಂದು ಅದೃಷ್ಟ ಯಾವ ಮಗುವಿಗಿದ್ದೀತು?

ಬಹುಶಃ ವಿಧಿಗಿದು ಸಹಿಸದೇ ಹೋಯಿತೆ? ತನ್ನ ಮೆಚ್ಚಿನ ನಟನ ಸಾಮೀಪ್ಯ ಪ್ರೀತಿಯಿಂದಾಗಿ ಚೈತನ್ಯದ ಚಿಲುಮೆಯಂತಾದ ಮೋನಿಷಾಳನ್ನು ನಿಮ್ಹಾನ್ಸ್‌ನ ವೈದ್ಯರು ಏಪ್ರಿಲ್ ತಿಂಗಳಲ್ಲಿ ಆಕೆಯನ್ನು ಮನೆಗೆ ಕಳಿಸಿದ್ದಾರೆ. ಕುಣಿಗಲ್ ತಾಲ್ಲೂಕಿನ ತನ್ನ ತಾತ ವೀರಣ್ಣಗೌಡನ ಊರಾದ ಕಿಲಾರದಲ್ಲಿ ಒಂದಷ್ಟು ದಿನ ಲವಲವಿಕೆಯಿಂದಲೇ ಇದ್ದ ಮೋನಿಷಾಳಿಗೆ ಆರೈಕೆ ಸರಿಹೋಗಲಿಲ್ಲವೋ, ತಾತನ ಮನೆಯಲ್ಲೇ ನಿರ್ಲಕ್ಷಿಸಲಾಯಿತೋ, ತಂದೆಯ ಅಣ್ಣ ತಮ್ಮಂದಿರ್‍ಯಾರೂ ಕಾಳಜಿ ವಹಿಸಲಿಲ್ಲವೋ ಅಥವಾ ಚಿಕಿತ್ಸೆಗೆ ತಗುಲುವ ಖರ್ಚಿನ ಭೀತಿಯಿಂದ ಜಿಪುಣತನವೋ ಗೊತ್ತಿಲ್ಲ; ಕಳೆದ ಸೋಮವಾರದ ಹೊತ್ತಿಗೆ ಮೋನಿಷಾ ತೀವ್ರವಾಗಿ ಅಸ್ವಸ್ಥಗೊಂಡಿದ್ದಾಳೆ. ಕೂಡಲೇ ಆಕೆಯನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ಸೇರಿಸಿದ್ದಾರೆ. ಪರೀಕ್ಷಿಸಿದ ವೈದ್ಯರು ಏನೂ ತೊಂದರೆಯಿಲ್ಲ ಎಂದು ಅಂದೇ ಮನೆಗೆ ಕಳಿಸಿದ್ದಾರೆ.

ಆದರೆ ಮರುದಿನವೇ ಮತ್ತೆ ಹಾಸಿಗೆ ಹಿಡಿದಿದ್ದಾಳೆ. ಮತ್ತೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ತಂದರೆ ಪರೀಕ್ಷಿಸಿದ ವೈದ್ಯರು ಡೆಂಗ್ಯು ಜ್ವರ ಎಂದಿದ್ದಾರೆ. ಬುಧವಾರ ರಾತ್ರಿ ಆಕೆಯ ದೇಹಕ್ಕೆ ಬಿಳಿರಕ್ತಕಣಗಳನ್ನು ಚುಚ್ಚಿದ್ದಾರೆ. ಗುರುವಾರವೂ ಮತ್ತೆ ಬಿಳಿರಕ್ತಣಗಳ ಚಿಕಿತ್ಸೆ ನಡೆದಿದೆ. ಆದರೆ ಚುಚ್ಚಿದ ರಕ್ತವೆಲ್ಲ ಮೂಗು ಬಾಯಿಂದ ಹೊರಬರುತ್ತಿತ್ತು. ಮೋನಿಷಾ ಪ್ರಜ್ಞಾಹೀನಳಾಗಿ ಬಿದ್ದಿದ್ದಳು. ಡೆಂಗೆ ಜ್ವರಕ್ಕೆ ಆಕೆಯ ನರನಾಡಿಗಳೆಲ್ಲ ಸೋತು ಬಿದ್ದಿದ್ದವು. ಗುರುವಾರ ಬೆಳಗ್ಗೆ 7.30 ರ ಹೊತ್ತಿಗೆ ಮೋನಿಷಾ ಪ್ರಾಣಪಕ್ಷಿ ಹಾರಿಹೋಗಿತ್ತು.

ಮೋನಿಷಾ ಸಾವಿನೊಂದಿಗೆ ಆಕೆಯ ಅಪ್ಪಅಮ್ಮಂದಿರ ಆತ್ಮಹತ್ಯೆಯ ಕಾರಣವೂ ಮಣ್ಣು ಪಾಲಾಯಿತು.

ಜನ್ಮ ಕೊಟ್ಟ ತಾಯಿಯೇ ಕೊಲ್ಲಲು ನಿಂತರೆ ಬದುಕಿಬಂದವಳು ಮೋನಿಷಾ. ಸಾವಿನ ಕಪಿಮುಷ್ಠಿಯಿಂದ ಬಚಾವಾದವಳಿಗೆ ನೂರು ವರ್ಷದ ಆಯುಸ್ಸಿರಬೇಕಿತ್ತು. ಸಾವನ್ನೇ ಅಣಕಿಸುವಂತೆ ಬದುಕಬೇಕಿತ್ತು. ಕರ್ನಾಟಕದ ಅದೆಷ್ಟು ಮಂದಿಯ ಹಾರೈಕೆಯಿತ್ತೋ. ಯಾರ ದೃಷ್ಟಿ ತಗುಲಿತ್ತೋ. ಕನಿಷ್ಠ ಆ ಮಗುವಿನ ನಗುವನ್ನು ಕಂಡ ಮೇಲಾದರೂ ಜವರಾಯ ಮರುಗಬೇಕಿತ್ತು.


ಅಂತಿಮವಾಗಿ ಹೆತ್ತ ತಾಯಿಯ ಕೊನೆಯಾಸೆಗೇ ಜಯ ಸಿಕ್ಕಿತು.

ಮೋನಿಷಾ, ನಿನ್ನ ನಗುವಿಗೆ ಸಾವಿರ ವರ್ಷ!

■ ರಾ.ಸೋ.

# ಲೆಕ್ಕದ ವಿಷ್ಯ ಬ್ಯಾಡವೋ ಶಿಷ್ಯ!

"ನಾನು ಕ್ಷೇತ್ರ ಬಿಟ್ಟು, ಪಾರ್ಟಿ ಬಿಟ್ಟು ಬೇರೆ ಕ್ಷೇತ್ರದಿಂದ, ಬೇರೆ ಪಕ್ಷದಿಂದ ಗೆದ್ದಿದ್ದೇನೆ" ಅಂತ ಕುಷ್ಟಗಿ ಶಾಸಕ ಅಮರೇಗೌಡ ಬಯ್ಯಾಪುರ ತಿಂಗಳ ಮೇಲಾದರೂ ಡಂಗುರ ಹೊಡೆದುಕೊಳ್ಳುತ್ತ ತಿರುಗಾಡುತ್ತಿದ್ದಾನೆ. ಈ 'ಹನಿಮೂನ್ ಪೀರಿಯಡ್'ನಲ್ಲಿ ಎಲ್ಲೆಡೆ ಸನ್ಮಾನ ಮಾಡಿಸಿಕೊಳ್ಳುತ್ತಿರುವ ಬಯ್ಯಾಪುರ ತನ್ನನ್ನು ತಾನೇ 'ಸಾಹಸ ಸಿಂಹ', 'ರೆಬೆಲ್ ಸ್ಟಾರ್', 'ಕ್ರೇಜಿ ಸ್ಟಾರ್' ಮತ್ತು 'ಗೋಲ್ಡನ್ ಸ್ಟಾರ್' ಎಂದೆಲ್ಲ ಬಣ್ಣಿಸಿಕೊಳ್ಳುತ್ತಿರುವುದು ಮೋಜಾಗಿದೆ.



ವಾಸ್ತವವಾಗಿ ಈ ಬಯ್ಯಾಪುರ ಗೆದ್ದಿದ್ದು ಹತ್ತು ಕೋಟಿ ರೂಪಾಯಿಗಳನ್ನು ಚೆಲ್ಲಿ, ಆದರೂ ಫಲಿತಾಂಶ ಬಂದು ತಿಂಗಳಾದರೂ ತನ್ನ ಬಗ್ಗೆ ತಾನೇ ಕೊಚ್ಚಿಕೊಳ್ಳುತ್ತಾ ತಿರುಗಾಡುತ್ತಿರುವ ಈತನಿಗೆ ಇಲ್ಲಿಯತನಕ ಚುನಾವಣಾ ಆಯೋಗಕ್ಕೆ ಲೆಕ್ಕವನ್ನು ಕೊಡಲಿಕ್ಕೆ ಪುರುಸೊತ್ತಾಗಿಲ್ಲ. ಬಯ್ಯಾಪುರ ಮಾತ್ರವಲ್ಲ, ಆತನ ವಿರುದ್ಧ ಸೋತು ಸುಣ್ಣವಾಗಿರುವ ಬಿಜೆಪಿಯ ದೊಡ್ಡನಗೌಡರೂ ಲೆಕ್ಕ ಕೊಟ್ಟಿಲ್ಲ.

ಅದೆಲ್ಲಕ್ಕಿಂತ ಮಿಗಿಲಾಗಿ, ಈ ಬಯ್ಯಾಪುರ ಕಾಂಗ್ರೆಸ್ ಪಕ್ಷದಲ್ಲಿದ್ದರೂ ಆತನ ಮನಸ್ಸು ಎಷ್ಟು ಕೋಮುವಾದಿಯಾಗಿದೆ ಎಂಬುದು ಮೊನ್ನೆ ಬಹಿರಂಗಗೊಂಡು ಇಲ್ಲಿನ ಜನರಿಗೆ ಶಾಕ್ ನೀಡಿದೆ. ಇತ್ತೀಚೆಗೆ ಏನಾಯಿತೆಂದರೆ ಕುಷ್ಟಗಿಗೆ ಟೆಂಪರರಿಯಾಗಿ ನೀರು ಸಪ್ಲೈ ಮಾಡುವ ಪಂಪ್‌ನ ಸ್ಟಾರ್ಟರ್‌ನ್ನು ಉದ್ಘಾಟಿಸಿ ಪ್ರಚಾರ ಪಡೆದ ಬಯ್ಯಾಪುರನನ್ನು ತರಾಟೆಗೆ ತೆಗೆದುಕೊಂಡದ್ದು ಕುಷ್ಟಗಿ ಪುರಸಭೆ ಅಧ್ಯಕ್ಷ. ಕಾಕತಾಳೀಯವೆಂಬಂತೆ ಈತ ಮುಸ್ಲಿಂ ಸಮುದಾಯಕ್ಕೆ ಸೇರಿದವರು.

ಈ ವಿಷಯವನ್ನು ಕಾಂಗ್ರೆಸ್ಸಿಗನಾಗಿ ಬಯ್ಯಾಪುರ ತನ್ನ ವಿರೋಧಿ ಪಕ್ಷವಾದ ಜೆಡಿಎಸ್‌ನ ಪುರಸಭೆ ಅಧ್ಯಕ್ಷನನ್ನು ರಾಜಕೀಯವಾಗಿ ತರಾಟೆ ತೆಗೆದುಕೊಳ್ಳಬಹುದಿತ್ತು. ಆದರೆ ಬಯ್ಯಾಪುರ ಅದನ್ನು ಮಾಡಲಿಲ್ಲ, ಬದಲಾಗಿ ಸಂಬಂಧವಿಲ್ಲದ ವಿಷಯವನ್ನು ಕೆದಕಿ "ಪುರಸಭೆ ಅಧ್ಯಕ್ಷ ಖುರಾನ್ ತರಲಿ, ನಾನು ಭಗವದ್ಗೀತೆ ತರ್ತೀನಿ" ಅಂತ ಹೇಳುವ ಮೂಲಕ ಎರಡು ಧರ್ಮಗಳ ನಡುವೆ ಕಂಟಕ ಹುಟ್ಟಿಸಲು ಹೊರಟಿದ್ದಾನೆ.

ಇಂತಹ ಅಸಂಬದ್ಧಗಳಲ್ಲಿ ತೊಡಗಿರುವ ಕುಷ್ಟಗಿಯ ಈ 'ನವರಸ ನಾಯಕ'ನಿಗೆ ಚುನಾವಣಾ ಲೆಕ್ಕ ಕೊಡಲು ಸಮಯ ಎಲ್ಲಿ ಸಿಕ್ಕೀತು, ಅದಕ್ಕೆ ಆತ 'ಲೆಕ್ಕದ ವಿಷಯ ಬ್ಯಾಡವೋ ಶಿಷ್ಯ' ಅಂತ ಹಾಡುತ್ತಿದ್ದಾನೆ ಎಂದೇ ಇಲ್ಲಿನ ಕಾಂಗ್ರೆಸ್ಸಿಗರು ಹೇಳಿಕೊಂಡು ತಿರುಗುತ್ತಿವೆ.

ಕುಷ್ಟಗಿ ಶಾಸಕ ಅಮರೇಗೌಡ ಬಯ್ಯಾಪುರ ಗೆದ್ದ ಅಮಲಿನಲ್ಲಿ ಇನ್ನೂ ಲೆಕ್ಕ ಕೊಡದಿದ್ದರೆ ಸರಿ. ಆದರೆ ಕೊಪ್ಪಳದಲ್ಲಿ ಭಯಂಕರ ಭರವಸೆ ಹುಟ್ಟಿಸಿ ಠುಸ್ ಆದ ಬಿಎಸ್‌ಪಿಯ ಸಂಗಪ್ಪ ಮತ್ತು ಅತಂತ್ರ ರಾಜಕಾರಣಿ ಕರಿಯಣ್ಣ ಸಂಗಟಿ ಕೂಡ ಲೆಕ್ಕ ಕೊಟ್ಟಿಲ್ಲದಿರುವುದು ಅಚ್ಚರಿಹುಟ್ಟಿಸಿದೆ.

ಕೋಮುವಾದಿಯಲ್ಲದಿದ್ದರೂ ಬಿಜೆಪಿ ಪಕ್ಷವನ್ನು ಸೇರಿ ಟಿಕೆಟ್‌ಗೆ ಟ್ರೈ ಮಾಡಿ, ಅದರಲ್ಲಿ ಫೇಲಾದಾಗ ಬಿಎಸ್‌ಪಿ ಸೇರಿ "ಆನೆ ಗುರುತಿಗೆ ಮತ ನೀಡಿ, ಹಾನೆಯನ್ನು ಹಾರಿಸಿ ತರಬೇಕಾಗಿ ವಿನಂತಿ" ಅಂತ ಪ್ರಚಾರ ಮಾಡಿದ್ದ ಸಂಗಪ್ಪ ಚುನಾವಣೆಗೆಂದು ಮೂವತ್ತು ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿದ್ದರು. ಆದರೆ ಅವರಿಗೆ ಬಂದದ್ದು ಎರಡು ಸಾವಿರ ಚಿಲ್ಲರೆ ಮತಗಳು. ಒಂದೆಡೆ ಅಷ್ಟು ಖರ್ಚು ಮಾಡಿ ಇಷ್ಟು ಮತಗಳನ್ನು ಪಡೆದ ನಿರಾಶೆ ಇದ್ದರೆ, ಇನ್ನೊಂದೆಡೆ ತಾನು ತೊರೆದ ಬಿಜೆಪಿಯೇ ಇವತ್ತು ಅಧಿಕಾರಕ್ಕೆ ಬಂದಿರುವುದರ ಬಗ್ಗೆ ಜಿಗುಪ್ಸೆ ಸಂಗಪ್ಪನಿಗೆ. ಈ ದುಃಖದ ಸ್ಥಿತಿಯಿಂದಾಗಿ ಆತ ಚುನಾವಣಾ ಆಯೋಗಕ್ಕೆ ಲೆಕ್ಕ ಕೊಡುವುದನ್ನೇ ಮರೆತಿದ್ದಾರೆ ಎಂದು ಜನ ಗೇಲಿ ಮಾಡುತ್ತಿರುವುದು ಸುಳ್ಳಲ್ಲ!

ಸಂಗಪ್ಪನಂತೆಯೇ ಲೆಕ್ಕ ಕೊಡದ ಮತ್ತೊಬ್ಬ ವ್ಯಕ್ತಿ ಕರಿಯಣ್ಣ ಸಂಗಟಿ. ಜಿಲ್ಲಾ ಪಂಚಾಯ್ತಿ ಸದಸ್ಯ, ಜಿಲ್ಲಾ ಪಂಚಾಯ್ತಿ ಅಧ್ಯಕ್ಷ, ಎಂಎಲ್‌ಸಿ ಹೀಗೆ ಎಲ್ಲ ಆಗಿದ್ದ ಸಂಗಟಿಗೆ ಖರ್ಚು ವೆಚ್ಚ ಲೆಕ್ಕದತ್ತ ಚಿತ್ತವೇ ಇರಲಿಕ್ಕಿಲ್ಲ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಯಾಕೆಂದರೆ ಅವರಿಗೆ ಅದರ ಬಗ್ಗೆ ಚಿತ್ತ ಇದ್ದೇ ಇದೆ. ಅದಕ್ಕೆ ಕಾರಣವೂ ಇದೆ!

ಕಾಂಗ್ರೆಸ್ ವಿರುದ್ಧ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಸಂಗಟಿ ಅದಕ್ಕಾಗಿ ಎಲ್ಲೆಲ್ಲಿಂದಲೋ ಹಣ ಪಡೆದು ""ನಾನೇ ಗೆಲ್ಲೋದು" ಅಂತ ಬೀಗುತ್ತಿದ್ದರು. ವಿವಿಧ ಕಡೆಯಿಂದ ಅರ್ಧ ಕೋಟಿಗೂ ಮಿಕ್ಕಿ ಫಂಡ್ ಎತ್ತಿದ ಸಂಗಟಿ ಬರೀ ಎರಡೂವರೆ ಸಾವಿರ ಓಟು ಪಡೆದದ್ದನ್ನು ನೋಡಿ ಆತನಿಗೆ ಫಂಡ್ ಕೊಟ್ಟವರೆಲ್ಲ ಈಗ ಕೆಂಡಾಮಂಡಲವಾಗಿದ್ದಾರೆ. ಅಷ್ಟೇ ಅಲ್ಲ, ಅದ್ಯಾರೋ ಬಾಬಾ ಎಂಬ ನಿಧಿಗಳ್ಳ ನಿಧಿ ಎಬ್ಬಲು ಹೋಗಿ ಬಳ್ಳಾರಿ ಕಡೆ ಸಿಕ್ಕಿಬಿದ್ದಿರುವಾಗ ಅವನನ್ನು ಬಿಡಿಸಿಕೊಳ್ಳಲು ಸಂಗಟಿ ಓಡಾಡುತ್ತ ಚುನಾವಣಾ ಆಯೋಗಕ್ಕೆ ಲೆಕ್ಕ ಕೊಡುವುದನ್ನೇ ಮರೆತಿದ್ದಾರೆ. ಹೀಗಂತ ಹೇಳುತ್ತಿರುವವರು ಬೇರಾರೂ ಅಲ್ಲ, ಇದು ಅವರ ಅಳಿದುಳಿದ ಐವರು ಕಾರ್ಯಕರ್ತರ ಅಭಿಪ್ರಾಯ!

ಹೊಟ್ಟೆ ಬಿಟ್ಟೆ?

# ಪಾಲಿಟೆಕ್ನಿಕ್ ವಿದ್ಯಾರ್ಥಿ ರಾಮಕೃಷ್ಣ ಜೈಲಿಗೆ

ಕೊಪ್ಪಳದ ಪಾಲಿಟೆಕ್ನಿಕ್ ಕಾಲೇಜ್ ಈಗ ಆರ್‌ಟಿಓ ಕಚೇರಿಯಂತಾಗಿ ಹೋಗಿದೆ. ಹೇಗೆಂದರೆ ಇಲ್ಲಿ ಕೂಡ ಬ್ರೋಕರ್ ಮೂಲಕ ಬಂದರೆ ಮಾತ್ರ ಪ್ರವೇಶ ಎಂಬ ಅಲಿಖಿತ ಆದೇಶ ಜಾಲ್ತಿಯಲ್ಲಿದೆ. ದುರಂತವೇನೆಂದರೆ ಈ ಪಾಲಿಟೆಕ್ನಿಕ್ ಕಾಲೇಜಿನ ಅಡ್ಮಿಷನ್‌ಗೆ ಬ್ರೋಕರ್‌ಗಿರಿ ಮಾಡುತ್ತಿದ್ದ ವಿದ್ಯಾರ್ಥಿ ಸಂಘದ ಮುಖಂಡ ರಾಮಕೃಷ್ಣ ಸಿಕ್ಕುಬಿದ್ದು ಜೈಲುಪಾಲಾಗಿದ್ದರೆ, ಕಾಲೇಜಿನ ಅಸಲೀ ಖದೀಮರು ಬಚಾವ್ ಆಗಿದ್ದಾರೆ.

ಕಳೆದ ವರ್ಷದಿಂದ ಈ ಪಾಲಿಟೆಕ್ನಿಕ್ ಕಾಲೇಜಿನ ಸೀಟುಗಳು ಬೇಕಾಬಿಟ್ಟಿಯಾಗಿ ಬಿಕರಿಯಾಗತೊಡಗಿದ್ದು ನಿಜ. ಆದರೆ ಈ ಬಾರಿ ಕಾಲೇಜ್‌ನ ಖದೀಮರು ಸೇಫಾದ ವ್ಯಕ್ತಿ ಅಂತ ಕಾಲೇಜಿನ ವಿದ್ಯಾರ್ಥಿ ಮುಖಂಡ ಮತ್ತು ಕಾಲೇಜ್‌ನವರಿಗೆಲ್ಲ ಭಯಂಕರ ಆಪ್ತನಾಗಿದ್ದ ರಾಮಕೃಷ್ಣನನ್ನೇ 'ಅನಧಿಕೃತ' ಬ್ರೋಕರ್‌ಆಗಿ ನೇಮಿಸಿದ್ದರು.

ಕಾಲೇಜಿಗೆ ಪ್ರವೇಶ ಕೋರಿ ಅರ್ಜಿ ಸಲ್ಲಿಸಿದ್ದ ನೂರಾರು ವಿದ್ಯಾರ್ಥಿಗಳಲ್ಲಿ ಕೆಲವರೊಂದಿಗೆ ಈ ರಾಮಕೃಷ್ಣ ದೀಲ್ ಮಾಡಿಕೊಂಡಿದ್ದ. ಅವರಲ್ಲಿ ಗಿಣಿಗೇರಿ ಗ್ರಾಮದ ಮಲ್ಲನಗೌಡ ಜಂತಕಲ್ ಎಂಬುವವರು ಒಬ್ಬರು. ಇವರು ಡಿಪ್ಲೋಮಾ ಮೆಕ್ಯಾನಿಕ್ ವಿಭಾಗಕ್ಕೆ ಅರ್ಜಿ ಸಲ್ಲಿಸಿ ಜೂನ್ 9 ರಂದು ಸಂದರ್ಶನಕ್ಕೆ ಬಂದಿದ್ದರು. ಆದರೆ ಅವರ ದಾಖಲೆಗಳು ಸರಿ ಇಲ್ಲ ಎಂದು ಅವರನ್ನು ಹೊರಗಟ್ಟಲಾಗಿತ್ತು. ನಂತರ ಮತ್ತೆ ಸಂದರ್ಶನ ನಿಗದಿಯಾಗಿತ್ತು. ಆಗ "ಕಾಲೇಜಿಗೆ ಸಂಬಂಧಿಸಿದವರಿಗೆ ಹೇಳಿ ನಿನಗೆ ಅಡ್ಮಿಷನ್ ಕೊಡಿಸುತ್ತೇನೆ. ಅದಕ್ಕೆಂದು ನೀನು ಇಪ್ಪತ್ತು ಸಾವಿರ ಕೊಡಬೇಕು" ಅಂದಿದ್ದಾನೆ ರಾಮಕೃಷ್ಣ. ತನ್ನೂರಿಗೆ ಈಗ ಹತ್ತಾರು ಕಾರ್ಖಾನೆಗಳು ಬಂದಿರುವಾಗ ಮೆಕ್ಯಾನಿಕಲ್ ಓದಿ ಯಾವುದೋ ಒಂದು ಕಾರ್ಖಾನೆಯಲ್ಲಿ ಕೆಲಸ ಹಿಡಿಯುವ ಆಸೆಯಿಂದ ಮಲ್ಲನಗೌಡ "ನೋಡೋಣ" ಎಂದಿದ್ದಾನೆ.

ವಿಚಿತ್ರ ಅಂದರೆ ಜೂನ್ 24 ರ ಸಂದರ್ಶನದಲ್ಲಿ ಮಲ್ಲನಗೌಡ ಪ್ರವೇಶಕ್ಕೆ ಆಯ್ಕೆಯಾಗಿದ್ದಾನೆ. ಈ ವಿಷಯ ಗೊತ್ತಾದದ್ದೇ ತಡ ರಾಮಕೃಷ್ಣ "ದುಡ್ಡು ಕೊಡು" ಅಂತ ಗಂಟು ಬಿದ್ದಿದ್ದಾನೆ. "ಕೊಡದಿದ್ದರೆ ನಿನ್ನ ಅಡ್ಮಿಷನ್ ಕ್ಯಾನ್ಸಲ್ ಮಾಡಿಸುತ್ತೇನೆ. ಇಲ್ಲಂದ್ರೆ ನಿನಗೆ ಕಮ್ಮಿ ಮಾರ್ಕ್ಸ್ ಹಾಕಿಸಿ ಫೇಲ್ ಮಾಡಿಸುತ್ತೇನೆ" ಎಂದೂ ಧಮಕಿ ಹಾಕಿದ್ದಾನೆ.


ಕಾಲೇಜ್‌ನ ಕೆಲ ಖದೀಮರ ಪರವಾಗಿ ರೋಲ್‌ಕಾಲ್ ಮಾಡುತ್ತಿದ್ದ ರಾಮಕೃಷ್ಣನ ಕಿರುಕುಳದಿಂದ ಬೇಸತ್ತ ಮಲ್ಲನಗೌಡ "ಆದ್ಯಾರಿಗೆ ನೀ ಹಣ ಮುಟ್ಟಿಸಬೇಕು ಹೇಳು ಅವರಿಗೇ ಕೊಡ್ತೀವಿ. ನಿನಗೆ ಬೇರೆ ಕಮಿಷನ್ ಕೊಡ್ತೀವಿ" ಅಂತ ಹೇಳಿದ್ದಾನೆ. ಆದರೂ ರಾಮಕೃಷ್ಣ ರಿಯಲ್ ಎಸ್ಟೇಟ್ ರೌಡಿಯಂತೆ ಧಿಮಾಕಿನಿಂದ ಮಾತಾಡಿದಾಗ ಮಲ್ಲನಗೌಡನ ಜೊತೆ ಬಂದಿದ್ದವರೆಲ್ಲ ಆತನನ್ನು ಒದ್ದು ಗ್ರಾಮೀಣ ಸ್ಟೇಷನ್‌ಗೆ ತಂದಿದ್ದಾರೆ. ಇನ್ಸ್‌ಪೆಕ್ಟರ್ ಬಾಗಲಕೋಟೆ ಸೀದಾ ಜೈಲಿಗೆ ಅಟ್ಟಿದ್ದಾರೆ.

ಓದುವುದನ್ನು ಬಿಟ್ಟು ಕಾಲೇಜಿನ ಕೆಲವರ ಮಾತು ಕೇಳಿ ತನ್ನಂತಹ ವಿದ್ಯಾರ್ಥಿಗಳನ್ನು ಸುಲಿಯಲು ನಿಂತ ರಾಮಕೃಷ್ಣನನ್ನು ಬಿಡುವಂತೆ ಗಂಗಾವತಿಯ ಮಾಜಿ ಶಾಸಕ ಪ್ರಯತ್ನಿಸಿ ಫೇಲ್ ಆಗಿದ್ದಾರೆ. ಸರಿಯಾದ ತನಿಖೆಯಾದರೆ ಬೆಣ್ಣೆ ಗುಂಡಗಿ ಸೇರಿದಂತೆ ಕಾಲೇಜಿನ ಅನೇಕ ಖದೀಮರು ಮನೆ ಸೇರುವುದು ಖಚಿತ. ಆದರೆ ಏನ್ ಮಾಡ್ತೀರಾ, ಬೋಳಿಸಲು ಹೋದವ ಜೈಲಿನಲ್ಲಿ ರಾಮ ರಾಮ ಕೃಷ್ಣ ಕೃಷ್ಣ ಎನ್ನುತ್ತಿದ್ದಾನೆ.

ಯಡ್ಡಿಯ ಚಡ್ಡಿ ಸರಕಾರ ಅಧಿಕಾರಕ್ಕೆ ಬರುತ್ತಲೆ ಹಾವೇರಿಯಲ್ಲಿ ಪೊಲೀಸರಿಂದ ರೈತರ ಮೇಲೆ ಗೋಲೀಬಾರ್ ನಡೆಸಿ ಒಬ್ಬನನ್ನು ಕೊಂದು ತಾನು ರೈತಪರ ಸರಕಾರವಲ್ಲ ಎಂಬುದನ್ನು ಜಗಜ್ಜಾಹೀರುಮಾಡಿದೆ. ಈ ಘಟನೆಯ ತರುವಾಯವೂ ಕರ್ನಾಟಕದಾದ್ಯಂತ ರೈತರು ಒಂದೇ ಸಮ ಗೊಬ್ಬರಕ್ಕಾಗಿ ಪರದಾಡುತ್ತಿದ್ದರೂ ಯಡ್ಡಿ ಮಾತ್ರ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತ ಇತರರನ್ನು ದೂಷಿಸುತ್ತಾ ಸುಮ್ಮನಿದ್ದಾರೆ.

ಮೊದಲೇ ಬೆಲೆ ಏರಿಕೆಯಿಂದ ಕಂಗೆಟ್ಟರುವ ರೈತಾಪಿ ಜನ ಹೈರಾಣಾಗಿದ್ದಾರೆ. ಸಕಾಲಕ್ಕೆ ಮಳೆಯಾಗದಿದ್ದರೇನಂತೆ? ವಾತಾವರಣದಲ್ಲಾದರೂ ತಂಪು ಹುಟ್ಟಿದೆಯಲ್ಲ, ಇಂದಲ್ಲ ನಾಳೆ ಮಳೆ ಬಂದೇ ಬರುತ್ತೆ ಎಂಬ ಸದಾಶಯದಿಂದ ಗೊಬ್ಬರವನ್ನು ಖರೀದಿಸಲು ಪೇಟೆಗೆ ಹೋದರೆ ಅಲ್ಲಿ ರೊಕ್ಕ ಕೊಟ್ಟರೂ ಗೊಬ್ಬರ ಸಿಗುತ್ತಿಲ್ಲವೆಂದರೆ ಆತ ಏನು ಮಾಡಬೇಕು?

# ಗುಲಬರ್ಗಾದ ರೈತರ ಮೇಲೂ ಪೊಲೀಸರ ಕ್ರೌರ್ಯ



ಹೈದ್ರಾಬಾದ್ ಕರ್ನಾಟಕ ಭಾಗದಲ್ಲೂ ರೈತರ ಪಾಡು ಖರಾಬಾಗಿದೆ. ಕಳೆದೊಂದು ತಿಂಗಳಿಂದ ಸುರಿಯದ ಮುಂಗಾರು ಮಳೆ ಇತ್ತೀಚೆಗೆ ತುಂತುರು ಹನಿಯಾಗಿ ಹಣಕಿಹಾಕಿದೆ. ಇದರಿಂದ ರೈತರು ಚುರುಕಾಗಿ ತಮ್ಮ ಹೊಲಗಳಿಗೆ ಬೇಕಾಗುವ ಡಿಎಪಿ, ಕಾಂಪ್ಲೆಕ್ಸ್, ಯೂರಿಯಾ ಗೊಬ್ಬರಕ್ಕಾಗಿ ಗುಲಬರ್ಗಾ ನಗರಕ್ಕೆ ದೌಡಾಯಿಸುತ್ತಿದ್ದಾರೆ. ಸೇಡಂ, ಚಿಂಚೋಳಿ, ಗುಲಬರ್ಗಾ, ಜೇವರ್ಗಿಯ ರೈತರೆಲ್ಲ ಜೂನ್ 25ರಂದು ಗುಲಬರ್ಗಾದ ಎಪಿಎಂಸಿ ಪ್ರಾಂಗಣದಲ್ಲಿ ಜಮೆಯಾದರು. ಜಿಲ್ಲಾಡಳಿತ ರೈತನೊಬ್ಬನಿಗೆ ಕೇವಲ ಒಂದು ಚೀಲದಂತೆ ಮಾತ್ರ ಗೊಬ್ಬರ ವಿತರಿಸಿತು. ಈ ಪ್ರಮಾಣದ ಗೊಬ್ಬರ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂಬಂತೆ ಇದೆಯಾದರೂ ರೈತರೆಲ್ಲ ಸಮಾಧಾನದಿಂದಲೇ ಮುಂಜಾನೆಯಿಂದ ಸರತಿಸಾಲಿನಲ್ಲಿ ನಿಂತು ಪಡೆದರು.

ಆದರೆ ಸಾಯಂಕಾಲದ ಕಚೇರಿಯ ಸಮಯ ಮುಗಿಯುತ್ತಲೇ ಅಧಿಕಾರದ ಮದದಿಂದ ಕೊಬ್ಬಿರುವ ಎಪಿಎಂಸಿ ಅಧಿಕಾರಿಗಳು 'ನಾಳೆ ಬನ್ನಿ' ಎಂದು ತಕರಾರು ತೆಗೆದರು. ಇದರಿಂದ ಮುಂಜಾನೆಯಿಂದ ಸರತಿ ಸಾಲಿನಲ್ಲಿ ನಿಂತ ರೈತರು ಕುಪಿತರಾದರು. 'ನಾವು ಬೆಳಿಗ್ಗೆಯಿಂದ ಇಲ್ಲೇ ಇದ್ದೇವೆ. ಈಗ ಒಮ್ಮಿಂದೊಮ್ಮೆ ಹೋಗಿ ನಾಳೆ ಬನ್ನಿ ಎಂದರೆ ಹೇಗೆ?' ಎಂದು ಪ್ರಶ್ನಿಸಿದರು. ಕೊನೆಗೆ 'ನೀವಂದಂತೆ ಈಗ ಹೋಗುತ್ತೇವೆ. ಆದರೆ ನಾಳೆ ನಾವು ಬಂದಾಗ ನಮಗೆ ಮೊದಲ ಪ್ರಾಶಸ್ತ್ಯ ಕೊಡಿ' ಎಂದು ವಿನಂತಿಸಿಕೊಂಡರು.

ರೈತರ ಈ ಅಹವಾಲನ್ನು ಕಿವಿಯ ಮೇಲೆ ಹಾಕಿಕೊಳ್ಳದ ಅಧಿಕಾರಿಗಳು ರೈತರ ಮೇಲೆ ಪೊಲೀಸರನ್ನು ಛೂಬಿಟ್ಟರು. ಐದಾರು ದಿನಗಳಿಂದ ಗೊಬ್ಬರಕ್ಕಾಗಿ ಅಂಡಲೆಯುತ್ತ, ಸರತಿ ಸಾಲಿನಲ್ಲಿ ಕಾದು ನಿಂತಿದ್ದ ಆಳಂದದ ರೈತ ವಿಠ್ಠಲ್ ರಾವ್ ಬಿರಾದಾರರಿಗೆ ಪೊಲೀಸರು ತಮ್ಮ ಲಾಠಿಗಳಿಂದ ಮನಬಂದಂತೆ ಥಳಿಸಿದರು. ಈ ಏಟುಗಳಿಂದ ತೋಳಿನ ಮೇಲೆ, ಎದೆಯ ಮೇಲೆ ಗಾಯಗಳಾದವು. ತಲೆಗೆ ಬಿದ್ದ ಏಟಿನಿಂದಾಗಿ ಇಂದಿಗೂ ಜುಮ್‌ಜುಮ್ ಅನ್ನುತ್ತಿದೆ ಎನ್ನುತ್ತಾರೆ ಬಿರಾದಾರ. ಕೈ ಬೆರಳುಗಳ ಮೇಲೆ ಬಲವಾದ ಏಟು ಬಿದ್ದು ಅವರು ಇಂದಿಗೂ ತಮ್ಮ ಕೈಗಳನ್ನು ಚಾಚಲಾಗುತ್ತಿಲ್ಲ. ಅವರಂತೆಯೇ ಸುಮಾರು 60 ರಿಂದ 70 ಜನರಿಗೆ ಪೊಲೀಸ್ ಲಾಠಿಯ ಏಟು ಬಿದ್ದಿದೆ.

ಗುಲ್ಬರ್ಗಾದ ಕಾಟನ್ ಮಾರ್ಕೆಟದಿಂದ ಮುಖ್ಯ ರಸ್ತೆಯವರೆಗೂ ರೈತರನ್ನು ಅಟ್ಟಾಡಿಸಿಕೊಂಡು ಕೆಎಸ್ಸಾರ್‌ಪಿ ಪೊಲೀಸರು ದನ ಬಡಿದಂತೆ ಬಡಿದಿದ್ದಾರೆ. ಈ ಮೂಲಕ ಗುಲಬರ್ಗಾದಲ್ಲೂ ಪೊಲೀಸರು ತಮ್ಮ ಕ್ರೌರ್ಯ ಎಂಥದ್ದು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಯಾವುದಾದರೂ ದೊಂಬಿ-ಗದ್ದಲ ಉಂಟಾದಾಗ ರಕ್ಷಣೆ ಮಾಡಬೇಕಾದ ಪೊಲೀಸರನ್ನು ಯಡ್ಡಿಯ ಸರಕಾರ ರೈತರನ್ನು ಹೊಡೆಯಲು ಉಪಯೋಗಿಸುತ್ತಿರುವುದರ ಅರ್ಥ ಏನು? ಕೆಎಸ್ಸಾರ್‌ಪಿ ತುಕಡಿಗಳನ್ನಿಟ್ಟು ಅವರನ್ನು ಹೊಡೆಸುವ ಜರೂರತ್ತು ಯಡ್ಡಿಗೆ ಬಂದುದು ನಮ್ಮ ನಾಡಿನ ದುರ್ವಿಧಿ ಎನ್ನದೆ ವಿಧಿಯಿಲ್ಲ, ಅಲ್ಲವೆ?

■ ವಿಶ್ವಾರಾಧ್ಯ ಸತ್ಯಂಪೇಟೆ

# ನಾಮರ್ದ ರಾಜಕಾರಣಿಗಳು ಮತ್ತು ರೈತರು

ಅತ್ತ ರೈತರೆಲ್ಲ ಗೊಬ್ಬರ ಸಿಗದೆ ಪೊಲೀಸರ ಲಾಠಿ ಏಟು ತಿನ್ನುತ್ತಿದ್ದರೆ, ಇತ್ತ ಕಲಬುರ್ಗಿ ಜಿಲ್ಲೆಯ ಪುಢಾರಿ ಗಣಂಗಳೆಲ್ಲ ತಾವು ಗೆದ್ದ ಖುಷಿಯಲ್ಲಿ ದಿನನಿತ್ಯ ಒಂದಿಲ್ಲೊಂದು ಕಡೆ ಸನ್ಮಾನ ಸಭೆಗಳನ್ನು ಏರ್ಪಡಿಸಿಕೊಳ್ಳುತ್ತ ನಡೆದಿದ್ದಾರೆ. ನಾಚಿಕೆ, ಶರ್ಮ ಎಂಬುದೇ ಗೊತ್ತಿಲ್ಲದ ಈ ಪುಢಾರಿಗಳು ತಾವು ಈಗ ಗೆದ್ದು ಬಂದಿರುವುದೇ ರೈತಾಪಿ ಜನಗಳಿಂದ ಎಂಬ ಅರಿವು ಇಲ್ಲದಂತಾಡುತ್ತಿದ್ದಾರೆ. ತಾವು ಗೆದ್ದ ಅಹಂನಲ್ಲಿ ಸೋತ ಅಭ್ಯರ್ಥಿಗಳನ್ನು ಹಾಗೂ ಅವರ ಹಿಂಬಾಲಕರನ್ನು ಹಳಿಯುತ್ತ ನಡೆದಿರುವುದು ಇವರ ದ್ವೇಷದ ರಾಜಕಾರಣವನ್ನು ಸಾಬೀತುಮಾಡುತ್ತಿದೆ. ಇಂಥ ನಾಮರ್ದ ರಾಜಕಾರಣಿಗಳಿಂದ ಗುಲಬರ್ಗಾ ಜಿಲ್ಲೆಯ ರೈತರನ್ನು ಕಾಪಾಡುವವರು ಯಾರು?

# ಪದ್ಮಪ್ರಿಯಾ : 25 ಕೋಟಿ ರೂ. ಒಡತಿ?

ಪತ್ನಿ ಪೀಡಕ ರಘುಪತಿ ಭಟ್ಟನನ್ನು ರಕ್ಷಿಸುವ ಘನಕಾರ್ಯವನ್ನು ಉಡುಪಿ ಪೊಲೀಸರು ಇನ್ನೂ ಕೈಬಿಟ್ಟಿಲ್ಲ. ಅದಕ್ಕೆಂದೇ ಅವರು ಭಟ್ಟನ ಪತ್ನಿ ಪದ್ಮಪ್ರಿಯಾರ ಸಾವಿಗೆ ಸಂಬಂಧಿಸಿದಂತೆ ಆಕೆಯ ಸ್ನೇಹಿತ ಅತುಲ್ ರಾವ್‌ನನ್ನು ತಲೆಗಲೂ ಇನ್ನಿಲ್ಲದಂತೆ ಪೀಡಿಸುತ್ತಿದ್ದಾರೆ.

ಇದಕ್ಕೆ ಎರಡು ಕಾರಣಗಳಿವೆ ಎಂದು ಉಡುಪಿಗೆ ಉಡುಪಿಯೇ ಮಾತನಾಡಿಕೊಳ್ಳುತ್ತಿದೆ. ಅವುಗಳೆಂದರೆ ಮೊದಲನೆಯದಾಗಿ ಪದ್ಮಪ್ರಿಯರ ಸಾವಿಗೆ ಅತುಲ್‌ನೇ ಕಾರಣ ಎಂದು ಹ್ಯಾಗಾದರೂ ಮಾಡಿ ಆತನನ್ನು ಫಿಕ್ಸ್ ಮಾಡುವುದು, ಎರಡನೆಯದಾಗಿ ಅತುಲ್ ಬಳಿ ಇರುವ ಭಟ್ಟನ ಬೇನಾಮಿ ದುಡ್ಡನ್ನೆಲ್ಲ ಹೇಗಾದರೂ ಮಾಡಿ ವಾಪಸ್ಸು ಪಡೆದು ಭಟ್ಟನಿಗೆ ಒಪ್ಪಿಸುವುದು.

ಇದಕ್ಕೆ ಅಲ್ಲವೇ ಉಡುಪಿ ಪೊಲೀಸರು ಇಷ್ಟೆಲ್ಲಾ ನಾಟಕವಾಡುತ್ತಿರುವುದು. ಮೊದಲು ಅತುಲ್ ರಾವ್‌ನನ್ನು ಉಡುಪಿ ಪೊಲೀಸರು ಅಕ್ರಮವಾಗಿ ತಮ್ಮ ವಶದಲ್ಲೇ ಮೂರ್ನಾಲ್ಕು ದಿನ ಇಟ್ಟುಕೊಂಡಿದ್ದರೂ ಅದರ ಬಗ್ಗೆ ಪತ್ರಕರ್ತರಿಗೆ ಬಾಯಿಮಾತಿನಲ್ಲಿ ಹೇಳಿದ್ದರೇ ಹೊರತು ಆತನನ್ನು ಮಾಧ್ಯಮದ ಮುಂದಾಗಲಿ, ನ್ಯಾಯಾಲಯದ ಮುಂದಾಗಲಿ ಹಾಜರುಪಡಿಸಲಿಲ್ಲ. ಆಗ ವಿಧಿ ಇಲ್ಲದೆ ಅತುಲ್ ಪತ್ನಿ ಮೀರಾ ನ್ಯಾಯಾಲಯದ ಮೊರೆಹೋಗಿ "ನನ್ನ ಗಂಡನನ್ನು ಹುಡುಕಿ" ಎಂದು ಹೇಬಿಯಸ್ ಕಾರ್ಪಸ್ ಅನ್ನು ದಾಖಲಿಸಬೇಕಾಯಿತು. ಆಗ ಪೊಲೀಸರು "ಅತುಲ್ ವಿರುದ್ಧ ಯಾವ ದೂರೂ ಇಲ್ಲ, ಪದ್ಮಪ್ರಿಯಾಳ ಸಾವಿನಲ್ಲಿ ಆತನ ಪಾತ್ರ ಕಂಡುಬರುತ್ತಿಲ್ಲ" ಎಂದು ಹೇಳಿ ಅವನನ್ನು ಬಿಡುಗಡೆ ಮಾಡಿದ್ದರು.

ಆ ಕೂಡಲೇ ಅತುಲ್ ಎದೆನೋವು ಎಂದು ಹೇಳಿ ಆಸ್ಪತ್ರೆ ಸೇರಿದ್ದರು. ಆಗ ಅತುಲ್‌ರವರ ಸ್ನೇಹಿತರು ನಿರೀಕ್ಷಣಾ ಜಾಮೀನು ಪಡೆಯುವರೆಗೂ ಆಸ್ಪತ್ರೆಯಿಂದ ಹೊರಬರಬೇಡ ಎಂದು ಸಲಹೆ ನೀಡಿದ್ದರು. ಆದರೆ ಅತುಲ್ ಮೇಲೆ ಅದ್ಯಾರು ಒತ್ತಡ ಹೇರಿದರೊ, ಅದೆಂತಹ ಬ್ಲ್ಯಾಕ್‌ಮೇಲ್ ಮಾಡಿದರೊ ಗೊತ್ತಿಲ್ಲ ಅತುಲ್ ಇದ್ದಕ್ಕಿದ್ದಂತೆ ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆಗಿ ಹೊರಬಂದರು.

ಈ ಮಧ್ಯೆ ಹೇಗಿದ್ದರೂ ಪೊಲೀಸರು ಭಟ್ಟನಿಂದ "ನನ್ನ ಹೆಂಡತಿಯ ಸಾವಿಗೆ ಅತುಲ್‌ನೇ ಕಾರಣ" ಎಂಬ ಒಂದು ದೂರನ್ನು ದಾಖಲಿಸಿಕೊಂಡಿದ್ದರು. ಅದನ್ನೇ ಆಧರಿಸಿ ಆಸ್ಪತ್ರೆಯಿಂದ ಹೊರಬಿದ್ದ ಅತುಲ್‌ನನ್ನು ಅರೆಸ್ಟ್ ಮಾಡಿದರು ಉಡುಪಿ ಪೊಲೀಸರು.

ಹಾಗೆ ನೋಡಿದರೆ ಪದ್ಮಪ್ರಿಯಾಳ ಸಾವಿಗೆ ಅತುಲ್‌ಗಿಂತ ಆಕೆಯ ಗಂಡ ರಘುಪತಿ ಭಟ್ಟನೇ ನೇರವಾಗಿ ಕಾರಣನಾಗುತ್ತಾನೆ. ಆಕೆಯೊಂದಿಗೆ ದಾಂಪತ್ಯ ಜೀವನ ನಡೆಸಿದಾಗ ಆಕೆಗೆ ಭಟ್ಟ ಕೊಟ್ಟಿರಬಹುದಾದ ಕಿರುಕುಳ ಬದಿಗಿರಲಿ, ಆಕೆ ದೆಹಲಿಯ ಫ್ಲ್ಯಾಟ್ ಒಂದರಲ್ಲಿದ್ದಾಳೆ ಎಂದು ಗೊತ್ತಾದ ನಂತರ ಪೊಲೀಸರೇ ತಮ್ಮೊಂದಿಗೆ ಅತುಲ್‌ನನ್ನು ಕರೆದುಕೊಂಡು ದೆಹಲಿಗೆ ಹೋಗಿದ್ದರು.



ಆದರೆ ಅವರಿಗಿಂತಲೂ ಮುಂಚೆ ಪೊಲೀಸರ ಗೈರು ಹಾಜರಿಯಲ್ಲಿ ಪದ್ಮಪ್ರಿಯಾ ಇದ್ದ ಮನೆಗೆ ಭೇಟಿ ನೀಡಿದ್ದು ಭಟ್ಟ ಮತ್ತಾತನ ಚೆಡ್ಡಿ ಸ್ನೇಹಿತ ಕಾರ್ಕಳದ ಸುನೀಲ್ ಕುಮಾರ್. ಆದ್ದರಿಂದ ರಘುಪತಿ ಭಟ್ಟನನ್ನೇ ಬಂಧಿಸಿ, ವಿಚಾರಣೆ ಮಾಡಿ ಅವತ್ತು ಬೆಳಗ್ಗೆ ಪದ್ಮಪ್ರಿಯಾ ಇನ್ನೂ ಬದುಕಿದ್ದಾಗ ಆತ ಆಕೆಗೆ ಏನೆಂದ, ಏನು ಮಾಡಿದ ಎಂದು ಪತ್ತೆ ಹಚ್ಚಬೇಕಿದೆ. ಅದನ್ನು ಬಿಟ್ಟು ಪದ್ಮಪ್ರಿಯಾ ಸತ್ತಾಗ ತಮ್ಮೊಂದಿಗೇ ಇದ್ದ ಅತುಲ್‌ನನ್ನು ಬಂಧಿಸಿ ಆತನನ್ನು ವಿಚಾರಣೆಗೆ ಒಳಪಡಿಸಿದರೆ ಸಿಕ್ಕುವುದಾದರೂ ಏನು?

ಇನ್ನು ಹಣದ ವಿಷಯ. ಈಗಾಗಲೇ ಜಗಜ್ಜಾಹೀರಾಗಿರುವಂತೆ ಅತುಲ್ ತನ್ನ ಪತ್ನಿ ಮೀರಾ ಮತ್ತು ತಾಯಿ ಉಷಾರವರ ಹೆಸರಲ್ಲಿ 'ಧರ್ಮಶ್ರೀ' ಎಂಬ ಕಾಂಟ್ರ್ಯಾಕ್ಟ್ ಕಂಪನಿ ಹೊಂದಿದ್ದ, ಅಷ್ಟೇ ಅಲ್ಲ, ಅಪ್ಪಟ ಗೃಹಿಣಿಯರಾದ ಮೀರಾ ಮತ್ತು ಉಷಾ ರಾವ್‌ರವರು ರಘುಪತಿ ಭಟ್ಟನ ಕೋಟ್ಯಧಿಪತಿ ಬೇನಾಮಿಗಳು. ಈಗ ಅವರ ಹೆಸರಲ್ಲಿರುವ ದುಡ್ಡು ಮತ್ತು ಆಸ್ತಿಯನ್ನು ಭಟ್ಟನಿಗೆ ವಾಪಸ್ಸು ಬರುವಂತೆ ನೋಡಿಕೊಳ್ಳುವ ಯತ್ನದಲ್ಲೂ ಉಡುಪಿ ಪೊಲೀಸರು ಕಾರ್ಯನಿರತರಾಗಿದ್ದಾರೆ ಎಂಬ ಗುಸುಗುಸುವಿದೆ.

ಪೊಲೀಸರ ಈ ಸುಪಾರಿ ಕೆಲಸಕ್ಕೆ ಕಡಿವಾಣ ಹಾಕುವವರ್ಯಾರು?

## ಪೊಲೀಸರ ಮೋಜಿನ ಟ್ರಿಪ್

ಉಡುಪಿಯ ಬಿಜೆಪಿ ಶಾಸಕ ಕೆ. ರಘುಪತಿ ಭಟ್ಟನ



ಪತ್ನಿ ಪದ್ಮಪ್ರಿಯಾರ ನಿಗೂಢ ಸಾವಿನ ಪ್ರಕರಣಕ್ಕೆ ಮಂಗಳ ಹಾಡಲು ರಾಜ್ಯದ ಬಿಜೆಪಿ ಸರ್ಕಾರ ನಿರ್ಧರಿಸಿದೆ.

ಪದ್ಮಪ್ರಿಯಾ ಮನೆ ತೊರೆದುಹೋದ ವಾರದ ಬಳಿಕ ಪೂರ್ವ ನಿಯೋಜಿತ ಷಡ್ಯಂತ್ರದಂತೆ ರಘುಪತಿ ಭಟ್ಟ ನೀಡಿದ ದೂರಿನ ಆಧಾರದಲ್ಲಿ ಎಲ್ಲದಕ್ಕೂ ಅತುಲ್‌ರಾವ್ ಕಾರಣ ಎಂದು ಎಫ್‌ಐಆರ್ ದಾಖಲಿಸಿರುವ ಪೊಲೀಸ್ ಅಧಿಕಾರಿಗಳು, ಇದೀಗ ತನಿಖೆ ಎಂಬ ಪ್ರಹಸನದಲ್ಲಿ ನಿರತರಾಗಿದ್ದಾರೆ. ಜೂನ್ 30ಕ್ಕೆ ಪದ್ಮಪ್ರಿಯಾ ನಿಗೂಢ ಸಾವಿನ ಪ್ರಕರಣಕ್ಕೆ ಎಳ್ಳು-ನೀರು ಬಿಟ್ಟು ಕೈ ತೊಳೆದುಕೊಳ್ಳುವುದು ಗ್ಯಾರಂಟಿಯಾಗಿದೆ.

## ಪ್ರಹಸನ

ಮಣಿಪಾಲ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಿ.ಜಿ.ಆಚಾರ್ ಹಾಗೂ ಸಿಬ್ಬಂದಿಗಳು ಜೂನ್ 24ರಿಂದ ಅತುಲ್‌ರಾವ್‌ರವರ ವಿಚಾರಣೆ ನಡೆಸುತ್ತಿದ್ದಾರೆ.

ಪದ್ಮಪ್ರಿಯಾರವರನ್ನು ಅತುಲ್‌ರಾವ್ ಎಲ್ಲಿಗೆಲ್ಲಾ ಕರೆದುಕೊಂಡು ಹೋಗಿದ್ದರೋ, ಅಲ್ಲೆಲ್ಲ ಮತ್ತೊಮ್ಮೆ ಪೊಲೀಸ್ ಅಧಿಕಾರಿಗಳು ಅತುಲ್‌ರಾವ್‌ರವರನ್ನು ಕರೆದುಕೊಂಡು ಹೋಗುತ್ತಿದ್ದಾರೆ. ಪೊಲೀಸ್ ಅಧಿಕಾರಿಗಳಿಗೆ ಇದೊಂದು ಮೋಜಿನ ಪ್ರವಾಸವಾಗಿದೆ.

ಕುಮಟಾ, ಗೋವಾ ಮತ್ತು ದೆಹಲಿಗೆ ಹೋಗಿ ಸಾಕಷ್ಟು ಮಜ ಮಾಡಿರುವ ಖಾಕಿ ತಂಡ, ಜೂನ್ 30ರಂದು ಮಧ್ಯಾಹ್ನ ಅತುಲ್‌ರಾವ್‌ರವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಪ್ರಕರಣಕ್ಕೆ ಇತಿಶ್ರೀ ಹಾಡುತ್ತದಂತೆ!

ಜೂನ್ 23ರಂದು ಕೇರಳ ರಾಜ್ಯದ ಕಾಸರಗೋಡು ಜಿಲ್ಲೆಯ ಕಾಞಂಗಾಡು ಎಂಬಲ್ಲಿರುವ ಸಂಬಂಧಿಯೊಬ್ಬರ ಮನೆಯಿಂದ ಬಿ.ಜಿ. ಆಚಾರ್ ನೇತೃತ್ವದ ಪೊಲೀಸ್ ತಂಡ ಅತುಲ್‌ರಾವ್ ಅವರನ್ನು ಬಂಧಿಸುವ ಸಾಹಸವೆಂಬ ನಾಟಕವನ್ನು ಪ್ರದರ್ಶಿಸಿದ್ದರು.

## ಬೆತ್ತಲಾದ ಪೊಲೀಸ್

ಪದ್ಮಪ್ರಿಯಾ ಪ್ರಕರಣದಲ್ಲಿ ಸಾರ್ವಜನಿಕರ ಕಣ್ಣಲ್ಲಿ ಹಲವು ಬಾರಿ ಬೆತ್ತಲೆಯಾದ ಪೊಲೀಸ್ ಇಲಾಖೆ, ಜೂನ್ 24ರಂದು ನ್ಯಾಯಾಲಯದಲ್ಲಿ ಮಗದೊಮ್ಮೆ ಬೆತ್ತಲೆಯಾಯಿತು.

ಪದ್ಮಪ್ರಿಯಾರ ಅಪಹರಣ ಮತ್ತು ಆತ್ಮಹತ್ಯೆಗೆ ಪ್ರೇರಣೆ ನೀಡಿದ ಆರೋಪವನ್ನು ರಘುಪತಿಭಟ್ಟ ಕೊಟ್ಟ ದೂರಿನಂತೆ ಅತುಲ್ ವಿರುದ್ಧ ದಾಖಲಿಸಿಕೊಂಡಿರುವ ಪೊಲೀಸ್ ಅಧಿಕಾರಿಗಳು, ಅತುಲ್‌ರನ್ನು ಜೂನ್ 24ರಂದು ಉಡುಪಿಯ ಪ್ರಧಾನ ಸಿವಿಲ್ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಕುಮಟಾ, ಗೋವಾ, ದೆಹಲಿ, ಬೆಂಗಳೂರು ಮುಂತಾದೆಡೆಗಳಿಗೆ ಕರೆದೊಯ್ದು ವಿಚಾರಣೆ ನಡೆಸಲಿರುವುದರಿಂದ ಅತುಲ್‌ನನ್ನು 15 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಒಪ್ಪಿಸಬೇಕೆಂದು ತನಿಖಾಧಿಕಾರಿಗಳು ಕೇಳಿಕೊಂಡರು.

ನ್ಯಾಯಾಧೀಶರಾದ ಎ.ಎಂ. ರಾಮಚಂದ್ರಯ್ಯ ಅವರು ಮೂರ್ಖರೆಂದೋ, ಬಾವಿಯೊಳಗಿನ ಕಪ್ಪೆ ಎಂದೋ ಪೊಲೀಸರು ತಿಳಿದುಕೊಂಡಿದ್ದಾರೇನೋ?

ಪೊಲೀಸರ ಲೆಕ್ಕಾಚಾರ ತಲೆಕೆಳಗಾಯಿತು. ನ್ಯಾಯಾಧೀಶರು ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಮಹಾಮಂಗಳಾರತಿಯನ್ನೇ ಎತ್ತಿಬಿಟ್ಟರು.

"ಅತುಲ್ ಇಷ್ಟು ದಿನ ಎಲ್ಲಿದ್ದ? ನಿಮ್ಮ ಜತೆಗೇ ಇದ್ದನಲ್ಲ? ಆಗ ಏನು ಮಾಡುತ್ತಿದ್ದಿರಿ? ದೆಹಲಿಗೆ ಹೋಗಿಬರಲು 15 ದಿನ ಯಾಕೆ? 3 ದಿನ ಸಾಲದೇ?" ಎಂದೆಲ್ಲ ಪ್ರಶ್ನಿಸಿ ಕೊನೆಗೆ 6 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದರು.

## ಭಟ್ಟರಿಗೆ ಗೊಂದಲ

ಪದ್ಮಪ್ರಿಯಾ ಕಾಣೆಯಾದುದೋ ಅಪಹರಣವೋ ಎಂಬ ಬಗ್ಗೆ ರಘುಪತಿ ಭಟ್ಟರೇ ಗೊಂದಲದಲ್ಲಿದ್ದಾರೆ, ದ್ವಂದ್ವದಲ್ಲಿದ್ದಾರೆ.

ಜೂನ್ 11ರಂದು ತವರುಮನೆಗೆ ಹೋಗುವುದಾಗಿ ಹೇಳಿ ಹೋದವರು, ಮರಳಿ ಮನೆಗೆ ಬರದೆ ಕಾಣೆಯಾಗಿದ್ದಾರೆಂದು ಜೂನ್ 13ರಂದು ಸಂಜೆ ಭಟ್ಟರ ತಾಯಿ ಮಣಿಪಾಲ ಪೊಲೀಸರಿಗೆ ದೂರು ನೀಡುತ್ತಾರೆ. ಅದೂ ಸಹ ಪೊಲೀಸರೇ ತಿಳಿಸಿದ ಬಳಿಕ.

ಜೂನ್ 19ಕ್ಕೆ ಪದ್ಮಪ್ರಿಯಾಳನ್ನು ಅತುಲ್ ಅಪಹರಿಸಿದ್ದಾನೆಂದು ಭಟ್ಟ ಮಣಿಪಾಲ ಪೊಲೀಸರಿಗೆ ದೂರು ಕೊಡುತ್ತಾನೆ.

ಪದ್ಮಪ್ರಿಯಾಳೇ ದೆಹಲಿಯ ಫ್ಲ್ಯಾಟ್‌ನಿಂದ ಸ್ವತಃ ಕಾರು ಚಲಾಯಿಸಿಕೊಂಡು ಹೊರಹೋಗಿದ್ದಾಳೆಂದು ಎಸ್.ಪಿ. ದೇವಜ್ಯೋತಿ ರೇ ಅವರು ಜೂನ್ 15ರಂದು ಬೆಳಗ್ಗೆ ದೆಹಲಿಯಲ್ಲಿದ್ದ ಕರ್ನಾಟಕ ಪೊಲೀಸರಿಗೆ ಮೊಬೈಲ್‌ನಲ್ಲಿ ತಿಳಿಸುತ್ತಾರೆ.

ಅಪಹರಣಕ್ಕೊಳಗಾದ ಪದ್ಮ ಪ್ರಿಯಾ ಸ್ವತಃ ಕಾರಿನಲ್ಲಿ ಸುತ್ತಾಡುತ್ತಾರೆಯೇ? ಎಂಬ ಪ್ರಶ್ನೆಯೂ ಭಟ್ಟನಲ್ಲಿ ಮೂಡುವುದಿಲ್ಲ.

ಅಪಹರಣಕ್ಕೆ ಒಳಗಾದುದೇ ಹೌದಾದರೆ ದೆಹಲಿಯ ಫ್ಲ್ಯಾಟ್‌ನಲ್ಲಿ ಒಂಟಿಯಾಗಿದ್ದ ಪದ್ಮಪ್ರಿಯಾ ಆತ್ಮಹತ್ಯೆಯನ್ನಾದರೂ ಯಾಕಾಗಿ ಮಾಡಿಕೊಳ್ಳಬೇಕಿತ್ತು?

ಭಟ್ಟ ಮೌನ ವಹಿಸಿದ್ದಾನೆ. ತಪ್ಪು ತನ್ನದೇ ಆಗಿರುವಾಗ, ಆರೋಪಿಯೂ ತಾನೇ ಆಗಿರುವಾಗ ಮೌನ ಮುರಿಯುವುದಾದರೂ ಹೇಗೆ? ಯಾವ ಪ್ರಶ್ನೆಗಾದರೂ ಏನೆಂದೂ ತಾನೇ ಭಟ್ಟ ಉತ್ತರಿಸಲಿಕ್ಕೆ ಸಾಧ್ಯ?

## ಹತ್ತಿರ ತಂದ ಹಗರಣ

ಅತುಲ್ ರಾವ್ ಹಾಗೂ ರಘುಪತಿ ಭಟ್ಟ ಬಾಲ್ಯ ಸ್ನೇಹಿತರು- ಹೌದೋ ಅಲ್ವೋ ಬೇರೆ ವಿಷಯ. ಆದರೆ ಒಂದಂತೂ ನಿಜ. ಭಟ್ಟನಿಗೆ ಅತುಲ್ ಗಳಸ್ಯ-ಕಂಠಸ್ಯ ಸ್ನೇಹಿತನಾದುದು ಕೆಲವು ವರ್ಷಗಳ ಹಿಂದೆ.

ಕಾಂಗ್ರೆಸ್ ಆಡಳಿತದಲ್ಲಿದ್ದ ಜಿಲ್ಲಾ ಪಂಚಾಯತ್‌ನ ಹಗರಣವೊಂದನ್ನು ರಘುಪತಿ ಭಟ್ ಹೊರಹಾಕಿದ್ದರು. ಇದಕ್ಕೆ ಭಟ್ಟರಿಗೆ ಬೇಕಾದ ಮಾಹಿತಿ ಮತ್ತು ಕೆಲವು ಮಹತ್ವದ ಕಡತಗಳ ಜೆರಾಕ್ಸ್ ಪ್ರತಿಗಳನ್ನು ಕೊಟ್ಟವರು ಇದೇ ಅತುಲ್.

ಜಿ.ಪಂ. ಇಂಜಿನಿಯರಿಂಗ್ ಉಪವಿಭಾಗದಲ್ಲಿ ದ್ವಿತೀಯ ದರ್ಜೆ ಗುಮಾಸ್ತನಾಗಿದ್ದ ಅತುಲ್, ಒಳಗೆ ನಡೆಯುತ್ತಿದ್ದ ಅವ್ಯವಹಾರಗಳ ಬಗೆಗಿನ ಸಮಗ್ರ ಮಾಹಿತಿಗಳನ್ನು ಭಟ್ಟರಿಗೆ ನೀಡುತ್ತಿದ್ದರು.

ಇದನ್ನಿಟ್ಟುಕೊಂಡೇ ರಘುಪತಿ ಭಟ್ಟ ಜಿ.ಪಂ. ಕಾಂಗ್ರೆಸ್ ಆಡಳಿತದ ವಿರುದ್ಧ ಹೋರಾಟ ರೂಪಿಸಿದರು. ಮಿಂಚಿದರು. ಎಂಎಲ್‌ಎಯೂ ಆದರು.

ಹೀಗೆ ಭಟ್ಟನಿಗೆ ಹತ್ತಿರವಾದ ಅತುಲ್, ಭಟ್ಟನ ಮನೆಗೂ ಹತ್ತಿರವಾದ, ಭಟ್ಟನ ಪತ್ನಿಗೂ ಸಮೀಪವಾದ ಅಷ್ಟೇ.

## 25 ಕೋಟಿ ರೂ. ಒಡತಿ?

ಪದ್ಮಪ್ರಿಯಾ 25 ಕೋಟಿ ರೂ.ಗಳ ಚರ-ಸ್ಥಿರ ಆಸ್ತಿಯ ಒಡತಿಯಾಗಿದ್ದಳಂತೆ! ಹಲವೆಡೆ ಪದ್ಮಪ್ರಿಯಾ ಹೆಸರಲ್ಲಿ ಭೂಮಿ, ಕಟ್ಟಡಗಳು, ಉದ್ಯಮ ಸಂಸ್ಥೆಗಳು ಇವೆಯಂತೆ!

ರಘುಪತಿ ಭಟ್ಟ ಮಹಾಭ್ರಷ್ಟ ರಾಜಕಾರಣಿ. ಆದರೆ ಭ್ರಷ್ಟಾಚಾರದ ಮೂಲಕ ಸಂಗ್ರಹಿಸಿದ ಹಣವನ್ನು ಸಿಕ್ಕಿಬೀಳದಂತೆ ಜೋಪಾನವಾಗಿ ಶೇಖರಿಸಿಡುವುದರಲ್ಲಿಯೂ ಅಷ್ಟೇ ಬುದ್ಧಿವಂತ.


ಮಕ್ಕಳಾದ ರೋಹನ್ ಹಾಗೂ ರಾಹುಲ್ ಹೆಸರಲ್ಲಿ ಏನನ್ನೂ ಮಾಡಿಡದ ಭಟ್ಟ ಹೆಚ್ಚನೆಲ್ಲ ಆಸ್ತಿ-ಪಾಸ್ತಿಗಳನ್ನು ಪತ್ನಿ ಹಾಗೂ ಪರಮಾಪ್ತ ಮಿತ್ರರ ಹೆಸರಲ್ಲಿ ಸಿಕ್ಕಿ ಬೀಳದ ರೀತಿಯಲ್ಲಿ ಮಾಡಿಟ್ಟಿದ್ದಾನಂತೆ.

ಅತುಲ್ ರಾವ್ ಹೆಸರಲ್ಲಿರುವ ಹಣವೂ ಭಟ್ಟನದೇ. ಮಣಿಪಾಲದಲ್ಲಿ ಮೂರು ಅಪಾರ್ಟ್‌ಮೆಂಟ್, ದೆಹಲಿಯಲ್ಲೊಂದು ಅಪಾರ್ಟ್‌ಮೆಂಟ್, ಕರಂಬಳ್ಳಿಯಲ್ಲೊಂದು ಬಂಗಲೆ-ಹೀಗೆ ಕೆಲವು ಕೋಟಿಗಳಷ್ಟು ಬೆಲೆಯ ಸಂಪತ್ತು ಅತುಲ್ ಹೆಸರಲ್ಲಿದೆ.

ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು ಮುಂತಾದೆಡೆಗಳಲ್ಲಿ ಫೈನಾನ್ಸ್‌ಗಳು; ಮೈಸೂರಲ್ಲಿ ಮರಳು ತೆಗೆಯುವ ಉದ್ಯಮ, ಬೆಂಗಳೂರಲ್ಲೊಂದು ಇಂಡಸ್ಟ್ರಿ... ಹೀಗೆ ಈ ಪಟ್ಟಿ ಉದ್ದ ಬೆಳೆಯುತ್ತದೆ.

ಹೀಗೆ ಅಕ್ರಮವಾಗಿ ಗಳಿಸಿದ ಆಸ್ತಿ ಈಗ ಯಾರ ಪಾಲಾಗುತ್ತದೋ? ■ ಶ್ರೀರಾಮ ದಿವಾಣ

## ಬಳೆ ಒಡೆದು, ಸಿಂಧೂರ ಅಳಿಸಿಹಾಕಿದ್ದ ಪದ್ಮ



ಜೂನ್ 13ರಂದು ಕುಂಜಾರುಗಿರಿಯಲ್ಲಿ ಪತ್ತೆಯಾದ ಪದ್ಮಪ್ರಿಯಾರ ಕಾರಿನಲ್ಲಿ ಸಿಕ್ಕಿದ ಒಡೆದ ಗಾಜಿನ ಬಳೆ ಪದ್ಮಪ್ರಿಯಾಳದೇ ಆಗಿತ್ತು; ಅದನ್ನು ಒಡೆದು ಹಾಕಿದ್ದು ಸ್ವತಃ ಪದ್ಮಪ್ರಿಯಾರವರೇ ಎಂದು ಅತುಲ್‌ರಾವ್ ಪೊಲೀಸ್ ವಿಚಾರಣೆ ವೇಳೆ ಸ್ಪಷ್ಟಪಡಿಸಿದ್ದಾರೆ.

ಕಾರಿನಲ್ಲಿ ಕಂಡುಬಂದ ಕೆಂಪು ಕಲೆ ರಕ್ತದ ಕಲೆಯಲ್ಲ, ಅದು ಪದ್ಮಪ್ರಿಯಾರ ಹಣೆಯಲ್ಲಿದ್ದ ಸಿಂಧೂರದ ಕಲೆ. ಪದ್ಮಪ್ರಿಯಾರವರೇ ಸ್ವತಃ ಹಣೆಯಲ್ಲಿದ್ದ ಸಿಂಧೂರವನ್ನು ಅಳಿಸಿ ಹಾಕಿದ್ದಾರೆಂದು ಅತುಲ್ ಪೊಲೀಸರಿಗೆ ತಿಳಿಸಿದ್ದಾರೆ.

ಬ್ರಾಹ್ಮಣ ಸಂಪ್ರದಾಯದಲ್ಲಿ ಗೃಹಿಣಿಯರು ಕೈಗೆ ಹಾಕಿಕೊಳ್ಳುವ ಗಾಜಿನ ಬಳೆಗೆ ಮತ್ತು



ಹಣೆಗೆ ಹಾಕುವ ಸಿಂಧೂರಕ್ಕೆ ವಿಶೇಷವಾದ ಸ್ಥಾನಮಾನವಿದೆ, ಮಹತ್ವವಿದೆ, ಪವಿತ್ರತೆಯ ಭಾವನೆಯಿದೆ.

ಗಂಡನನ್ನು ಕಳೆದುಕೊಂಡ ಮಹಿಳೆ ಬಳೆ ಒಡೆದುಹಾಕುತ್ತಾಳೆ, ಸಿಂಧೂರವನ್ನು ಅಳಿಸಿಹಾಕುತ್ತಾಳೆ.

ಪದ್ಮಪ್ರಿಯಾ ಕುಂಜಾರುಗಿರಿಯಲ್ಲಿ ಮಾಡಿದ್ದೂ ಇದನ್ನೇ. ಗಂಡನಿದ್ದರೂ ಸಾಂಕೇತಿಕವಾಗಿ ಮತ್ತು ಮಾನಸಿಕವಾಗಿ "ಇನ್ನು ನನಗೆ ಗಂಡನಿಲ್ಲ" ಎಂಬಂತೆ ಪದ್ಮಪ್ರಿಯಾ ಕಾರು ಇಳಿಯುವ ಮೊದಲು ತನ್ನ ಹಣೆಯಲ್ಲಿದ್ದ ಸಿಂಧೂರವನ್ನು ಅಳಿಸಿಹಾಕಿದ್ದಾಳೆ. ಬಳೆಯನ್ನು ಒಡೆದಿದ್ದಾಳೆ.

ಹಿಂದೆ ಎರಡು ಬಾರಿ ಪದ್ಮಪ್ರಿಯಾ ಅತುಲ್ ಎದುರೇ ನಿದ್ದೆ ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದಳಂತೆ. ತನ್ನನ್ನು ದೆಹಲಿಗೆ ಕರೆದೊಯ್ಯಬೇಕು, ತನ್ನ ಸ್ವತಂತ್ರ ಜೀವನಕ್ಕೆ ಸಹಕರಿಸಲೇಬೇಕು ಎಂಬುದು ಪದ್ಮಪ್ರಿಯಾಳ ಒತ್ತಾಯಪೂರ್ವಕ ಬೇಡಿಕೆಯಾಗಿತ್ತೆಂದು ಅತುಲ್ ಹೇಳಿಕೆ ನೀಡಿದ್ದಾರೆ.

ಉಡುಪಿಯಿಂದಲೇ ಇಂಟರ್‌ನೆಟ್ ಮೂಲಕ ದೆಹಲಿಯ ದುರ್ಗಾ ಕಾಲ್ ಸೆಂಟರ್‌ನಲ್ಲಿ ಕೆಲಸಗಿಟ್ಟಿಸಿಕೊಂಡಿದ್ದಳಂತೆ ಪದ್ಮಪ್ರಿಯಾ.

ಸ್ವಾಭಿಮಾನಿಯಾಗಿದ್ದ ಪದ್ಮಪ್ರಿಯಾ ಅತುಲ್ ರಾವ್‌ನಿಂದ ಪಡೆದುಕೊಂಡ ಹಣವನ್ನು ಆಕೆ ಸಾಲ ಎಂದೇ ಪರಿಗಣಿಸಿದ್ದಳು. ಕಾಲ್‌ಸೆಂಟರ್‌ನಲ್ಲಿ ದುಡಿದು ಸಾಲ ತೀರಿಸುವುದಾಗಿಯೂ ಆಕೆ ಅತುಲ್‌ಗೆ ಆಶ್ವಾಸನೆ ನೀಡಿದ್ದಳಂತೆ.

ಗಂಡನ ನೆರಳೂ ನೋಡಲಾರೆ ಅಂದವಳ ಶವವನ್ನು ಮತ್ತೆ ಗಂಡನ ಮನೆಗೆ ಹೊತ್ತೊಯ್ದದ್ದು ಪದ್ಮಪ್ರಿಯಾಳಿಗೆ ಮಾಡಿದ ದ್ರೋಹವೆಂದೇ ದಾಖಲಿಸಬೇಕಾಗಿದೆ.


ರಘುಪತಿ ಭಟ್ಟರ ಫೈನಾನ್ಸ್ ದಂಧೆಯನ್ನು ದಾವಣಗೆರೆಯಲ್ಲಿ ನೋಡಿಕೊಳ್ಳುತ್ತಿರುವ ಪದ್ಮಪ್ರಿಯಾರ ಸಹೋದರ ಹಾಗೂ ಮುಂದಿನ ಬದುಕಿಗಾಗಿ ಭಟ್ಟ [illegible] ಮನೆಯವರು ಪದ್ಮರ ಸಾವಿನ ಬಗ್ಗೆ ಧ್ವನಿ ಎತ್ತುವ ಸಾಧ್ಯತೆ ಈಗ ಉಳಿದಿಲ್ಲ. ■

# ಬೆವೆರಾದಲ್ಲಿ ಹಸಿವು

## ಕತೆ

ಇಟಾಲಿಯನ್ ಮೂಲ: ಇಟಾಲೋ ಕಾಲ್ವಿನೋ
ಕನ್ನಡಕ್ಕೆ : ಗೌರಿ ಲಂಕೇಶ್

ಹೇಸರಗತ್ತೆಯ ಮೇಲಿಂದ ಜಾರಿ ಬೀಳದಂತೆ ತನ್ನ ಮಾಂಸವಿಲ್ಲದ ಪೃಷ್ಠದ ಮೇಲೆ ಆ ವ್ಯಕ್ತಿ ಕೂತಿದ್ದ. ಉಬ್ಬುತಗ್ಗುಗಳ ರಸ್ತೆಯಿಂದಾಗಿ ಆತನ ಬಡಮೂಳೆಗಳು ತಮ್ಮ ಕುಳಿಗಳಿಂದ ಕಳಚಿಕೊಂಡು ಬರುವಂತೆ ಜಗ್ಗುತ್ತಿದ್ದವು. ಆದರೆ ಆತ ತನ್ನ ಜೀವನವನ್ನು ಹೇಸರಗತ್ತೆಗಳೊಂದಿಗೆ ಕಳೆದಿದ್ದರಿಂದ ಆತನ ಯೋಚನೆಗಳೂ ಅವುಗಳಷ್ಟೇ ಅಲ್ಪವಾಗಿದ್ದವಲ್ಲದೆ ಅವುಗಳಂತೆ ಆತನೂ ವೈರಾಗಿಯಾಗಿದ್ದ. ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಅವನಿಗೆ ಕಷ್ಟವಾಗಿತ್ತು. ಈಗ ಇತರರಿಗೆ ಮಾತ್ರವಲ್ಲ ಇಡೀ ಊರಿಗೆ ಆತ ಆಹಾರ ತರಬೇಕಿತ್ತು.



1940 ರಲ್ಲಿ ಆದಂತೆ ಈ ಬಾರಿಯೂ ಸೈನ್ಯದ ಮುಂದಿನ ಸಾಲು ಊರಿನ ಹತ್ತಿರದಲ್ಲೇ ಬಂದು ನಿಂತಿತ್ತು. ಆದರೆ ಈ ಬಾರಿ ಯುದ್ಧ ನಿಂತಿರಲಿಲ್ಲ ಮಾತ್ರವಲ್ಲ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಗಳಾಗುವ ಸೂಚನೆಗಳೂ ಕಂಡುಬಂದಿರಲಿಲ್ಲ. 40 ರಲ್ಲಿ ತಮ್ಮ ಹರುಕು ಮುರುಕು ಬಟ್ಟೆಗಳನ್ನು, ಕೋಳಿಗಳನ್ನು ಗಾಡಿಯ ಮೇಲೆ ಹೇರಿ, ಮುಂದೊಂದು ಹೇಸರಗತ್ತೆ, ಹಿಂದೊಂದು ಕುರಿ ಕಟ್ಟಿಕೊಂಡು ಹೋಗಿದ್ದಂತೆ ಈ ಬಾರಿಯೂ ಹೋಗುವುದಕ್ಕೆ ಜನರಿಗೆ ಇಷ್ಟವಿರಲಿಲ್ಲ. ಯಾಕೆಂದರೆ ಅಂದು ಅವರು ತಮ್ಮ ಊರಿಗೆ ವಾಪಸ್ಸಾದಾಗ ಅವರ ಮನೆಗಳು ಲೂಟಿ ಆಗಿದ್ದವು; ಅಡುಗೆ ಪಾತ್ರೆಗಳಲ್ಲಿ ಮನುಷ್ಯರ ಹೇಲಿತ್ತು. ಅವರದೇ ಇಟಲಿ ದೇಶದ ಸೈನಿಕರಿಗೆ ತಾವು ನಾಶ ಮಾಡುತ್ತಿರುವುದು ಮಿತ್ರರನ್ನೊ ಅಥವಾ ಶತ್ರುಗಳನ್ನೊ ಎಂದು ಭೇದ ಮಾಡುವುದೂ ಬೇಕಿರಲಿಲ್ಲ. ಆದ್ದರಿಂದ, ಅವರೆಲ್ಲ ಅಲ್ಲೇ ಉಳಿದುಕೊಂಡರು. ಹಗಲೂರಾತ್ರಿ ಒಂದೆಡೆಯಿಂದ ಫ್ರೆಂಚರ ಸಿಡಿಗುಂಡುಗಳು ಅವರ ಮನೆಗಳ ಮೇಲೆ ಬೀಳುತ್ತಿದ್ದರೂ, ಇನ್ನೊಂದೆಡೆಯಿಂದ ಜರ್ಮನ್ನರ ಬಾಂಬುಗಳು ಅವರ ತಲೆಗಳ ಮೇಲೆಯೇ ಸೀಟಿ ಹೊಡೆಯುತ್ತಾ ಹಾರುತ್ತಿದ್ದರೂ...

"ಇವತ್ತಲ್ಲ ನಾಳೆ ಸೈನ್ಯ ಮುಂದಕ್ಕೆ ಹೋಗಲೇಬೇಕು" ಎಂದು ಒಬ್ಬರಿಗೊಬ್ಬರು ಹೇಳುತ್ತಾ ಎಂಟು ತಿಂಗಳುಗಳನ್ನೇ ಕಳೆದಿದ್ದರು. "ಆ ಪುಣ್ಯಾತ್ಮ ಒಕ್ಕೂಟದವರು ಒಂದಿಷ್ಟು ಧೈರ್ಯ ಮಾಡಿದರೆ ಸಾಕು" ಎಂದೆನ್ನುತ್ತಿದ್ದರು.

ಬೆವೆರಾದ ಕಣಿವೆಯ ತುಂಬ ಜನರಿದ್ದರು. ಅಲ್ಲಿ ರೈತರಿದ್ದರು, ವೆಂಟಿಮಿಗ್ಲಿಯಾದಿಂದ ಬಂದಿದ್ದ ನಿರಾಶ್ರಿತರಿದ್ದರು. ಆದರೆ ಅವರ್‍ಯಾರಿಗೂ ತಿನ್ನಲು ಏನೂ ಇರಲಿಲ್ಲ. ಸಂಗ್ರಹಿಸಿಟ್ಟಿದ್ದ ಆಹಾರವೆಲ್ಲ ಮುಗಿದು ಹತ್ತಿರದ ನಗರದಿಂದ ಹಿಟ್ಟನ್ನು, ಬ್ರೆಡ್ ಅನ್ನು ತರಬೇಕಿತ್ತು. ಆದರೆ ನಗರಕ್ಕೆ ಹೋಗುವ ರಸ್ತೆ ಪ್ರತಿಕ್ಷಣವೂ ಬಾಂಬ್ ದಾಳಿಗೆ ಗುರಿಯಾಗಿತ್ತು.

ಅಷ್ಟೊತ್ತಿಗಾಗಲೇ ಅವರೆಲ್ಲ ಮನೆಗಳ ಬದಲಿಗೆ ಅವುಗಳ ರಂಧ್ರಗಳಲ್ಲಿ ಬದುಕುತ್ತಿದ್ದರು. ಮುಂದೇನು ಮಾಡುವುದೆಂದು ನಿರ್ಧರಿಸಲು ಒಂದು ದಿನ ಹಳ್ಳಿಯ ಪುರುಷರೆಲ್ಲಾ ಗುಹೆಯೊಂದರಲ್ಲಿ ಸಭೆ ಸೇರಿದರು.

ಸ್ವಾತಂತ್ರ್ಯ ಸಮಿತಿಯ ಸದಸ್ಯನೊಬ್ಬ "ಈಗ ನಾವೇನು ಮಾಡಬೇಕೆಂದರೆ, ಪ್ರತಿ ದಿನ ಸರದಿ ಮೇಲೆ ಒಬ್ಬೊಬ್ಬರಾಗಿ ನಗರಕ್ಕೆ ಹೋಗಿ ಬ್ರೆಡ್ ತರಬೇಕು" ಎಂದು ಹೇಳಿದ.

"ಹೌದೌದು" ಎಂದ ಇನ್ನೊಬ್ಬ "ಹಾಗೆ ಮಾಡಿದಾಗ ಒಬ್ಬೊಬ್ಬರಾಗಿ ರಸ್ತೆ ಮಧ್ಯೆಯೇ ಚಿಂದಿಯಾಗುತ್ತೇವೆ."

"ಇಲ್ಲಾ ಅಂದ್ರೆ ಜರ್ಮನ್ನರು ಬಂದು ನಮ್ಮನ್ನೆಲ್ಲ ಒಬ್ಬೊಬ್ಬರಾಗಿ ಜರ್ಮನಿಗೆ ಸಾಗಿಸುತ್ತಾರೆ" ಎಂದ ಮತ್ತೊಬ್ಬ.

"ಅಲ್ಲಾ, ಸಾಮಾನನ್ನು ತೆಗೆದುಕೊಂಡು ಬರೋದಕ್ಕೆ ಒಂದು ಪ್ರಾಣಿ ಬೇಕಲ್ಲ, ಯಾರು ಅವರ ಕತ್ತೆ ಕೊಡ್ತಾರೆ? ಯಾರೂ ತಮ್ಮ ಪ್ರಾಣಿಯನ್ನು ಅಂತಹ ಅಪಾಯಕ್ಕೆ ದೂಡಲು ಒಪ್ಪೊಲ್ಲ. ಯಾಕೆಂದ್ರೆ, ಆ ರಸ್ತೆಯಲ್ಲಿ ಹೋಗುವ ಯಾರೂ ವಾಪಸ್ಸು ಬರಲ್ಲ, ಆಗ ಕತ್ತೇನೂ ಇಲ್ಲ, ಬ್ರೆಡ್ಡೂ ಸಿಗಲ್ಲ" ಎಂದ ಮಗದೊಬ್ಬ.

ಇದಕ್ಕೆ ಕಾರಣವೂ ಇತ್ತು. ಈಗಾಗಲೇ ಊರಿನಲ್ಲಿದ್ದ ಕತ್ತೆ-ಕುರಿಗಳನ್ನೆಲ್ಲ ಸೈನ್ಯ ತನ್ನ ವಶಕ್ಕೆ ತೆಗೆದುಕೊಂಡಿತ್ತು. ಸೈನ್ಯದ ಕಣ್ಣು ತಪ್ಪಿಸಿದ್ದವರು ತಮ್ಮ ಪ್ರಾಣಿಗಳನ್ನು ಬಚ್ಚಿಟ್ಟಿದ್ದರು.

ಸ್ವಾತಂತ್ರ್ಯ ಸಮಿತಿಯ ಸದಸ್ಯ "ಆದರೆ ಬ್ರೆಡ್ ಇಲ್ಲದೆ ನಾವೆಲ್ಲ ಬದುಕಿರೋದು ಹೇಗೆ? ನಗರಕ್ಕೆ ಒಂದು ಹೇಸರಗತ್ತೆಯನ್ನು ತೆಗೆದುಕೊಂಡು ಹೋಗೋದಕ್ಕೆ ಯಾರಾದರೂ ಸಿದ್ಧರಿದ್ದೀರಾ? ಅಲ್ಲಿನ ಫ್ಯಾಸಿಸ್ಟರು ನನಗಾಗಿ ಹುಡುಕುತ್ತಿದ್ದಾರೆ, ಇಲ್ಲಾಂದ್ರೆ ನಾನೇ ಹೋಗುತ್ತಿದ್ದೆ" ಎಂದು ಹೇಳಿ ತನ್ನ ಸುತ್ತಲೂ ನೋಡಿದ. ಭಾವಶೂನ್ಯ ಕಂಗಳನ್ನು ಹೊತ್ತಿದ್ದ ಜನ ಸುಮ್ಮನೇ ಕೂತಿದ್ದರು.

ಆಗ ಒಂದು ತುದಿಯಲ್ಲಿ ಕೂತಿದ್ದ ಮುದಿ ಬಿಸ್ಮಾ; ತನಗೇನೂ ಅರ್ಥವಾಗುತ್ತಿಲ್ಲವೆಂಬಂತೆ ತನ್ನ ಬಾಯಿ ತೆರೆದು ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದ ಬಿಸ್ಮಾ ಎದ್ದು ಗುಹೆಯಿಂದ ಹೊರನಡೆದ. ಆತ ಮುದುಕನಾಗಿದ್ದರಿಂದ, ಆಗಿಂದಾಗ್ಗೆ ಮೂತ್ರ ವಿಸರ್ಜಿಸುತ್ತಿದ್ದರಿಂದ ಆ ಕಾರ್ಯಕ್ಕೆಂದೇ ಆತ ಹೊರಟಿರಬೇಕೆಂದು ಅಲ್ಲಿದ್ದವರೆಲ್ಲ ಭಾವಿಸಿದರು.

"ಹುಷಾರು ಬಿಸ್ಮಾ ಅವರಿಗೆ ಕಾಣಿಸಿಕೊಳ್ಳಬೇಡ" ಎಂದು ಕೆಲವರು ಆತನನ್ನು ಎಚ್ಚರಿಸಿದರು.

ಆದರೆ ಆತ ಹಿಂದಿರುಗಿಯೂ ನೋಡಲಿಲ್ಲ.

"ಅವನು ಈಗ ನಡೆಯುತ್ತಿರುವುದರ ಯುದ್ಧದ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ, ಕಿವುಡನಾದ ಆತನಿಗೆ ಸುತ್ತಲೂ ಬಾಂಬ್‌ಗಳು ಸ್ಫೋಟಗೊಳ್ಳುತ್ತಿರುವುದೂ ಗೊತ್ತಾಗುತ್ತಿಲ್ಲ" ಎಂದು ಯಾರೋ ಒಬ್ಬರು ಹೇಳಿದರು.

ಬಿಸ್ಮಾನಿಗೆ ಎಂಭತ್ತು ವರ್ಷಗಳಿಗಿಂತಲೂ ಹೆಚ್ಚು ವಯಸ್ಸಾಗಿತ್ತಲ್ಲದೆ, ಆತ ಜೀವನದುದ್ದಕ್ಕೂ ಕಾಡಿನಿಂದ ಅಂಗಡಿಗಳಿಗೆ ಸೌದೆಯ ಕಟ್ಟುಗಳನ್ನು ಸಾಗಿಸಿ ಆತನ ಬೆನ್ನು ಮೂಳೆ ಶಾಶ್ವತವಾಗಿ ಬಗ್ಗಿ ಹೋಗಿತ್ತು. ಆತನನ್ನು ಎಲ್ಲರೂ ಬಿಸ್ಮಾ ಎಂದು ಕರೆಯುವುದಕ್ಕೆ ಕಾರಣ ಹಿಂದೊಮ್ಮೆ ಬಿಸ್ಮಾರ್ಕನ ಮೀಸೆಗಳನ್ನು ಹೋಲುತ್ತಿದ್ದ ಮೀಸೆ ಈತನಿಗೂ ಇದ್ದದ್ದು. ಈಗ ಅದು ಬಡಕಲಾಗಿದ್ದು ಆತನ ದೇಹದ ಇತರೆ ಭಾಗಗಳಂತೆ ಆತನ ಮೀಸೆಯಲ್ಲಿ ಉಳಿದಿದ್ದ ಹಲವೇ ಬಿಳಿ ಕೂದಲೂ ಕೂಡ ಯಾವ ಕ್ಷಣದಲ್ಲಾದರೂ ಉದುರಿ ಬೀಳುವಂತಿವೆ.

ಆದರೆ ಆತನ ದೇಹದ ಯಾವ ಭಾಗವೂ ಉದುರಿ ಬೀಳಲಿಲ್ಲ. ಬದಲಾಗಿ ತುಯ್ಯುವ ತಲೆಯೊಂದಿಗೆ ಆತ ತನ್ನ ದೇಹವನ್ನು ಜಗ್ಗುತ್ತಾ ಮುಂದೆ ಸಾಗುತ್ತಿದ್ದ. ಕಿವುಡರ ಮುಖದಲ್ಲಿ ಸಾಮಾನ್ಯವಾಗಿರುವ ಶೂನ್ಯ ಭಾವನೆ ಆತನ ಮುಖದಲ್ಲೂ ಕಾಣಿಸುತ್ತಿತ್ತು.

ಕೆಲ ಹೊತ್ತಿನ ನಂತರ "ಐ" ಎಂದು ಕರೆಯುತ್ತಾ ಬಿಸ್ಮಾ ಗುಹೆಯ ಮುಂದೆ ಪ್ರತ್ಯಕ್ಷನಾದ.

ಎಲ್ಲರೂ ನೋಡುತ್ತಾರೆ.... ಆತ ಸಬರವನ್ನು ಹೊತ್ತಿದ್ದ ತನ್ನ ಹೇಸರಗತ್ತೆಯನ್ನು ಎಳೆಯುತ್ತಾ ಬಂದಿದ್ದಾನೆ. ಬಿಸ್ಮಾನ ಹೇಸರಗತ್ತೆಗೆ ಅದರ ಮಾಲೀಕನಿಗಿಂತ ಹೆಚ್ಚು ವಯಸ್ಸಾದಂತೆ ಕಾಣಿಸುತ್ತಿತ್ತು. ಅದರ ಕತ್ತು ಜಾರಿ ಬಿದ್ದು ನೆಲಕ್ಕೆ ತಾಗುತ್ತಿತ್ತು. ಅದರ ಚಲನವಲನ ಎಷ್ಟು ಮುಂಜಾಗ್ರತೆಯಿಂದ ಕೂಡಿತ್ತೆಂದರೆ ಅದು ಒಂದು ತಪ್ಪು ಹೆಜ್ಜೆ ಇಟ್ಟರೂ ಅದರ ಚರ್ಮದ ಮೇಲೆ ಕೀವುಕಟ್ಟಿ ಹುಳುಗಳಿಂದ ತುಂಬಿದ್ದ ವ್ರಣಗಳಿಂದ ಅದರ ದೇಹದಲ್ಲಿನ ಮೂಳೆಗಳು ಕಿತ್ತು ಬರಬಹುದು ಎನಿಸುತ್ತಿತ್ತು.

"ಈ ಹೇಸರಗತ್ತೆಯೊಂದಿಗೆ ಎಲ್ಲಿಗೆ ಹೊರಟೆ ಬಿಸ್ಮಾ?" ಎಂದು ಕೇಳಿದರು.

ತನ್ನ ತುಯ್ಯುವ ತಲೆ, ತೆರೆದ ಬಾಯಿಯೊಂದಿಗೆ ಬಿಸ್ಮಾ ಸುಮ್ಮನೇ ನಿಂತ. ಅವನಿಗೆ ಪ್ರಶ್ನೆ ಕೇಳಿಸಿರಲಿಲ್ಲ.

"ಚೀಲಗಳನ್ನು ಕೊಡಿ" ಎಂದ ಬಿಸ್ಮಾ.

"ಅಯ್ಯೋ, ನೀನು ಮತ್ತು ನಿನ್ನ ಮುದಿ ಮೂಳೆಗಳ ಈ ಚೀಲ, ನೀವಿಬ್ಬರೂ ಅದೆಷ್ಟು ದೂರ ಹೋಗ್ತೀರಿ ಅಂದುಕೊಂಡಿದ್ದೀಯಾ?" ಎಂದು ಕೇಳಿದರು ಜನ.

"ಎಷ್ಟು ಕೇಜಿ ತರಬೇಕು?" ಎಂದ ಬಿಸ್ಮಾ "ಆ, ಎಷ್ಟು ಕೇಜಿ?"

ಆತನಿಗೆ ಚೀಲಗಳನ್ನು ಕೊಟ್ಟು, ಎಷ್ಟು ಕೇಜಿ ಆಹಾರ ಬೇಕೆಂದು ಬೆರಳಿನಲ್ಲಿ ಸನ್ನೆ ಮಾಡಿ ಮನವರಿಕೆ ಮಾಡಿದ ನಂತರ ಆತ ಅಲ್ಲಿಂದ ಹೊರಟ. ಪ್ರತಿ ಬಾರಿ ಸಿಡಿಮದ್ದೊಂದು ಸೀಟಿ ಹೊಡೆಯುತ್ತಾ ಹಾರಿ ಬಂದಾಗ ಅವರೆಲ್ಲ ಗುಹೆಯ ಹೊಸ್ತಿಲಲ್ಲೇ ಕೂತು ರಸ್ತೆಯ ಮೇಲೆ ದೂರಕ್ಕೆ ಸಾಗುತ್ತಿದ್ದ ಬಾಗಿದ್ದ ಆ ದೇಹದತ್ತ ನೋಡುತ್ತಿದ್ದರು. ತುಯ್ದಾಡುತ್ತಿದ್ದ ಹೇಸರಗತ್ತೆ ಮತ್ತು ಅದರ ಸಬರದ ಮೇಲೆ ಕೂತಿದ್ದ ಮನುಷ್ಯ ಇಬ್ಬರೂ ಯಾವ ಕ್ಷಣದಲ್ಲಾದರೂ ಕುಸಿದು ಬೀಳಬಹುದು ಎಂದೆನಿಸುತ್ತಿತ್ತು. ಅವರಿಬ್ಬರ ಮುಂದೆ ಸ್ಫೋಟಗೊಳ್ಳುತ್ತಿದ್ದ ಸಿಡಿಮದ್ದುಗಳು ಧೂಳನ್ನು ಎಬ್ಬಿಸುತ್ತಾ ಹೇಸರಗತ್ತೆ ಮುಂದೆ ಸಾಗುವುದೇ ಕಷ್ಟವಾಗುತ್ತಿತ್ತು. ಆಕಸ್ಮಾತ್ ಸಿಡಿಮದ್ದುಗಳು ಅವರ ಹಿಂದೆ ಬಿದ್ದರೆ ಬಿಸ್ಮಾ ಹಿಂದಿರುಗಿಯೂ ನೋಡುತ್ತಿರಲಿಲ್ಲ. ಪ್ರತಿ ಬಾಂಬ್, ಪ್ರತಿ ಸೀಟಿ ಕೇಳಿದಾಗ ಗುಹೆಯಲ್ಲಿದ್ದವರೆಲ್ಲ ತಮ್ಮ ಉಸಿರನ್ನು ಬಿಗಿಯಾಗಿ ಹಿಡಿಯುತ್ತಿದ್ದರು. "ಇದು ಅವನನ್ನು ಹೊಡದೇ ಹೊಡೆಯುತ್ತೆ" ಎನ್ನುತ್ತಿದ್ದರು. ಅವರೆಲ್ಲ ನೋಡುನೋಡುತ್ತಿದ್ದಂತೆ ಧೂಳಿನ ಮೋಡದಲ್ಲಿ ಬಿಸ್ಮಾ ಕಣ್ಮರೆಯಾದ.

ಅವರೆಲ್ಲ ಸುಮ್ಮನಾದರು. ಧೂಳು ತಿಳಿಯಾದ ನಂತರ ಆತನ ಸುಳಿವೂ ಇಲ್ಲದ ಖಾಲಿ ರಸ್ತೆ ಇರುತ್ತದೆಂದೇ ಅವರೆಲ್ಲ ಭಾವಿಸಿದರು. ಆದರೆ ಆತ ಮತ್ತಾತನ ಹೇಸರಗತ್ತೆ, ಇಬ್ಬರೂ ಭೂತಗಳಂತೆ ಮತ್ತೆ ಕಾಣಿಸಿಕೊಂಡರು; ಕುಂಟುತ್ತಾ ನಿಧಾನವಾಗಿ ಮುಂದೆ ಸಾಗುತ್ತಾ ರಸ್ತೆಯ ಕೊನೆಯಲ್ಲಿದ್ದ ತಿರುವನ್ನು ತೆಗೆದುಕೊಂಡ ನಂತರ ಅವರು ನಾಪತ್ತೆಯಾದರು. "ಅವನು ವಾಪಸ್ಸು ಬರಲ್ಲ" ಎಂದುಕೊಂಡು ಅವರೆಲ್ಲ ಆತ ಹೋಗಿದ್ದ ದಿಕ್ಕಿಗೆ ತಮ್ಮ ಬೆನ್ನು ತಿರುಗಿಸಿದರು.

ಆದರೆ ಆ ಕಲ್ಲುರಸ್ತೆಯ ಮೇಲೆ ಬಿಸ್ಮಾ ಮುಂದೆ ಸಾಗಿದ್ದ. ಕಿಡಿಗಲ್ಲುಗಳಿದ್ದ, ಹೊಸ ರಂಧ್ರಗಳು ಬಾಯಿ ತೆರೆದಿದ್ದ ರಸ್ತೆಯ ಮೇಲೆ ತನ್ನ ಗೊರಸುಗಳನ್ನಿಡುತ್ತಾ ಹೇಸರಗತ್ತೆ ಸಾಗಿತ್ತು. ಸಬರದಡಿ ಇದ್ದ ವ್ರಣಗಳಿಂದಾಗಿ ಅದರ ಚರ್ಮ ಬಿಗಿಯಾಗಿ ಎಳೆದಂತಿತ್ತು. ಸುತ್ತಲೂ ಸಿಡಿಯುತ್ತಿದ್ದ ಸ್ಫೋಟಗಳು ಅದರ ಮೇಲೆ ಯಾವ ಪ್ರಭಾವವನ್ನೂ ಬೀರುತ್ತಿರಲಿಲ್ಲ. ತನ್ನ ಜೀವನದುದ್ದಕ್ಕೂ ಅದು ಎಷ್ಟು ನೋವನ್ನು ಅನುಭವಿಸಿತ್ತೆಂದರೆ ಅದಕ್ಕೆ ಯಾವುದರ ಬಗ್ಗೆಯೂ ಗಮನ ಇಲ್ಲದಂತಾಗಿತ್ತು. ಮುಸುಡಿಯನ್ನು ಬಗ್ಗಿಸಿ, ಅದು ನಡೆಯುತ್ತಿದ್ದರೂ ಕಣ್ಮಿಟುಕುವ ಮೂಲಕ ಅದಕ್ಕೆ ಹೊಸದೇನೇನೋ ಕಾಣಿಸುತ್ತಿದ್ದವು. ಸ್ಫೋಟಗಳಲ್ಲಿ ಛಿದ್ರಗೊಂಡು, ಕಿಡಿಗಲ್ಲುಗಳ ಮೇಲೆ ತಮ್ಮ ದೇಹದಲ್ಲಿನ ಚಿಗುಟು ದ್ರವವನ್ನು ಚಿಮ್ಮಿಸಿ ಸತ್ತಿದ್ದ ಬಸವನಹುಳುಗಳು; ಛಿದ್ರಗೊಂಡಿದ್ದ ಹುತ್ತಗಳಿಂದ ತಮ್ಮ ಮೊಟ್ಟೆಗಳನ್ನು ಎತ್ತಿಕೊಂಡು ದಿಕ್ಕಾಪಾಲಾಗಿದ್ದ ಇರುವೆಗಳು; ಕಿತ್ತುಹೋಗಿದ್ದ ಗಿಡಗುಂಟೆಗಳ ಅಡಿಯಲ್ಲಿ ವಿಚಿತ್ರವಾಗಿ ಕಾಣಿಸುತ್ತಿದ್ದ ಬೇರುಗಳು.

ಹೇಸರಗತ್ತೆಯ ಮೇಲಿಂದ ಜಾರಿ ಬೀಳದಂತೆ ತನ್ನ ಮಾಂಸವಿಲ್ಲದ ಪೃಷ್ಠದ ಮೇಲೆ ಆ ವ್ಯಕ್ತಿ ಕೂತಿದ್ದ. ಉಬ್ಬುತಗ್ಗುಗಳ ರಸ್ತೆಯಿಂದಾಗಿ ಆತನ ಬಡಮೂಳೆಗಳು ತಮ್ಮ ಕುಳಿಗಳಿಂದ ಕಳಚಿಕೊಂಡು ಬರುವಂತೆ ಜಗ್ಗುತ್ತಿದ್ದವು. ಆದರೆ ಆತ ತನ್ನ ಜೀವನವನ್ನು ಹೇಸರಗತ್ತೆಗಳೊಂದಿಗೆ ಕಳೆದಿದ್ದರಿಂದ ಆತನ ಯೋಚನೆಗಳೂ ಅವುಗಳಷ್ಟೇ ಅಲ್ಪವಾಗಿದ್ದವಲ್ಲದೆ ಅವುಗಳಂತೆ ಆತನೂ ವೈರಾಗಿಯಾಗಿದ್ದ. ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಅವನಿಗೆ ಕಷ್ಟವಾಗಿತ್ತು. ಈಗ ಇತರರಿಗೆ ಮಾತ್ರವಲ್ಲ ಇಡೀ ಊರಿಗೆ ಆತ ಆಹಾರ ತರಬೇಕಿತ್ತು. ಈ ಜಗತ್ತು, ಆತನನ್ನು ಸುತ್ತುವರಿದಿದ್ದ ನಿಶ್ಶಬ್ದ ಜಗತ್ತು, ಆತನೊಂದಿಗೆ ಮಾತನಾಡಲು ಯತ್ನಿಸುತ್ತಿರುವಂತಿತ್ತು. ನಿದ್ರಿಸುತ್ತಿದ್ದ ಆತನ ಕಿವಿಪೊರೆಯನ್ನೂ ತಾಕುತ್ತಿದ್ದ ಕಂಗೆಟ್ಟ ಸ್ಫೋಟಗಳ ಮೂಲಕ; ಭೂಮಿಯನ್ನು ಕಂಪಿಸುತ್ತಿದ್ದ ವಿಚಿತ್ರ ಕ್ಷೋಭೆಗಳ ಮೂಲಕ. ಬಂಡೆಗಳು ಪುಡಿಪುಡಿಯಾಗುತ್ತಿರುವುದು, ಗದ್ದೆಗಳಿಂದ ಧೂಳಿನ ಮೋಡ ಏಳುತ್ತಿರುವುದು, ಕಲ್ಲುಚಿಪ್ಪುಗಳು ಹಾರುತ್ತಿರುವುದು, ದೂರದ ಬೆಟ್ಟಗಳ ಮೇಲೆ ಕೆಂಪು ಬೆಳಕು ಆಗಾಗ್ಗೆ ಹೊಳೆದು ಮಾಯವಾಗುವುದು, ಜಗತ್ತು ತನ್ನ ಹಳೆ ಮುಖವನ್ನು ಬದಲಾಯಿಸುತ್ತಾ ತನ್ನ ಆಳದಲ್ಲಿರುವ ಭೂಮಿ ಮತ್ತು ಬೇರುಗಳನ್ನು ತೋರಿಸುತ್ತಾ... ಇವೆಲ್ಲ ಆತನಿಗೆ ಕಾಣಿಸುತ್ತಿದ್ದವು. ಮತ್ತು ಈ ನಿಶ್ಶಬ್ದ ವೃದ್ಧಾಪ್ಯದ ಈ ಕಠೋರ ನಿಶ್ಶಬ್ದ ಕೂಡ ದೂರದ ಈ ಸದ್ದುಗಳಿಂದ ಕದಡಿದಂತೆ ಭಾಸವಾಗುತ್ತಿತ್ತು.

ಹೇಸರಗತ್ತೆಯ ಕಾಲಿನ ಅಡಿ ಇದ್ದ ರಸ್ತೆ ದೊಡ್ಡ ಕಿಡಿಗಳನ್ನೇ ಎಬ್ಬಿಸುತ್ತಿತ್ತು. ಮಣ್ಣು ಅದರ ಮೂಗು ಮತ್ತು ಗಂಟಲನ್ನು ತುಂಬಿತ್ತು. ಒಂದು ಪಕ್ಕದಿಂದ ಕಲ್ಲು ಚಿಪ್ಪುಗಳು ಅವರಿಬ್ಬರ ಮೇಲೆ ಮಳೆಗರೆಯುತ್ತಿರುವಾಗಲೇ ಆತನ ತಲೆಯ ಮೇಲೆ ದೊಡ್ಡ ಆಲಿವ್ ಮರದ ರಂಬೆಗಳು ಗಿರ್ರನೆ ಸುತ್ತುತ್ತಾ ಹಾರಿಹೋಯಿತು. ಆದರೆ ಆತನ ಹೇಸರಗತ್ತೆ ಕುಸಿಯುವವರೆಗೂ ಆತ ಕುಸಿಯುವಂತಿರಲಿಲ್ಲ. ಆ ಹೇಸರಗತ್ತೆಯೋ, ಹರಿದು ಹೋಗಿದ್ದ ಭೂಮಿಯ ಮೇಲೆ ತನ್ನ ಮೊಣಕಾಲನ್ನು ಊರದಂತೆ ತನ್ನ ಕಾಲುಗಳನ್ನು ಬೇರುಬಿಟ್ಟಂತಿತ್ತು.

ಸಂಜೆಯಾದಾಗ ಬೆವೆರಾದಲ್ಲಿ ಯಾರೋ ಕೂಗಿದರು: "ಬಿಸ್ಮಾ ವಾಪಸ್ಸು ಬಂದಿದ್ದಾನೆ! ಬಿಸ್ಮಾ ವಾಪಸ್ಸು ಬಂದಿದ್ದಾನೆ!"

ಆಗ ಎಲ್ಲಾ ಗಂಡಸರು, ಮಹಿಳೆಯರು ಮತ್ತು ಮಕ್ಕಳು ತಮ್ಮ ಮನೆ ಮತ್ತು ಗುಹೆಗಳಿಂದ ಹೊರಬಂದು ನೋಡಿದಾಗ ಅವರಿಗೆ ಕಂಡದ್ದು ರಸ್ತೆಯ ತಿರುವಿನಲ್ಲಿ, ತನ್ನ ಬೆನ್ನ ಮೇಲಿದ್ದ ಚೀಲಗಳಿಂದಾಗಿ ಇನ್ನಷ್ಟು ಕುಗ್ಗಿದ್ದ ಹೇಸರಗತ್ತೆ; ಅದರ ಹಿಂದೆಯೇ ನಡೆದುಕೊಂಡು ಬರುತ್ತಿದ್ದ ಬಿಸ್ಮಾ. ಆತ ಹೇಸರಗತ್ತೆಯ ಬಾಲ ಹಿಡಿದಿದ್ದನಾದರೂ

ತ ಅದನ್ನು ಮೂಕುತ್ತಿದ್ದಾನೆಯೋ ಅಥವಾ ಅದು ವನನ್ನು ಎಳೆಯುತ್ತಿದೆಯೋ ಎಂಬುದು ಅವರಿಗೆ ಷ್ಟವಾಗಿ ಕಾಣಿಸುತ್ತಿರಲಿಲ್ಲ. ಆಹಾರದೊಂದಿಗೆ ಬಿಸ್ಮಾ ಂದಿರುಗಿದಾಗ ಇಡೀ ಕಣಿವೆಯ ಜನ ಆತನನ್ನು ಷ್ಮೀಯವಾಗಿ ಸ್ವಾಗತಿಸಿದರು. ಸ್ವಾತಂತ್ರ್ಯ ಸಮಿತಿಯ ದ್ದ ದೊಡ್ಡ ಗುಹೆಯಲ್ಲಿ ಸೇರಿದ್ದ ಎಲ್ಲರಿಗೂ ತಲಾ ಂದರಂತೆ ಬ್ರೆಡ್ ಅನ್ನು ಹಂಚಿದ. ಆತನ ಪಕ್ಕದಲ್ಲೇ ಡ್ ತಿನ್ನುತ್ತಾ ಎಲ್ಲರನ್ನು ನೋಡುತ್ತಾ ಬಿಸ್ಮಾ ನಿಂತಿದ್ದ.

ಮರುದಿನವೂ ಬಿಸ್ಮಾ ಮತ್ತೆ ನಗರಕ್ಕೆ ಹೋದ. ರ್ಮನ್ನರಿಗೆ ಖಂಡಿತವಾಗಿಯೂ ಬೇಡವಾಗಿದ್ದ ಏಕೈಕ ಹೇಸರಗತ್ತೆ ಬಿಸ್ಮಾನದ್ದಾಗಿತ್ತು. ಪ್ರತಿ ದಿನ ಆಹಾರ ದಲೆಂದು ನಗರಕ್ಕೆ ಹೋಗುತ್ತಿದ್ದ ಬಿಸ್ಮಾ, ಪ್ರತಿ ದಿನ ಂಬ್ ಸ್ಫೋಟಗಳಲ್ಲಿ ಗಾಯಗೊಳ್ಳದೆ ಹಿಂದಿರುಗುತ್ತಿದ್ದ. ತ ಸೈತಾನನೊಂದಿಗೆ ಯಾವುದೋ ಒಪ್ಪಂದ ಮಾಡಿಕೊಂಡಿರಬೇಕು ಎಂದು ಜನ ಮಾತಾಡಿ ಕೊಂಡರು.

ಆಗ ಬೆವೆರಾ ನದಿಯ ಎಡದಂಡೆಯಿಂದ ಹೊರಟ ರ್ಮನ್ನರು ಅಲ್ಲಿದ್ದ ಎರಡು ಸೇತುವೆಗಳನ್ನು ಮತ್ತು ಸ್ತೆಯ ಒಂದು ಭಾಗವನ್ನು ಧ್ವಂಸ ಮಾಡಿದರಲ್ಲದೆ, ಸ್ತೆಯ ಉಳಿದ ಭಾಗದಲ್ಲಿ ನೆಲಸಿಡಿಗಳನ್ನು ಇಟ್ಟು ಹೋದರು. ನಲವತ್ತೆಂಟು ಗಂಟೆಗಳಲ್ಲಿ ಹಳ್ಳಿಯಲ್ಲಿದ್ದ ಜನರೆಲ್ಲ ಇಡೀ ಪ್ರದೇಶದಿಂದ ಹೊರಹೋಗಬೇಕೆಂಬ ಆದೇಶ ಬಂತು. ಜನ ತಮ್ಮ ಹಳ್ಳಿಯನ್ನೇನೋ ತೊರೆದರು, ಆದರೆ ಆ ಪ್ರದೇಶದಿಂದ ಹೊರಹೋಗದೆ ತಮ್ಮ ಬಲಗಳನ್ನು ಸೇರಿದರು. ಈಗ ಅವರು ಎರಡು ವೈರಿ ಸೈನ್ಯಗಳ ನಡುವೆ ಸಿಲುಕಿಕೊಂಡಿದ್ದರಲ್ಲದೆ ಆಹಾರದ ಸರಬರಾಜಿಗೆ ಮಾರ್ಗವಿಲ್ಲದಂತೆ ಪ್ರತ್ಯೇಕಗೊಂಡಿದ್ದರು. ಅದರರ್ಥ ಹೊಟ್ಟೆಗಿಲ್ಲದ ಸ್ಥಿತಿ.

ಹಳ್ಳಿಯನ್ನು ಖಾಲಿ ಮಾಡಲಾಗಿದೆ ಎಂದು ಗೊತ್ತಾದಾಗ ಬ್ಲಾಕ್ ಬ್ರಿಗೇಡ್‌ನವರು ಹಾಡುತ್ತಾ ಬಂದರು. ಅವರಲ್ಲೊಬ್ಬನ ಕೈಯಲ್ಲಿ ಬಣ್ಣದ ಡಬ್ಬಾ ಮತ್ತು ಬ್ರಷ್ ಇತ್ತು. ಗೋಡೆಗಳ ಮೇಲೆ ಆತ ಬರೆದ: ಇಲ್ಲಿ ಕಾಲಿಡಲು ಅವರಿಗೆ ಬಿಡುವುದಿಲ್ಲ; ನಾವು ಮುನ್ನು ಗ್ಗುತ್ತೇವೆ, ಒಕ್ಕೂಟವನ್ನು ಬೇಧಿಸಲು ಯಾರಿಂದಲೂ ಸಾಧ್ಯವಿಲ್ಲ.

ಆತ ಇದನ್ನೆಲ್ಲ ಬರೆಯುತ್ತಿದ್ದಾಗ ಮಿಕ್ಕವರು ತಮ್ಮ ಮೆಷಿನ್‌ಗನ್‌ಗಳನ್ನು ಹಿಡಿದು ಹಳ್ಳಿಯ ರಸ್ತೆಗಳಲ್ಲಿ ಓಡಾಡುತ್ತಾ ಮನೆಗಳನ್ನು ಪರೀಕ್ಷಿಸುತ್ತಿದ್ದರು. ಸ್ವಲ್ಪಹೊತ್ತಿನಲ್ಲೇ ಹಲವು ಮನೆಗಳ ಬಾಗಿಲುಗಳನ್ನು ತಮ್ಮ ತೋಳ್ಬಲವನ್ನು ಪ್ರಯೋಗಿಸಿ ಒಡೆಯಲಾರಂಭಿಸಿದರು. ಅದೇ ಹೊತ್ತಿಗೆ ತನ್ನ ಹೇಸರಗತ್ತೆಯನ್ನೇರಿ ಬಿಸ್ಮಾ ಪ್ರತ್ಯಕ್ಷನಾದ. ಇಳಿಜಾರಿನ ರಸ್ತೆಯ ಮೇಲಿನ ಭಾಗದಲ್ಲಿ ಕಾಣಿಸಿಕೊಂಡ ಆತ ಎರಡು ಸಾಲಿನ ಮನೆಗಳ ನಡುವೆ ಸಾಗುತ್ತಾ ಬಂದ.

"ಏಯ್, ಎಲ್ಲಿಗೆ ಹೋಗುತ್ತಿರುವೆ ನೀನು?" ಎಂದು ಬ್ಲಾಕ್ ಬ್ರಿಗೇಡಿನ ಒಬ್ಬ ಕೇಳಿದ.

ಆ ಮುದಿಯನಿಗೆ ಅವರು ಕಂಡಂತೆ ಕಾಣಿಸಲಿಲ್ಲ ಮಾತ್ರವಲ್ಲ ಆತನ ಹೇಸರಗತ್ತೆ ನಡುಗಾಡುತ್ತಿದ್ದ ಒಂದು ಕಾಲಿನ ಮುಂದೆ ನಡುಗುತ್ತಿದ್ದ ಇನ್ನೊಂದು ಕಾಲನ್ನು ಇಡುತ್ತಾ ಮುಂದೆ ಸಾಗಿತ್ತು.

"ಏಯ್! ನಿನ್ನನ್ನೇ ಮಾತಾಡಿಸ್ತಿರೋದು" ಎಂದ ಆತ ಮತ್ತೆ. ಅಸ್ಥಿಪಂಜರದಂತಿದ್ದ ಹೇಸರಗತ್ತೆಯ ಮೇಲೆ ಕುಳಿತಿದ್ದ ನರಪೇತಲ ಭಾವಶೂನ್ಯ ಮುದುಕ ಅರ್ಧ ನಾಶವಾಗಿದ್ದ ನಿರ್ಜನಹಳ್ಳಿಯ ಕಲ್ಲುಗಳಿಂದ ಉದ್ಭವಿಸಿದ್ದ ಭೂತದಂತೆ ಕಾಣಿಸುತ್ತಿದ್ದ.

"ಆತ ಕಿವುಡ" ಎಂದ ಒಬ್ಬ.

ಮುದುಕ ಅವರೆಲ್ಲರನ್ನೂ ಒಬ್ಬರ ನಂತರ ಒಬ್ಬರಂತೆ ನೋಡಿದ. ಬ್ಲಾಕ್ ಬ್ರಿಗೇಡ್‌ನ ಸದಸ್ಯರು ಓಣಿಯೊಂದನ್ನು ಹೊಕ್ಕರು. ಅವರು ಅಂಗಳವೊಂದನ್ನು ತಲುಪಿದಾಗ ಅಲ್ಲಿ ಅವರಿಗೆ ಕೇಳಿಸಿದ್ದು ಎಲ್ಲೋ ತೊಟ್ಟಿಕ್ಕುತ್ತಿದ್ದ ನೀರು ಮತ್ತು ದೂರದಲ್ಲಿ ಹಾರುತ್ತಿದ್ದ ಬಂದೂಕಿನ ಗುಂಡುಗಳು.

"ಈ ಮನೆಯಲ್ಲಿ ಏನಾದರೂ ಸಿಗಬಹುದು ಅನ್ನಿಸುತ್ತೆ" ಅಂದ ಅವರಲ್ಲೊಬ್ಬ, ಒಂದು ಮನೆಯತ್ತ ತೋರುತ್ತಾ, ಆತ ಇನ್ನೂ ಚಿಕ್ಕಹುಡುಗ. ಆತನ ಸುತ್ತ ಇದ್ದ ಖಾಲಿ ಮನೆಗಳು ಆತನ ಮಾತಿನ ಪ್ರತಿಯೊಂದು ಶಬ್ದವನ್ನೂ ಪ್ರತಿಧ್ವನಿಸಿದವು. ಹೆದರಿದ ಆ ಹುಡುಗ ಏನೋ ಅಂಗಸನ್ನೆ ಮಾಡಿದ. ಬ್ರಷ್ ಹಿಡಿದಿದ್ದವನು ಖಾಲಿಯಾಗಿದ್ದ ಗೋಡೆಯ ಮೇಲೆ "ನಮ್ಮ ಹೋರಾಟ ಸ್ವಾತಂತ್ರ್ಯಕ್ಕಾಗಿ" ಎಂದು ಬರೆದ. ತೆರೆದುಬಿಟ್ಟಿದ್ದ ಕೊಳಾಯಿಯೊಂದು ಎಷ್ಟು ಜೋರಾಗಿ ಬಡಿಯುತ್ತಿತ್ತೆಂದರೆ [illegible] ಗನ್‌ಗಳ ಚೀರಾಟವನ್ನೂ ಅಡಗಿಸುತ್ತಿತ್ತು, [illegible]ವೊಂದನ್ನು ಮುರಿಯಲು ಯತ್ನಿಸುತ್ತಿದ್ದ ಇಬ್ಬರಿಗೆ

"ಒಂದು ನಿಮಿಷ ಇರಿ" ಎಂದ ಹುಡುಗ. ತನ್ನ ಸ್ಟೆನ್‌ಗನ್‌ನ ಮೂತಿಯನ್ನು ಬಾಗಿಲಿನ ಬೀಗಕ್ಕೆ ಇಟ್ಟು ಒಂದು ಗುಂಡು ಹಾರಿಸಿದ. ಸುಟ್ಟು ಹೋದ ಬೀಗ ಬಾಗಿಲನ್ನು ತೆರೆಯಿತು. ಅದೇ ಕ್ಷಣ ಯಾವ ದಿಕ್ಕಿನಲ್ಲಿ ಬಿಸ್ಮಾನನ್ನು ಬಿಟ್ಟು ಬಂದಿದ್ದರೋ ಅದರ ವಿರುದ್ಧ ದಿಕ್ಕಿನಿಂದ ಮತ್ತೆ ಬಿಸ್ಮಾ ಪ್ರತ್ಯಕ್ಷನಾದ. ಪಾಳುಬಿದ್ದಂತಿದ್ದ ತನ್ನ ಹೇಸರಗತ್ತೆಯನ್ನೇರಿ ಆತ ಹಳ್ಳಿಯ ರಸ್ತೆಗಳಲ್ಲಿ ವಿಹರಿಸುತ್ತಿರುವಂತಿತ್ತು.

"ಆತ ಹೋಗುವವರೆಗೂ ಸುಮ್ಮನಿರಿ" ಎಂದು ಬ್ಲಾಕ್ ಬ್ರಿಗೇಡ್‌ನ ಒಬ್ಬ ಅಂದಾಗ ಎಲ್ಲರೂ ತಾನೇನೂ ಮಾಡುತ್ತಿಲ್ಲವೆಂಬಂತೆ ವರ್ತಿಸುತ್ತಾ ನಿಂತರು.

"ರೋಮ್ ಅಥವಾ ಮರಣ" ಎಂದು ಬ್ರಷ್ ಹಿಡಿದಿದ್ದಾತ ಬರೆದ.

ತಾನಿಡುತ್ತಿರುವ ಪ್ರತಿಯೊಂದು ಹೆಜ್ಜೆಯೂ ತನ್ನ ಕೊನೆ ಹೆಜ್ಜೆಯೆಂಬಂತೆ ಆ ಹೇಸರಗತ್ತೆ ಅಂಗಳದಲ್ಲಿ ಸಾಗಿತು. ಅದರ ಮೇಲೆ ಕೂತಿದ್ದ ವ್ಯಕ್ತಿ ನಿದ್ರಿಸುತ್ತಿರುವಂತೆ ಕಂಡುಬಂತು.

"ಹೊರಟುಹೋಗು. ಈ ಹಳ್ಳಿಯಲ್ಲಿ ಯಾರೂ ಇಲ್ಲ" ಎಂದು ಆ ಹುಡುಗ ಅರಚಿದ.

ಬಿಸ್ಮಾ ಆತನತ್ತ ಗಮನಹರಿಸಲಿಲ್ಲ. ಹೇಗಾದರೂ ಮಾಡಿ ತನ್ನ ಹೇಸರಗತ್ತೆಯನ್ನು ಅಂಗಳ ದಾಟಿಸಿದರೆ ಸಾಕು ಎಂಬಂತಿತ್ತು ಅವನ ವರ್ತನೆ.

"ನೀನಿಲ್ಲಿ ಮತ್ತೆ ಬಂದ್ರೆ, ನಿನ್ನನ್ನ ಶೂಟ್ ಮಾಡುತ್ತೇವೆ" ಎಂದ ಹುಡುಗ.

'ಗೆಲುವು ನಮ್ಮದು' ಎಂದು ಬರೆದ ಬ್ರಷ್ ಹಿಡಿದಿದ್ದವ.

ಅವರಿದ್ದಲ್ಲಿಂದ ಸ್ಥಗಿತಗೊಂಡಿರುವ ಹೇಸರಗತ್ತೆಯ ಮೇಲೆ ಬಾಗಿದ್ದ ಮುದಿಯನ ದೇಹ ಅಸ್ಪಷ್ಟವಾಗಿ ಕಾಣಿಸುತ್ತಿತ್ತು.

"ಆ ಕಡೆ ಹೋಗಿ ನೋಡೋಣ" ಎಂದು ನಿರ್ಧರಿಸಿ ಬ್ಲಾಕ್ ಬ್ರಿಗೇಡಿನವರು ಕಮಾನುವೊಂದರಡಿ ಸಾಗಿದರು.

"ತುಂಬಾ ಕಡಿಮೆ ಸಮಯ ಇದೆ. ಈ ಮನೆಯಿಂದ ಪ್ರಾರಂಭಿಸೋಣ" ಎಂದು ನಿರ್ಧರಿಸಿದರು. ಆ ಮನೆಯ ಬಾಗಿಲನ್ನು ಹೊಡೆದ ನಂತರ ಅದನ್ನು ಆ ಚಿಕ್ಕಹುಡುಗ ಮೊದಲು ಪ್ರವೇಶಿಸಿದ. ಸಂಪೂರ್ಣವಾಗಿ ಖಾಲಿಯಾಗಿದ್ದ ಆ ಮನೆಯಲ್ಲಿ ಪ್ರತಿಧ್ವನಿ ಹೊರತಾಗಿ ಬೇರೇನೂ ಇರಲಿಲ್ಲ. ಆ ಮನೆಯ ಎಲ್ಲ ಕೊಠಡಿಗಳನ್ನು ಪರೀಕ್ಷಿಸಿ ಹೊರಬಂದರು.

"ಈ ಇಡೀ ಹಳ್ಳಿಗೇ ಬೆಂಕಿ ಇಡಬೇಕು ಅನ್ನಿಸುತ್ತಿದೆ" ಎಂದ ಹುಡುಗ.

'ನಾವು ದಿಟ್ಟವಾಗಿ ಹೆಜ್ಜೆ ಇಡುತ್ತಿದ್ದೇವೆ' ಎಂದು ಮತ್ತೊಂದು ಗೋಡೆಯ ಮೇಲೆ ಬರೆದ ಬ್ರಷ್ ಹಿಡಿದಿದ್ದವ.

ಅವರು ಓಣಿಯಿಂದ ಹೊರಬರುತ್ತಿದ್ದಂತೆ ಮತ್ತೆ ಬಿಸ್ಮಾ ಅವರಿಗೆ ಎದುರಾದ. ಆತ ಅವರತ್ತಲೇ ಬರುತ್ತಿದ್ದ.

ಆತನತ್ತ ತನ್ನ ಬಂದೂಕಿನಿಂದ ಗುರಿ ಇಟ್ಟಿದ್ದ ಹುಡುಗನಿಗೆ ಬ್ಲಾಕ್ ಬ್ರಿಗೇಡ್‌ನವನೊಬ್ಬ "ಬೇಡ" ಎಂದ.

'ಅಧಿಪತಿ' ಎಂದು ಬರೆದ ಇನ್ನೊಬ್ಬ.

ಅಷ್ಟೊತ್ತಿಗಾಗಲೇ ಆ ಹುಡುಗ ತನ್ನ ಬಂದೂಕಿನಿಂದ ಹಲವಾರು ಗುಂಡುಗಳನ್ನು ಹಾರಿಸಿದ್ದ. ಆ ಮನುಷ್ಯ ಮತ್ತವನ ಹೇಸರಗತ್ತೆ ಇಬ್ಬರನ್ನೂ ಒಟ್ಟಿಗೆ ಕೊಯ್ಲು ಮಾಡಲಾಗಿತ್ತು. ಆದರೂ ಆ ಹೇಸರಗತ್ತೆ ಕೆಲಕ್ಷಣ ತನ್ನ ಕಾಲ ಮೇಲೆ ನಿದ್ರಿಸುವಂತೆ ಕಂಡಿತು. ಆದರೆ ಮರುಕ್ಷಣ ಹೇಸರಗತ್ತೆ ತನ್ನ ಎಲ್ಲಾ ನಾಲ್ಕು ನಿಶಕ್ತ ಕಾಲುಗಳ ಮೇಲೆ ಒಂದೇ ಸಮನೆ ಕುಸಿದಂತೆ ಇಡಿಯಾಗಿ ನೆಲಕಪ್ಪಳಿಸಿತು. ಬ್ಲಾಕ್ ಬ್ರಿಗೇಡ್‌ನ ಸದಸ್ಯರು ಇದನ್ನೆಲ್ಲ ನೋಡುತ್ತಿದ್ದರೆ ಗುಂಡನ್ನು ಹಾರಿಸಿದ ಹುಡುಗ ತನ್ನ ಹಲ್ಲುಗಳ ನಡುವಿನ ಸಂಧಿಗಳನ್ನು ಕಡ್ಡಿಯಿಂದ ಶೋಧಿಸುತ್ತಾ ನಿಂತಿದ್ದ. ಆತನ ಮುಂದೆ ಶರಣಾಗುತ್ತಿರುವಂತೆ ಆ ಮನುಷ್ಯ ಮತ್ತಾತನ ಹೇಸರಗತ್ತೆ ಜೊತೆಯಾಗಿ ತಲೆಬಾಗಿದವು. ಮರುಕ್ಷಣ ಮುಂದೊಂದು ಹೆಜ್ಜೆ ಇಡಲಿದ್ದಾರೆ ಎಂದನ್ನಿಸಿದರೂ ಒಬ್ಬರ ಮೇಲೊಬ್ಬರು ಕುಸಿದುಬಿದ್ದರು.

ಅವತ್ತಿನ ರಾತ್ರಿ ಅವರಿಬ್ಬರ ಶವಗಳನ್ನು ಕರೆದೊಯ್ಯಲು ಹಳ್ಳಿಯ ಜನರೆಲ್ಲ ಬಂದರು. ಬಿಸ್ಮಾನನ್ನು ಹೂಳಿದರು; ಆತನ ಹೇಸರಗತ್ತೆಯನ್ನು ಬೇಯಿಸಿ ತಿಂದರು.

ಅದರ ಮಾಂಸ ಗಡುಸಾಗಿತ್ತು; ಆದರೆ ಅವರೆಲ್ಲರಿಗೆ ಹಸಿವಾಗಿತ್ತು.

■

# ಕಾಶ್ಮೀರದ ಕಥೆಗೆ ಮುಕ್ತಾಯವೆಂದು?

2001 ರಿಂದಲೂ ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸುತ್ತೇನೆಂದು ಭಾರತ ಸರ್ಕಾರ ಹೇಳುತ್ತಲೇ ಇದೆ; ಪಾಕಿಸ್ತಾನದ ಜೊತೆ ಚರ್ಚೆ ನಡೆಸುತ್ತಲೇ ಇದೆ. ಆದರೆ ಇದೆಲ್ಲವೂ ಅಮೆರಿಕನನ್ನು ಮೆಚ್ಚಿಸುವ ಪ್ರಯತ್ನದ ಭಾಗವಾಗಿಯೇ ನಡೆಯುತ್ತಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಸ್ಲಾಮಿಕ್ ಉಗ್ರವಾದ ಬೆಳೆಯುತ್ತಿದೆ ಎಂದು ಹೆದರುತ್ತಿರುವ, ಹೆದರಿಸುತ್ತಿರುವ ಅಮೆರಿಕ ಪಾಕಿಸ್ತಾನದ ಜೊತೆ ಸಂಧಾನ ನಡೆಸುವಂತೆ ಭಾರತದ ಮೇಲೆ ಒತ್ತಡ ಹೇರಿದೆ.




ಇದೆಲ್ಲದರಿಂದ ಹಿಂದೆ ಧರ್ಮ ನಿರಪೇಕ್ಷ ಸಿದ್ಧಾಂತದ ಆಧಾರದ ಮೇಲೆ ನಡೆದ ಚಳವಳಿ ಈಗ ಸನಾತನವಾದಿಗಳ ಕೈ ಸೇರಿದೆ. ಈ ಕೆಟ್ಟ ಬೆಳವಣಿಗೆಗೂ ಭಾರತ ಸರ್ಕಾರವೇ ಕಾರಣವೆಂದೇ ಹೇಳಬೇಕಾಗಿದೆ. ಈ ಪರಿಸ್ಥಿತಿಯಲ್ಲಿ ಜೆಹಾದ್ ಬಗ್ಗೆ ಮಾತನಾಡುವವರು ಭಾರತದ ಜೊತೆ ಮಾತುಕತೆಗಳಿಗೆ ಸಿದ್ಧರಾಗಿಲ್ಲ. ಕಾಶ್ಮೀರ ಸಮಸ್ಯೆಯನ್ನು ಮರೆತು ಭಾರತ ಮತ್ತು ಪಾಕಿಸ್ತಾನದ ನಡುವೆ ಒಳ್ಳೆಯ ಸಂಬಂಧ ಸ್ಥಾಪಿಸಲಾಗುವುದಿಲ್ಲ.

ಕಾಶ್ಮೀರದ ವಿವಿಧ ಭಾಗಗಳ ಜನತೆಯ ಪ್ರತಿನಿಧಿಗಳ ಜೊತೆ ದಿಕ್ಕು ದೆಸೆ ಇಲ್ಲದ ರೀತಿಯಲ್ಲಿ ನಡೆಯುತ್ತಿರುವ ಮಾತುಕತೆಗಳಿಂದ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಈ ಎಲ್ಲ ವಿದ್ಯಮಾನಗಳು ಮುಂದೆ ಯಾವ ರೂಪವನ್ನು ಪಡೆಯುತ್ತವೆ ಎಂದು ಕಾದು ನೋಡಬೇಕಾಗಿದೆ. ಈ ನಡುವೆ ಕಾಶ್ಮೀರಿಗಳಂತೂ ಶಾಂತಿಯುತ ಜೀವನ ನಡೆಸುವ ಅವಕಾಶವನ್ನೇ ಕಾಣದಾಗಿದ್ದಾರೆ. ಮಾನವ ಹಕ್ಕು ಉಲ್ಲಂಘನಾ ಪ್ರಕರಣಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿದ್ದರೂ ಅದು ನಿಂತಿಲ್ಲ. 2003ರ ಮಾರ್ಚ್ 23 ರಂದು ನದೀಮಾರ್ಗ್‌ನಲ್ಲಿ ಉಗ್ರರು 24 ಜನ ಹಿಂದೂಗಳನ್ನು ಕೊಂದ ನಂತರ ರಾಜಕೀಯ ಒತ್ತಡಕ್ಕೆ ಮಣಿದ ಸರ್ಕಾರ ಪೊಲೀಸರ ಹಾಗೂ ಸೈನ್ಯದ ಮೇಲೆ ತನ್ನ ಹಿಡಿತವನ್ನು ಸ್ವಲ್ಪ ಸಡಿಲಗೊಳಿಸಿದೆ.

**ಪ್ರಕ್ಷುಬ್ಧ ● ಕಾಶ್ಮೀರ**

ಆದರೆ ಪೊಲೀಸ್ ಮತ್ತು ಸೈನ್ಯದ ಮನೋಭಾವದಲ್ಲಿ ಯಾವ ಬದಲಾವಣೆಯೂ ಕಂಡು ಬಂದಿಲ್ಲ. ಹೊಸ ಸರ್ಕಾರ ಕೈಗೊಂಡ ಕೆಲವು ಕ್ರಮಗಳು ಕೇವಲ ಮೇಲ್ಪಟ್ಟದವು ಮಾತ್ರವಾಗಿದ್ದು ಹಿಂದಿನಂತೆಯೇ ಜನರು ಅವರನ್ನು ತಮ್ಮ ಶತ್ರುಗಳೆಂದೇ ಪರಿಗಣಿಸುವಂತಾಗಿದೆ. ಸೈನಿಕರಿಂದ ಯಾರೇ ಹತರಾಗಲಿ, ಆ ವಿಷಯದಲ್ಲಿ ಸೈನ್ಯ ಹೇಳಿದ್ದೇ ಅಂತಿಮ ಸತ್ಯವೆನ್ನುವಂತಾಗಿದೆ. ಆದರೆ ವಾಸ್ತವವಾಗಿ ನಡೆದದ್ದೇನು ಎಂದು ಸಾಮಾನ್ಯ ಜನರು ಹೇಳುವುದು ಹಲವು ಬಾರಿ ಹೊರ ಪ್ರಪಂಚಕ್ಕೆ ತಿಳಿಯುವುದೇ ಇಲ್ಲ. ಸಶಸ್ತ್ರ ಪಡೆಗಳ ವಿಶೇಷ ಅಧಿಕಾರಿಗಳ ಕಾಯಿದೆಯಲ್ಲಿ ಸೈನ್ಯದ ಮೇಲೆ ಕೆಲವು ನಿರ್ಬಂಧಗಳಿವೆ. ಆದರೆ ಆಚರಣೆಯಲ್ಲಿ ಮಾತ್ರ ಯಾವ ಕಾನೂನೂ ಅವರ ಕಣ್ಣಿಗೆ ಬೀಳುವುದಿಲ್ಲ. ಅಕಸ್ಮಾತ್ ಪ್ರಾಮಾಣಿಕ ಅಧಿಕಾರಿಯೊಬ್ಬ ಅಂತಹ ಕಾನೂನುಗಳನ್ನು ಜಾರಿಗೊಳಿಸಲು ಯತ್ನಿಸಿದರೆ ಆತನಿಗೆ ಉಗ್ರರ ಬೆಂಬಲಿಗನೆಂಬ ಹಣೆಪಟ್ಟಿ ಹಚ್ಚಲಾಗುತ್ತದೆ. ಅಂಥ ಉದಾಹರಣೆಗಳು ಮಾನವಹಕ್ಕು ಕಾರ್ಯಕರ್ತರ ಗಮನಕ್ಕೆ ಬಂದಿವೆ.



ರೆನೇಗೇಡುಗಳ ಉಪಟಳವೂ ಮುಂದುವರೆದಿದೆ. ಅವರ ಕೈಯಲ್ಲಿ ನರಳಿದ ಕೆಲವರು ಧೈರ್ಯ ಮಾಡಿ ಮಾಧ್ಯಮಗಳ ಮುಂದೆ ವಿಷಯಗಳನ್ನು ಹೇಳಿದ್ದರಿಂದ ರೆನೇಗೇಡುಗಳ ಹಾಗೂ ಅವರ ಜೊತೆ ಸೇರಿದ್ದ ಅಪರಾಧಿಗಳ ಕುಕೃತ್ಯಗಳು ಬೆಳಕಿಗೆ ಬಂದವು. ಆದರೆ ಜನಸಾಮಾನ್ಯರ ಮೇಲೆ ಅವರು ನಡೆಸುವ ದಬ್ಬಾಳಿಕೆಗೆ ಸೈನ್ಯದ ಬೆಂಬಲ ಇರುವುದರಿಂದ ಅವರ ವಿರುದ್ಧ ಯಾರೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಜನರಿಂದ ವಿಪರೀತವಾದ ಒತ್ತಡ ಬಂದಾಗ ಮಾತ್ರ ಕೆಲ ಸಂದರ್ಭಗಳಲ್ಲಿ ಕೆಲವರನ್ನು ಬಂಧಿಸಲಾಗಿದೆಯಷ್ಟೆ.

ಗಡಿಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಬವಣೆಗಳ ಬಗ್ಗೆ ವಿಶೇಷವಾಗಿ ಹೇಳಬೇಕಿದೆ. ಹಿಂದೆ ನಡೆದ ಭಾರತ-ಪಾಕಿಸ್ತಾನ ಯುದ್ಧಗಳ ಸಮಯದಲ್ಲಿಯೂ ಅವರು ಸಮಸ್ಯೆಗಳನ್ನು ಎದುರಿಸಿದ್ದರೂ 1989 ರಿಂದೀಚೆಗೆ ಅವರ ಕಷ್ಟಗಳು ಉಲ್ಬಣಗೊಂಡಿವೆ. ಮುಖ್ಯವಾಗಿ 2001 ಡಿಸೆಂಬರ್ 13 ರಂದು ಸಂಸತ್ತಿನ ಮೇಲೆ ದಾಳಿ ನಡೆದ ನಂತರವಂತೂ ಅವರ ಕಷ್ಟಗಳು ಹೆಚ್ಚಿವೆ. ಅವರು ಬೇರೆಡೆಗೆ ನಿರಾಶ್ರಿತರಾಗಿ ಹೋಗಿ ಸರ್ಕಾರ ನಿರ್ಮಿಸಿದ ಗುಡಾರಗಳಲ್ಲಿ ಬದುಕಬೇಕಾಗಿದೆ. ಜಮ್ಮುವಿನಲ್ಲಿ ನಿರಾಶ್ರಿತ ಪಂಡಿತರಿಗೆ ಸರ್ಕಾರ ನೀಡುವ ಹಣ ಮತ್ತು ದಿನಸಿಗಿಂತಲೂ ಬಹಳ ಕಡಿಮೆ ಹಣ ಮತ್ತು ದಿನಸಿಯನ್ನು ಇವರಿಗೆ ಕೊಡಲಾಗುತ್ತಿದೆ. ಈ ತಾರತಮ್ಯಕ್ಕೆ ಯಾವ ಅಧಿಕಾರಿಯಿಂದಲೂ ಸೂಕ್ತ ಸಮರ್ಥನೆ ಇಲ್ಲಿಯವರೆಗೂ ಸಿಕ್ಕಿಲ್ಲ. ಅಂತರರಾಷ್ಟ್ರೀಯ ಗಡಿಯಲ್ಲಿ ಸೈನ್ಯ ಹುದುಗಿಟ್ಟಿರುವ ನೆಲಬಾಂಬುಗಳು ಹಲವೊಮ್ಮೆ ಹಠಾತ್ತನೆ ಸಿಡಿಯುವುದರಿಂದ ಹಲವು ಸಾವುಗಳು ಸಂಭವಿಸಿವೆ. ಆ ಪ್ರಾಂತ್ಯದಲ್ಲಿ ಅನೇಕರು ಇದೇ ಕಾರಣಕ್ಕೆ ಅಂಗವಿಕಲರೂ ಆಗಿದ್ದಾರೆ.

ನದೀಮಾರ್ಗ್‌ನಲ್ಲಿ ಉಗ್ರರು 24 ಜನ ಹಿಂದೂಗಳು ಕೊಂದ ನಂತರ ಪೊಲೀಸರ ಮತ್ತು ಸೈನಿಕರ ದಾಳಿಗಳೂ ಹೆಚ್ಚಾದವು. ಈ ದಾಳಿಗಳಲ್ಲಿ ಹಲವರು ಹತರಾದರೆ, ಬಹುಸಂಖ್ಯೆಯಲ್ಲಿ ಜನ ಕಾಣೆಯಾದರು. 1989 ರಿಂದ 2002 ರವರೆಗೆ 8000 ಜನ ಕಾಣೆಯಾಗಿದ್ದು ಅವರಲ್ಲಿ ಬಹಳಷ್ಟು ಜನರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಹೊಸ ಸರ್ಕಾರ ಅಧಿಕಾರಕ್ಕೆ ಬಂದ ನಂತರೂ ಜನರ ಸಮಸ್ಯೆಗಳು ಕಡಿಮೆಯಾಗಿಲ್ಲ. ಹಿಂದಿನ ಸರ್ಕಾರಗಳ ರೀತಿಯಲ್ಲಿಯೇ ಹೊಸ ಸರ್ಕಾರವೂ ಕಾಣೆಯಾದವರ ಬಗ್ಗೆಯಾಗಲಿ, ಸೈನ್ಯದ ಮತ್ತು ಪೊಲೀಸರ ಉಪಟಳದ ಬಗ್ಗೆಯಾಗಲಿ ತೃಪ್ತಿಕರವಾದ ವಿವರಣೆಯನ್ನು ನೀಡುವಲ್ಲಿ ಸೋತಿದೆ.

ಆದ್ದರಿಂದ ಕಾಶ್ಮೀರದ ಕಥೆಗೆ ಮುಕ್ತಾಯವೆಂದು? ಎಂಬ ಪ್ರಶ್ನೆಗೆ ಸದ್ಯದಲ್ಲೇ ಉತ್ತರ ಸಿಗುವುದು ಕಷ್ಟಕರವಾಗಿದೆ.

■

# ಶೋಭ ಕರಂದ್ಲಾಜೆ ರಿಯಲಿ ಬ್ಯೂಟಿಫುಲ್ ಲೇಡಿ ಕಣಕ್ಕ

ಓಂದಿಷ್ಟು ಹೆದರಿಸಿದ ಮುಂಗಾರು ಮಳೆ 'ಗೊಬ್ಬರ ಒದಗಿಸಿಕೊಂಡಿರಿ, ಆಮೇಲೆ ಬರುತ್ತೇನೆ' ಎಂಬಂತೆ ಕಾಲುಕಿತ್ತು ವಾರವಾಗಿತ್ತು. ಅರ್ಜೆಂಟಿಗೆ ಸೀಟುಕ್ಕೆ ಕೆರೆದವರು ಮಗಟುಕ್ಕೆ ಕೆರೆದರಾಯ್ತು ಎಂಬಂತೆ ನಿರಾಳವಾಗಿದ್ದರಿಂದ ಹೋಟೆಲು ಮನೆ ಭರ್ತಿಯಾಗಿತ್ತು. ಕಾಫಿ ಹೀರಿ ಬೀದಿ ಎಳೆದು ಹುರಿಯಾದ ಸೀರ.

''ಆ ಸಿಂದಿಯಾ ಯಂಲ್ಡಾರ್‍ನ ಬುಟ್ಟಿ ಮಾಯಾವತಿತಕ್ಕೋಗಿದ್ರ. ಸರಿಯಾಗಿ ಮಾಡಿ ಕಳಿಸಿದ್ನು'' ಎಂದು ನಕ್ಕು ಕೆಮ್ಮಿಗೆ ತುತ್ತಾದ.

## ಬಯಲುಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಅವುಳೇನು ಮಾಡಿದ್ಲೊ ಸೀರ ಮಾವ?" ಎಂದಳು ಜುಮ್ಮಿ.

"ತಗದತ್ತಗೆ ಯಸ್ತವುಳೆ ಕಂಡ್ಯ."

"ಅಂತ ಕಾನ್ಸಿರಾಮುನ್ನೆ ಕಾಸಿಗಿಂತ ಕಡೆ ಮಾಡಿದ್ಲೋಳಿಗೆ ಈ ಸಿಂದಿಯಾ ಯಾವ ಲೆಕ್ಕನೆ?" ಎಂದ ಉಗ್ರಿ.

"ಅಂಗರವುಳು ಘಾಟ ಹೆಂಗ್ಸು ಅನ್ನು?"

"ಘಾಟ ಅಂತ ಕೇಳಿಯಾ? ಜಯಲಲ್ತ ಬೇಕು ಇವುಳು ಬ್ಯಾಡ, ಅಂಗೆ ಕಾಡು ಕ್ವಾಣೆದ್ದಂಗೆ ಗುದ್ಯತ್ಲಗೆ ಯಸ್ತು ಬುಡ್ತಳೆ. ಹಿಂಗೆ ಕರ್ನಾಟಕದಲ್ಲಿ ಅವುಳು ತಗುದು ಯಸ್ತಿರದ್ರಲ್ಲಿ ಸಿಂದ್ಯ ಯರಡನೇ ಗಿರಾಕಿ."

"ಅದ್ಯಾಕಂಗೆ ಯಸ್ತವುಳ್ಳ ಸಿಂದಿನ್ನಾ?" ಎಂದ ಸೀರ.

"ದ್ಯಾವೇಗೌಡ ಪೋನು ಮಾಡಿ 'ನಿನ್ನತ್ರಯಿರೊ ಆ ಸಿಂದ್ಯನ್ನ ವದ್ದೊಡುಸು, ನಾನು ನೀನು ಒಂದಾಗನ' ಅಂತ ಹೇಳಿದ್ನಂತೆ. ಅಂಗಂದಿದ್ದೆ ತಡ ತಗದಾಕ್ಯವುಳೆ."

"ಅಂಗರೆ ದ್ಯಾವೇಗೌಡ ಇನ್ನೂ ಸುಮ್ಮನಾಗಿಲ್ಲ ಅನ್ನು?"

"ಅವುನೆಲ್ಲಿ ಸುಮ್ಮನಾದನೊ? ಆಟ್ಯಗಿದಿಬೇಕು ಸುಮ್ಮನಾಗಬೇಕು, ಅಲ್ಲಿವರಿಗೂ ಅವುನ ಚಾಸ್ಯೆ ನಿಲ್ಲದಿಲ್ಲ. ನೋಡಾಗ್ಲೆ ಕಾಂಗ್ರೆಸ್‌ನ್ನಳಗೂ ಕೀಡೆ ಹಾಕಿದ್ದನಂತೆ."

"ಅಲ್ಲೇನು ಕೀಡೆ ಹಾಕಿದ್ದನ್ನಾ?" ಎಂದು ಕಾಳಮಾವ ಅಸಹನೆಯಿಂದ ಕೇಳಿದ.

"ಆ ಕಾಂಗ್ರೆಸ್ ಬಡ್ಡೆತ್ತವಾಗ್ಲೆ ದ್ಯಾವೇಗೌಡ ಹೇಳಿದಂಗೆ ಕೇಳ್ತಾಯಿದ್ದವಂತೆ ಕಣಮಾವ. ಅದ್ಕೆ ನೋಡು ಸಿದ್ದರಾಮಯ್ಯ ವಿಧಾನಸಭೆನೂ ಬರದಂಗೆ ಅವುನ ಕ್ಷೇತ್ರದಲ್ಲೇ ತಿರುಗ್ತಾಯಿದ್ದನಂತೆ."

"ಅಂಗರಿದೇನೊ ಆಯ್ತದೆ ಕಂಡ್ಯ?" ಎಂದ ಸೀರ ಒಳಗಣ್ಣಾಗಿ.

"ಏನಾದತೊ, ದ್ಯಾವೇಗೌಡ ತಿರಗ ಆಟ ಸುರುಮಾಡ್ತನೆ."

"ಅಲ್ಲಾ ಆ ಕಾಂಗ್ರೆಸ್‌ನವ್ಯಾಕೆ ಇವುನೇಳಿದಂಗೆ ಕೇಳ್ಯವೂ?"


"ಅವೇನು ಇವತ್ತು ಕೇಳ್ತವೇನೊ? ಯಲಕ್ಷನ್ನಿಗಿಂತ ಮದ್ಲೆ ಅವುನೇಳಿದಂಗೆ ಕೇಳಿದ್ದವಂತೆ. ಅದ್ಕೆ ಆಲವೆ ವಳೆನರಸೀಪುರದಲ್ಲಿ ರೇವಣ್ಣನ ಸೋಲಸೋ ಅಂತ ಕ್ಯಾಂಡೇಟಾಕದೆ ಆ ಪುಡಸಾಮಿ ಮಗಳನೊ ಸ್ವಸೆನೋ ಹಾಕಿ ಕೈತೊಳಕಂಡ್ರು. ಇತ್ತಗಿ ರಾಮನಗರದಲ್ಲಿ ಎಲ್ಲಿಂದ್ಲೊ ಯಗಡೆ ಮಗಳ ಹಿಡಕಂಡು ಬಂದು ನಿಲ್ಲಿಸಿದ್ರು. ಇನ್ನು ಒಂದು ಸೀಕ್ರೆಟ್ ಗೊತ್ತೆ ಮಾವ?"

"ಏನು ಸೀಕರೇಟ್ಯ?"

"ಈ ದ್ಯಾವೇಗೌಡ ಯಲಕ್ಷನ್ನಿಗಿಂತ ಮದ್ಲೆ 'ನಾವೊಂದು ನಲವತ್ತರಿಂದ ಐವತ್ತು ಸೀಟು ಬತ್ತಿವಿ. ನೀವು ಎಂಭತ್ತೈದರಿಂದ ತೊಂಭತ್ತು ಸೀಟು ಬತ್ತಿರಿ. ನಾವು ನೀವು ಸೇರಿ ಸರ್ಕಾರ ಮಾಡನ' ಅಂತ ಹೇಳಿದ್ನಂತೆ."

"ತಗಳಪ್ಪ, ಇದು ಕಂಡ್ಯ ವಳ ಹ್ವಡತ ಅಂದ್ರೆ" ಎಂದ ಸೀರ.

"ವಳ ವಡತ ಅಂದ್ರೆ ಸರಿಯಾದ ವಡತ ಕಣಮಾವ. ಅದ್ಕೆ ಆ ಕಾಂಗ್ರೆಸ್ ಬಡ್ಡೆತ್ತವು ಯಲಕ್ಷನ್ನಲ್ಲಿ ಅಪ್ಪಿತಪ್ಪಿ ದ್ಯಾವೇಗೌಡುನ್ನ, ಅವುನ ಮಕ್ಕಳನ್ನ ಬೈಲಿಲ್ಲ. ಈ ಸಿದ್ಧರಾಮಯ್ಯ ಬಾಯಿಗೆ ಬಂದಂಗೆ ಬೈಕಂಡು ತಿರಗಿದ್ನಂತೆ. ಅದ್ಕೆ ಈಗ ಅವುನ ಬಡ್ಡಿಗೆ ಬಂದದೆ ಆಪತ್ತು" ಎಂದು ಉಗ್ರಿ ಹೇಳುವಾಗ ತೀರ ಕುತೂಹಲಗೊಂಡ ಜುಮ್ಮಿ,



"ಅಂಗರವುನ ಕತಿಯೇನೀಗಾ?" ಎಂದಳು.

"ಕತಿಯೇನು ಅಂದ್ರೆ, ಅಲ್ಲಿರಂಗಿಲ್ಲ, ಎಲ್ಲೂ ಹೋಗಂಗಿಲ್ಲ, ಅಂಗಾಗ್ಯದೆ ಕಣೆ."

"ಅಂತಾ ಕಷ್ಟ ಬಂದಿದ್ದತೆ?"

"ಊ. ಮುಂದಿನ ಲೋಕಸಭೆ ಚುನಾವಣೆಲಿ ದ್ಯಾವೇಗೌಡ ಕಾಂಗ್ರೆಸ್ ಜ್ವತೆ ಸೇರಿಕಂಡು ಯಲಕ್ಷನ್ ಮಾಡ್ತನಂತೆ. ಆಗ ಸಿದ್ದರಾಮಯ್ಯ ದ್ಯಾವೇಗೌಡನ ಪರ ಓಟು ಕೇಳುಬೇಕಾಯ್ತದೆ."

"ತಗಳಪ್ಪ ಇದ್ವಳ್ಳಿ ಚನಾಗ್ಯದೆ" ಎಂದ ಸೀರ ಕುಚೋದ್ಯ ಕಂಡವನಂತೆ ನಗಾಡಿದ.

"ಅಲ್ಲಿ ಮಾಯಾವತಿಗೇಳಿ ಸಿಂದಿನ ತಗದಾಕಿಸ್ತ, ಈಗ ಸಿದ್ದರಾಮಯ್ಯ ತಾನೆ ಎಲ್ಯಾರ ಹೋಗಂಗೆ ಮಾಡಿ ಮಡಗ್ಯವುನೆ. ಇದಕೇನೇಳ್ತೀ?"

"ನೋಡು ಮತ್ತೆ ಇಂತ ರಾಜಕಾರಣನೂ ಮಾಡ್ತರೆ?"

"ಮಾಡದೇನು? ಅವುನ್ನ ಎದುರಾಯ್ಕಂಡೋರ್ಯಲ್ಲ ಚೆಲ್ಲಾಡಿ ಹೋದ್ರು. ಸಿಂದ್ಯ ಬೀದಿಗೆ ಬಿದ್ದ. ಸಿದರಾಮಯ್ಯ ಸಿಗಾಯ್ಕಂಡು ನಳ್ಳುತಾ ಅವುನೆ. ಪ್ರಕಾಸ ಸೋತು ಮನೆ ಸೇರಿಕಂಡವನೆ. ರಮೇಶ್‌ಕುಮಾರ್ ಸೋತ. ಕಿಷ್ಪ ಅಡ್ರಸಿಲ್ಲದಂಗಾದ. ಚಲುವರಾಯಸ್ವಾಮಿ ಸೋತು ಆಲ್ಪಾಪರೇಷನ್ ಮಾಡಿಸಿಗಂಡು ಮನಿಗ್ಯವುನೆ. ದ್ಯಾವೇಗೌಡನ್ನ ಎದುರಾಯ್ಕಂಡೋರು ಏನೇನಾಗ್ಯವುರೆ ನೋಡು ಅಂಗೆಯ."

"ಅಲ್ಲಾ ಯಂಗೊ ಒಂದು ಸರ್ಕಾರ ಅಂತ ಆಯ್ತು. ದಿನಬೆಳಗಾದ್ರೆ ಅಪ್ಪ ಮಕ್ಕಳ ಕಾಟ ನೋಡದಂಗಾಯ್ತು ಅಂತ ಸುಮ್ಮನಿದ್ರೆ ತಿರಗ ಯಲ್ಲ ಸುರುವಾಗಂಗೆ ಕಾಣ್ತಾ ಅದಲ್ಲಾ?"

"ಸುರುವಾಗಿ ಆಗ್ಲೆ ಬಾಳ ದಿನಾಯ್ತು ಚಿಗಪ್ಪ, ಈಗ ಯಲ್ಲ ಯಪೆಕ್ಟಿಗೆ ಬತ್ತಾ ಅದೆ" ಎಂದು ವಾಟಿಸ್ಸೆ ಬಂದ.

"ಬೆಂಗಳೂರಿಗೆ ಹೋಗಿದ್ದಂತಲ್ಲ ಯಾಕ್ಲ? ಎಂದಳು ಜುಮ್ಮಿ.

"ನಮ್ಮ ಮಾಜಿ ಸಾರಿಗೆ ಸಚಿವರ ಪೆಟ್ರೋಲ್ ಟ್ಯಾಂಕಿಂದ ಇಂಜನ್‌ಗೋಗಿರೊ ಪೈಪ್ಪು, ಲೀಕಾಯ್ತಾ ಇತ್ತಂತೆ. ಅದ ವೊಡಕಾ ಆಸುಪತ್ರೆಲಿ ರಿಪೇರಿ ಮಾಡಿಸಿದ್ರು. ಅದನೋಡನ ಅಂತ ಹೋಗಿದ್ದೆ ಕಣಕ್ಕ."

"ಆಲ್ಪಾಪರೇಸನ್ನು ಅನ್ನು?"

"ಊ ಕಣಕ್ಕ. ಯಾರದೊ ಕಾರೋಗಿತ್ತು ಹೋಗಿದ್ದೆ.

# ಚಪ್ಪಲಿ ಚಿಕಿತ್ಸೆ

ಯಡಿಯೂರಪ್ಪ ಕೆಂಡಾಮಂಡಲ ಆಗಿದ್ದರು. ಯಾರಾದರೂ ಹಾಗೆ ಆಗುವುದು ಸಹಜವೇ ಆಗಿತ್ತು. ಮುಖ್ಯಮಂತ್ರಿಯವರನ್ನು ಸನ್ಮಾನಿಸಿ ಸಂತೋಷ ಅನುಭವಿಸಬೇಕು ಅಂತ ಇದ್ದರು. ಯಾರು - ಅವರ ಕ್ಷೇತ್ರದ ಮಹಾಜನತೆ. ಇಂತಹ ರಸಮಂಜರಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಆನಂದತುಂದಿಲರಾಗಿರುವಾಗ ಯಾವ್ನೋನೋ ಕೆಲಸಕ್ಕೆ ಬಾರದ, ಹೇಳಹೆಸರಿಲ್ಲದವನೊಬ್ಬ ನೇಣು ಬಿಗಿದುಕೊಂಡು ನೆಗೆದುಬಿದ್ದನಂತೆ. ಅಲ್ಲಿಗೆ ಓಡಿಹೋಗಬೇಕಿತ್ತಂತೆ. ಸಾವಿರಾರು ಜನರ ಮನಸ್ಸಿಗೆ ನೋವುಂಟು ಮಾಡಿ ಮೃತನನ್ನು ಕಾಣಲು ಹೋಗುವುದು ಅವರು ಮನಸ್ಸಿಗೆ ಒಪ್ಪದ ಮಾತು. ಹಾಗಾಗಿ ಹೋಗಲಿಲ್ಲ, ಅಷ್ಟಕ್ಕೇ ರೈತನ ಪ್ರಾಣಕ್ಕಿಂತ ತನ್ನ ಸನ್ಮಾನವೇ ಮುಖ್ಯ ಆಯಿತು ಈ ಮುಖ್ಯಮಂತ್ರಿಗೆ ಅಂತ ಹಂಗಿಸಿದರು. ಅಲ್ಲ ಇವರಾಗಿದ್ದರೆ ಏನು ಮಾಡುತ್ತಿದ್ದರು? ಓಡಿಹೋಗಿ ಹೆಣದ ಮುಂದೆ ಅಳುತ್ತಾ ಅಳುಮುಂಜಿ ತರಹ ಕೂರುತ್ತಿದ್ದರು ಅಂತ ಕಾಣುತ್ತೆ! ಸತ್ತವನು ಸತ್ತ ಅವರು ಹೋಗಿದ್ದರೇನು ಜೀವ ಬರ್ತಿತ್ತೆ? ಆದರೂ ಇಂತಹ ಮಾತು.

ಹಾಳಾಗಲಿ ಅಂತ ಏನೋ ದೊಡ್ಡ ಮನಸ್ಸು ಮಾಡಿ ಮಾರನೆ ದಿನ ಹೋದರು. ಅವರು, ಈ ರಾಜ್ಯದ ಏಕೈಕ ಮುಖ್ಯಮಂತ್ರಿ, ಅಡ್ರೆಸ್ಸೇ ಇಲ್ಲದ ಸಾವಿನ ಮನೆಗೆ ತಮ್ಮ ಪಾದ ಬೆಳೆಸಿದರಲ್ಲ ಅಂತ ಸಂತೋಷ, ಸಮಾಧಾನ ಪಡೆಯಲಿಲ್ಲ, ಮೃತದೇಹಕ್ಕೆ ಹಾರ ಹಾಕಿದ್ದನ್ನು, ಅದೂ ಗಂಧದ ಹಾರ ಹಾಕಿದ್ದನ್ನು ಮೆಚ್ಚಿಕೊಳ್ಳಲಿಲ್ಲ; ಎಡಗೈಲಿ ಬೇಕಾಬಿಟ್ಟಿ ಉದಾಸೀನದಿಂದ ಬಿಸಾಕಿದರು ಅಂತ ಸುದ್ದಿ ಮಾಡಿದರು. ದೃಶ್ಯ ಮಾಧ್ಯಮಗಳಲ್ಲಿ ಇದೇನೋ ಮಹಾ ಅಪರಾಧ ಅನ್ನೋ ರೀತಿ ತೋರಿಸಿದರು. ಇಂತಹದ್ದಕ್ಕೆಲ್ಲ ಅವರೇನು ಕೇರ್ ಮಾಡೋರಲ್ಲ, ಈ ಜನರ ಬುದ್ಧಿ ಗೊತ್ತಿಲ್ವೇ. ಮೂರು ದಿನ ಮೂಗು ಮುರಿದು ಮಾತಾಡ್ತಾವೆ. ನಾಲ್ಕನೆ ದಿನ ಬಂದು ಕಾಲಿಗೆ ಬೀಳ್ತಾವೆ. ಮಾಧ್ಯಮದವರು ಬೊಗಳಿದಾಕ್ಷಣ ಮುಖ್ಯಮಂತ್ರಿ ಸ್ಥಾನವೇನೂ ಹಾಳಾಗೋಲ್ಲ ಅಂತ ಆರಾಮವಾಗೇ ಇದ್ದರು. ಆದರೆ ವಿಧಾನಸಭೆಯಲ್ಲೂ ಎಡಗೈ ಹಾರದ ಚುಚ್ಚುವಿಕೆ. ಅಲ್ಲ ಹಾರ ಹಾಕೋದು ಮುಖ್ಯವೋ, ಅವನು ಯಾವ ಕೈಲಿ ಹಾಕಿದ? ಎಡಗೈಲೋ? ಬಲಗೈಲೋ ಅನ್ನೋದು ಮುಖ್ಯಾನೋ?

ಇತ್ತೀಚೆಗೆ ಸಿರಿಗೆರೆ ಶಿವಕುಮಾರ ಶರಣರ ಜಗತ್ಕಲ್ಯಾಣ ಪ್ರಸಂಗವನ್ನು ಇಲ್ಲಿ ಉದ್ಧರಿಸಲೇಬೇಕು. ಚಪ್ಪಲಿ ಮಹತ್ವ ಅರಿಯದವರು ಅದನ್ನು ಕೀಳಾಗಿ ಕಾಣುವ ಪ್ರವೃತ್ತಿ ಹೊಂದಿದ್ದರು. ತಮಗಾಗದ ನಾಯಕನ ಸಭೆಗೆ ಚಪ್ಪಲಿ ಎಸೆಯುವ ಕೈಂಕರ್ಯದಿಂದ ಕೃತಾರ್ಥರಾಗುತ್ತಿದ್ದರು.




ಕೋಪೋದ್ರಿಕ್ತರಾದಾಗ 'ಕಾಲಲ್ಲಿರುವುದನ್ನು ಕೈಗೆ ತೆಗೆದುಕೊಳ್ಳಬೇಕಾಗುತ್ತೆ' ಅಂತ ಚೀರುತ್ತಿದ್ದರು. ಇತ್ತೀಚೆಗೆ ನಂಜನಗೂಡಿನ ಬಳಿಯ ಹುಳಿಮಾವಿನಲ್ಲಿ ಬಾಬು ಜಗಜೀವನರಾಂ ಪ್ರತಿಮೆಗೆ ಯಾರೋ ದುಷ್ಕರ್ಮಿಗಳು ಚಪ್ಪಲಿ ಹಾರ ಹಾಕಿದ್ದು ರಣರಂಪ ಆಗಿದೆ. ಅದೇ ಹೂವಿನಹಾರ ಹಾಕಿದ್ದರೆ ಇದು ಸಂಭವಿಸುತ್ತಿರಲಿಲ್ಲವಲ್ಲಾ. ಆದುದರಿಂದ ಚಪ್ಪಲಿಯೂ ಹೂವಿಗೆ ಸಮ; 'ಚಪ್ಪಲಿ ಸೇವೆ'ಯೂ 'ಹೂವಿನ ಸೇವೆ'ಯಷ್ಟೇ ಮಧುರವಾದುದು, ಆನಂದದಾಯಕವಾದುದು ಎಂದು ಸಿರಿಗೆರೆಯ ಶ್ರೀಗಳು ಅಭೂತಪೂರ್ವ ಸಂಶೋಧನೆ ನಡೆಸಿರಬೇಕು. ಎಂದೇ ಅವರು ತಮ್ಮನ್ನೂ ಸೇರಿದಂತೆ ಎಲ್ಲರಿಗೂ ಚಪ್ಪಲಿಹಾರ ಹಾಕುವಂತೆ ಕೋರಿದ್ದಾರೆ.

ಅದೇನು ಹಳೇ ಚಪ್ಪಲಿಗಳಿಂದ ಮಾಡಿದ ಹಾರವೋ ಅಥವಾ ಹೊಸ ಚಪ್ಪಲಿಗಳಿಂದ ಕಂಗೊಳಿಸುವ ಹಾರವೋ ಎಂಬುದನ್ನು ಸ್ಪಷ್ಟಪಡಿಸಿದ್ದರೆ ಒಳ್ಳೆಯದಿತ್ತು. ಹೊಸ ಚಪ್ಪಲಿ ಹಾರ ಎಂದಾದರೆ ಅದಕ್ಕೆ ತಗಲುವ ಖರ್ಚನ್ನ ನೆನೆದೇ ಅದರ ಸಹವಾಸವೇ ಬೇಡ ಎಂದು ಕೈಜಾಡಿಸುವ ಭಕ್ತಶಿರೋಮಣಿಗಳೇ ಅಧಿಕವಾಗಿರುವರಲ್ಲಾ ಅದಕ್ಕೇ! ಸದಾ ಹಾವುಗೆಯನ್ನು ಬಳಸುತ್ತಿದ್ದರೂ ಸ್ವಾಮಿಗಳು 'ಚಪ್ಪಲಿ ಚಿಕಿತ್ಸೆ'ಯ ಅರ್ಥಶಾಸ್ತ್ರವನ್ನು ಅರಿಯದಂತಹ ಮೂಢರಲ್ಲ, ಪರೋಕ್ಷವಾಗಿ ಹಳೆ ಚಪ್ಪಲಿಯ ಮೂಲಕ ಶಿವೈಕ್ಯರಾಗಬಹುದೆಂದು ಶ್ರುತಪಡಿಸಿದ್ದಾರೆ. ಚಪ್ಪಲಿಗೆ ಅಂಟಿರುವ ಕೀಳರಿಮೆಯನ್ನು 'ಚಪ್ಪಲಿ ಚಿಕಿತ್ಸೆ' ಮೂಲಕ ಗುಣಪಡಿಸಬಹುದೆಂದು ಸ್ವಾಮಿಗಳ ಅನ್ನಿಸಿಕೆ. ಜಗಜೀವನರಾಂ ಅವರ ಪ್ರತಿಮೆಗೆ ಚಪ್ಪಲಿ ಹಾರ ಹಾಕಲು ಅವರು ಪ್ರತಿನಿಧಿಸಿದ ಜಾತಿಯ ಕುರಿತು ಇರುವ ಜನಾಂಗೀಯ ದ್ವೇಷವೇ ಕಾರಣ; ಮೊದಲು ನಿಮ್ಮ ಜನಾಂಗದವರಿಗೆ ಇದನ್ನು ಬಿಡಲು ಹೇಳಿ ಎನ್ನುವುದು ಕೆಲವರ ಅಭಿಪ್ರಾಯ. 'ಚಪ್ಪಲಿ ಚಿಕಿತ್ಸೆ' ಸುಲಭ; 'ದ್ವೇಷ ಬಿಡಿಸುವುದು' ಕಷ್ಟ. ತಮ್ಮ ಜಾತಿಯ ಜನರನ್ನು ಎದುರು ಹಾಕಿಕೊಳ್ಳಲಾರದ ಶ್ರೀಗಳು ದಲಿತ ಪ್ರೀತಿಯನ್ನು ತೋರಿಸಲು ಈ ಮಾರ್ಗ ಹಿಡಿದಿದ್ದಾರೆ ಎನ್ನುವ ಆರೋಪದಲ್ಲಿ ಹುರುಳು ಇರಬಹುದಾದರೂ, ಹಂತಹಂತವಾಗಿ ಸುಧಾರಣೆ ತರಲು ಇಚ್ಛಿಸಿದ್ದಾರೆ ಎಂದು ಪರಿಗಣಿಸುವುದು ಸೂಕ್ತ!

ಸಿರಿಗೆರೆ ಸ್ವಾಮಿಗಳು ಹೇಳಿದಾಗ 'ಚಪ್ಪಲಿ ಚಿಕಿತ್ಸೆ' ಅಂತ ಮೆರೆದಾಡುವವರು ಯಡ್ಯೂರಪ್ಪ ನಡವಳಿಕೆಯನ್ನು 'ಎಡಗೈ ಚಿಕಿತ್ಸೆ' ಎಂದು ಭಾವಿಸಿಲ್ಲ ಅನ್ನುವುದು ಊಹೆಗೂ ಸಿಲುಕದ ಪ್ರಶ್ನೆ ಆಗಿದೆ. ಎಡಗೈ ಆದರೇನು? ಬಲಗೈ ಆದರೇನು? ಕೈ ಅಂದರೆ ಕೈ. ಎರಡು ಕೈಗಳಲ್ಲಿ ಬಲಗೈ ಅಧಿಕ ಎಡಗೈ ಅಧಮವೆ? ಸಂಪ್ರದಾಯದಿಂದ ಬೆಳೆದು ನಿಂತಿರುವ ಈ ತಾರತಮ್ಯ ನೀತಿಯನ್ನು ಅಳಿಸುವುದಕ್ಕೆಂದೇ ಸನ್ಮಾನ್ಯರು ಹೀಗೆ ನಡೆದುಕೊಂಡರು ಎಂದು ಯಾಕೆ ಯೋಚಿಸುವುದಿಲ್ಲ? ದಲಿತರೇ ಗಮನಿಸಿ. ಎಡಗೈ ಬಲಗೈ ಎಂದು ಕಾದಾಡಬೇಡಿ. ಯಡ್ಯೂರಪ್ಪನವರ 'ಎಡಗೈ ಚಿಕಿತ್ಸೆ' ನೆನಪಿಡಿ!

ಆತ್ಮಹತ್ಯೆ ಮಾಡಿಕೊಂಡವ ರೈತನೇ ಅಲ್ಲ ಅಂದರೆ ಅದಕ್ಕೂ ಕೊಕ್ಕೆ ಹಾಕುತ್ತಾರೆ. ಬಿತ್ತನೆ ಬೀಜ, ಸೀಮೆಗೊಬ್ಬರ ಅಭಾವಕ್ಕೆ ಕೇಂದ್ರ ಸರ್ಕಾರವೇ ಕಾರಣ ಅಂತ ಸಾರಿಸಾರಿ ಹೇಳಿದರೂ ಇಲ್ಲವಂತೆ. ಅವರ ಸರ್ಕಾರವೇ ಕಾರಣ, ಅನನುಭವನೇ ಕಾರಣ ಅಂತೆಲ್ಲ ಮೂದಲಿಸುತ್ತಾರೆ. 'ಐದು ನೂರು ಕೋಟಿ ರೂಪಾಯಿನ ಡಿಮ್ಯಾಂಡ್ ಡ್ರಾಫ್ಟ್ ಕೊಡ್ತೀನಿ ಹೋಗಿ ರಸಗೊಬ್ಬರ ತನ್ನಿ' ಅಂತ ಚಾಲೆಂಜ್ ಹಾಕಿದರೆ 'ನೀವಿರೋದು ಯಾಕೆ?' ಅಂತಾರೆ. ಕೈಲಾಗದವ ಇನ್ನೇನು ಮಾಡ್ತಾರೆ ಹೇಳಿ! ವಿರೋಧಿಗಳ ಭಂಡತನದಿಂದ ಬೇಸತ್ತ ಯಡ್ಯೂರಪ್ಪನವರು 'ರಸಗೊಬ್ಬರ ಬಿತ್ತನೆ ಬೀಜ ಆಕಾಶದಿಂದ ಉದುರಿಸೋಕೆ ನನ್ನ ಹತ್ತಿರವೇನು ಮಂತ್ರದಂಡ ಇದೆಯಾ' ಅಂತ ಅಬ್ಬರಿಸಿದರೆ... 'ಮಂತ್ರದಂಡ ಇಲ್ಲ ನಿಜ. ಆದರೆ ಮಠಾಧೀಶರು ಇದ್ದಾರೆ, ಹೋಮಹವನ ಮಾಡಲು ಪ್ರಚಂಡ ಪಂಡಿತರಿದ್ದಾರೆ, ಪೂಜೆ ಪುನಸ್ಕಾರಕ್ಕೆ ಪೂಜಾರಿಗಳಿದ್ದಾರೆ. ಅವರಿಗೆ ಹೇಳಿ ಆಕಾಶದಿಂದ ಉದುರಿಸಬಹುದಲ್ಲಾ... ಅದೂ ಆಗಲ್ವಾ.... ಅವರ ಮೇಲಿದ್ದ ನಂಬಿಕೆ ಆಗಲೇ ಹೊರಟೇ ಹೋಯಿತಾ' ಅಂತ ಚುಚ್ಚಚುಚ್ಚಿ ಹಿಂಸೆ ಕೊಡ್ತಾರೆ.

## ಅಣಕ

ಎಚ್.ಎಲ್. ಕೇಶವಮೂರ್ತಿ

ಹೀಗೆಲ್ಲ ಅಪದ್ಧ ನುಡೀತಾ ಇದ್ದರೆ ಯಾರಿಗೆ ಸಿಟ್ಟು ಬರೋಲ್ಲ ಹೇಳಿ. ಈ ನಡುವೆಯೂ ಕೆಲವು ನೆಚ್ಚಿಗಿನ ಸಂಗತಿಗಳು ನಡೆಯುತ್ತಿರುವುದೇ ಸಮಾಧಾನ.

### ನಾಯ್ಡು ಪುರಾಣ

ಯಡ್ಯೂರಪ್ಪನವರನ್ನು ಕುರ್ಚಿಹೀನರನ್ನಾಗಿ ಮಾಡಲು ನಡೆಯುತ್ತಿರುವ ಷಡ್ಯಂತ್ರಗಳಿಂದ ಬೆಚ್ಚಿ ಬಿದ್ದರು ಕಟ್ಟಾಸುಬ್ರಹ್ಮಣ್ಯ ನಾಯ್ಡು. 'ವಾಳ್ಳೇ ಪೋತೆ ನಾನೆಕ್ಕ' ಅಂದುಕೊಂಡ ಶ್ರೀಯುತರು ಅವರ ತನ್ಮೂಲಕ ತಮ್ಮ ಕುರ್ಚಿ ಭದ್ರಪಡಿಸಲು ತಮ್ಮ ಕಚೇರಿಯ ಉದ್ಘಾಟನೆಯನ್ನು ವೇದಘೋಷಗಳೊಂದಿಗೆ ನೆರವೇರಿಸಿದರು. ಮಂತ್ರಿಸಿದ ಅಕ್ಷತೆಕಾಳನ್ನು ಎರಚಿ ಪೂಜೆ ಮಾಡಿ ಪೀಠವನ್ನಲಂಕರಿಸಿದರು. ನಾಯ್ಡು ದಂಪತಿಗಳು ನವವಧುವರರಂತೆ ಹಾರಬದಲಾಯಿಸಿದರು. ಅದೂ ಎಂತಹ ವೇಷದಲ್ಲಿ

ರಿಕುದು ಬರುವಾಗ ಅಂಗೆ ನಮ್ಮ ಸೋಬ ಕರಂದ್ಲಾಜೆ
ವ್ನ ಮಾತಾಡಿಸಿಗಂಡು ಬಂದೆ ಕಣಕ್ಕ. ಹತ್ತರದಿಂದ
ವಕ್ಕೆ ರಿಯಲಿ ಬ್ಯುಟಿಫುಲ್ ಕಣಕ್ಕ ಅವುಳು."

"ಅಷ್ಟು ಚೆನಾಗಿದ್ದಳೆ?"

"ಬೈಜಿಕಲಿ ಆ ಕಾಲದಲ್ಲಿ ನಮ್ಮ ಈರೋಯಿನ್
ತಿ ಇದ್ದಲ್ಲ ಆ ತರ ಕಾಣ್ತಾಳೆ. ಅವುಳು ಮಾತಾಡ್ತಾಯಿದ್ರೆ
ಕೇಳಿಕಂಡು ಅವುಳತ್ತನೇ ಕುಂತಿರನಾ ಅನ್ನುಸ್ತಾ
ಕಣಕ್ಕ."

"ಮತ್ತಲ್ಲೆ ಇರಿವಾ. ಇಲ್ಲಿಗ್ಯಾಕ್ ಬಂದೆ?"

"ನಾನೇನಾರ ದಕ್ಷಿಣ ಕನ್ನಡದೋನೆ ಆಗಿದ್ರೆ ಅವುಳ
ಆಯ್ತಿದ್ದೆ ಕಣಕ್ಕ. ರಿಯಲಿ, ಸಿಕ್ಕಸ್ ಬ್ಯುಟಿಫುಲ್."

"ಅಟೊಂತರ ಹೊಗಳತಿಯಲ್ಲ, ದುಡ್ಡುಗಿಡ್ಡು
ಕ್ಲೇನ್ನ?"

"ದುಡ್ಡೀಸಗಂಡು ಹೊಗಳಕ್ಕೆ ನಾನೇನು ಪತ್ರಕರ್ತನೇನಕ್ಕ!
ಯುಡವಟ್ ಎಡೂರಪ್ಪ ಮಾಡಿರೋ ಒಂದೇ ಒಂದು
ಕ್ಕಲ್ಸ ಅಂದ್ರೆ ಸೋಬ ಕರಂದ್ಲಾಜೆ ಮುಂದಕೆ ತಂದು
ತ್ರಿ ಹೂಡಿರದು ಕಣಕ್ಕ. ರಿಯಲ್ಲಿ ವೆರಿಗುಡ್ ಸೆಲೆಕ್ಸನ್.
ರಪ್ಪನ ಸಂಪುಟ ನೋಡಿದ್ರೆ ವಾಕರಿಕೆ ಬತ್ತದೆ.
ಟೈವಂಲ್ಲಿ ಕರಂದ್ಲಾಜೆ ನೋಡಿದ್ರೆ
ಧಾನವಾಯ್ತದೆ."

"ಸರಿ, ಏನಂದ್ಲು ಹೇಳ್ಳ?"

"ನಮ್ಮೂರಿಗೆ ವಳ್ಳೆ ನೀರು ಕೊಡ್ತಳಂತೆ, ಕಕ್ಕಸ್
ಕಟ್ಟಿಸಿ ಕೊಡ್ತಳಂತೆ."

"ವಳ್ಳೆ ನೀರೆಲ್ಲಿಂದ ತಂದು ಸುರದಳಂತೆ?" ಎಂದ
ತನ್ನೂರಿನ ನೀರೆ ಶ್ರೇಷ್ಠ ಎನ್ನುವಂತೆ ಕುಂತಲ್ಲೇ
ರಿದ.

"ಏನಪ್ಪ ಯಲ್ಲಾರಿಗೂ ವಳ್ಳೆ ನೀರು, ವಳ್ಳೆ ಕಕ್ಕಸ್
ತ್ತಳಂತೆ. ಅಂಗಂತ ಹೇಳಿದ್ಲು, ನಾನು ಒಂದು ಸತಿ
ೂರಿಗೆ ಬಾರಕ್ಕ, ನಿನ್ನಂಗೆ ನಮ್ಮೂರಲ್ಲಿ ಜುಮ್ಮಕ್ಕ
ಅವುಳೆ. ಅವುಳ ಪರಿಚಯ ಮಾಡಿಕೊಡ್ತಿನಿ ಅಂತ
ಬಂದೆ."

"ಹಿಂಗೂ ಸುಳ್ಳೇಳತರ್ಲ?"

■

ೇರಿ. ನಾಯ್ಡುಗಾರು ತಮ್ಮ ಬಿಳಿ ಟೋಪಿಯ ಮೇಲೆ
ಪೇಟ ಕಟ್ಟಿ! ಎಂತಹ ಅದ್ಭುತ ನೋಟ ಅದು!
ಂಡಿಯೊಂದಿಗೆ ನೋಡಲು ಎರಡೂ ಕಣ್ಣೂ ಸಾಲದ
ಟ! ಎಲ್ಲೆಲ್ಲೂ ಸಂಭ್ರಮ, ಸಡಗರ ತುಳುಕಾಡುತ್ತಿತ್ತು.
ನ್ನು ಸಹಿಸಲಾರದ ಜನ ಇದಕ್ಕೂ ಕೊಂಕು ಆಡ್ತಾರೆ.
ಯ್ಡುಗಾರು ಚರ್ಮ ಗಟ್ಟಿ! ಇಂತಹವಕ್ಕೆಲ್ಲ ಕೇರೇ
ಡಲ್ಲ. 'ಹೀಗೆ ಹೇಳುವ ಯಾವ ಕಾಂಗ್ರೆಸಿಗರು
ಯಲ್ಲಿ ಪೂಜೆ ಮಾಡಲ್ಲ ಅವರು ನನ್ನೆದುರು ಬಂದು
ು' ಅಂತ ಸವಾಲನ್ನೇ ಎಸೆದರು. ಯಾರಿಗೆ
ಹವರನ್ನು ಎದುರಿಸುವ ಎದೆಗಾರಿಕೆ! ಅಲ್ಲಾ ಆದೆಲ್ಲ
ಾಗಿ ಹೋಗಲಿ ಅಂದರೆ ಸರ್ಕಾರಿ ಖರ್ಚಿನಲ್ಲೇ
ವೇನೂ ರಿನ್ಯೂ ಮಾಡಿಕೊಂಡರಲ್ಲಾ... ಇನ್ನು
ದೆ ಮಕ್ಕಳ ಮದುವೆ, ಬಾಣಂತನವೂ ಹೀಗೆ....!

### ಪದ್ಮ ಪ್ರಸಂಗ

ೖೆತರ ಆತ್ಮಹತ್ಯೆ ದೈನಿಕ ಕಥಾ ಧಾರಾವಾಹಿ ಆಗಿದೆ.
ಟಿವಿ ಧಾರಾವಾಹಿಂಗಳಿಗೆ ಮಧ್ಯೆ ಎರಡು ದಿನ ಬಿಡುವು
ಆತ್ಮಹತ್ಯೆ ನಿರಂತರ! ಈ ನಡುವೆ ವಿಧಾನಸಭೆ
ೇಶನ. ದಢ್ಣ ಮುಂಡೇವು ರಸಗೊಬ್ಬರ, ಬಿತ್ತನೆ
ಕ್ಕೇ ಜೋತುಬಿದ್ರೊ.

ರಣಿ ಆತ್ಮಹತ್ಯೆ ನಡೆಯದೇ ಇದ್ದರೆ?

ಪದ್ಮಪ್ರಿಯ ಪ್ರಕರಣ ಜಗ್ಗಾಡುತ್ತಿದ್ರೊ!

ಾರ್ಣಾಯಕ ಹಂತ ತಲುಪಿದ್ದರೆ ಕುರ್ಚಿಗೇ ಕುತ್ತು!

ಕ್ಷದ ಶಾಸಕರ ಪತ್ನಿ ಆಕೆ. ಹೆಂಡತಿ ಕಾಣೆಯಾಗಿ
ರು ದಿವಸ ಆದ ಸುದ್ದಿ ತಿಳಿದರೂ ಶಾಸಕರಿಗೆ
ಬಿಡುವೇ ಇರಲಿಲ್ಲ, ಸಾರ್ವಜನಿಕ ಸೇವಕರು
ಡಿ. ಜನಸೇವೆಯೋ ಜನಾರ್ದನ ಸೇವೆ ಅಂತ
ೋರು. ಪೊಲೀಸರಿಗೆ ದೂರೇ ನೀಡಲಿಲ್ಲ!

ನ್ನು ಗೃಹಮಂತ್ರಿ ವೈದ್ಯರು. ನೇಣುಬಿಗಿದ ಶವ
ದ ತಕ್ಷಣ ಹೇಳಿದರು– 'ಇದು ಕೊಲೆ ಅಲ್ಲ,
ತ್ಯೆ!' ಶವಪರೀಕ್ಷಾ ವರದಿ ಬರುವ ಮುನ್ನವೇ
ತೀರ್ಪು!

ಾ ಎಂತಹ ದಕ್ಷತೆ!

ದಕ್ಷತೆಯ ಪರಿಣಾಮ ಕುರ್ಚಿ ಉರುಳುವ
ಇತ್ತು! ಆದರೆ ವಿರೋಧ ಪಕ್ಷ ರಸಗೊಬ್ಬರಕ್ಕೇ
ಹಾಕಿಕೊಂಡಿತ್ತು!

■

## ಮರೆಯುವ ಮುನ್ನ



■ ಪಿ. ಲಂಕೇಶ್ -ಸೆಪ್ಟೆಂಬರ್ 23, 1990

# ಅಂಕೆ ಇಲ್ಲದ ಉತ್ಸಾಹ

ಒಬ್ಬ ಹುಚ್ಚನಿದ್ದಾನೆ; ಈತನ ಹುಚ್ಚು ಕನ್ನಡಕ್ಕಾಗಿಯಾಗಲಿ, ತಾಯ್ನಾಡಿನ ರಕ್ಷಣೆಗಾಗಲೀ ಅಲ್ಲ. ಅಂಕಿಗಳ ಬಗ್ಗೆ ಕೊರೆಯುತ್ತಿರುತ್ತಾನೆ. ನಾನು ಕೆಲವು ತಿಂಗಳುಗಳ ಹಿಂದೆ ಶೇಕ್ಸ್‌ಪಿಯರ್ ಸೆಮಿನಾರಿಗೆ ಹೋಗಿದ್ದಾಗ ಅಲ್ಲಿಯ ಮೊಗಸಾಲೆಯಲ್ಲಿ ಸಿಕ್ಕು ನಿಜಕ್ಕೂ ನನ್ನ ಗುಂಡಿ ಹಿಡಿದುಕೊಂಡ, ಪ್ರಾಣ ಹೋಗುತ್ತಿರುವವನಂತೆ, "ನೋಡಿ, ಈ ಪತ್ರಿಕೆಯಲ್ಲಿ ಕನ್ನಡದ ಅಂಕಿ ಹಾಕುತ್ತಿದ್ದಾರೆ, ಈ ಕರಪತ್ರದಲ್ಲಿ ಹಾಕುತ್ತಿದ್ದಾರೆ. ನೀವೂ ನಿಮ್ಮ ಪತ್ರಿಕೆಯಲ್ಲಿ ಕನ್ನಡದ ಅಂಕಿ ಬಳಸಿ, ಇಂಗ್ಲಿಷ್ ಅಂಕಿ ಹಾಕಬೇಡಿ" ಅಂದ.

"ಅದೇನು ಅಂಥ ದೊಡ್ಡ ವಿಷಯವಲ್ಲ, ಬೇಕಾದರೆ ಹಾಕೋಣ. ಆದರೆ ಇಡೀ ಜಗತ್ತು ಬಳಸುತ್ತಿರುವ ಅಂಕಿಗಳು ಇಂಗ್ಲಿಷ್ ಅಲ್ಲ, ಫ್ರೆಂಚ್ ಅಲ್ಲ, ಅವು ರೋಮನ್ ಕೂಡ ಅಲ್ಲ, ಅರೇಬಿಯಾ, ಹಿಂದೂ ಮೂಲದ ಈ ಅಂಕಿಗಳನ್ನು ಜಗತ್ತಿನ ಎಲ್ಲ ಪುಸ್ತಕಗಳಲ್ಲಿ, ಕಾರ್‌ಪ್ಲೇಟ್‌ಗಳಲ್ಲಿ, ಮೈಲಿಕಲ್ಲುಗಳಲ್ಲಿ ಬಳಸಲಾಗುತ್ತಿದೆ. ಈ ಅರೇಬಿಕ್-ಹಿಂದೂ ಅಂಕಿ ಈಗ ಅಂತರ್‌ರಾಷ್ಟ್ರೀಯ ಸ್ವತ್ತು, ನಿಜಕ್ಕೂ ವಿಶ್ವಭಾಷೆ. ನಮ್ಮ ಪತ್ರಿಕೆಯಲ್ಲಿ ದಿನಾಂಕ, ಫೋನ್ ನಂಬರ್ ಆದರೂ ನಮ್ಮ ಭಾಷೆ ತಿಳಿಯದವರಿಗೆ ಗೊತ್ತಾಗಲಿ ಎಂದು ಬಳಸುತ್ತಿದ್ದೇವೆ; ಇದರಿಂದ ಕನ್ನಡಕ್ಕೇನೂ ಅನ್ಯಾಯವಾಗುವುದಿಲ್ಲ" ಅಂದೆ.

ಇಷ್ಟರಿಂದ ನಮ್ಮ ಕನ್ನಡ ಅಂಕಿಗಳೇನೂ ಮರೆತುಹೋಗುವುದಿಲ್ಲ, ಕನ್ನಡದ ಅಭಿಮಾನ ವಿಶ್ವಭಾಷೆಯ ಸವಲತ್ತು ಪಡೆದು ಬೆಳೆದರೆ ಒಳ್ಳೆಯದಲ್ಲವೆ? ಇಂಥ ವಿಷಯಕ್ಕಾಗಿ ಗಂಟೆಗಟ್ಟಲೆ ಜನರನ್ನು ಹಿಡಿದು ಕೊರೆಯುವ ಆಸಾಮಿ ಹುಚ್ಚನಲ್ಲ ಎಂದು ಹೇಳಬಹುದೆ?

## ಇಂಗ್ಲಿಷ್, ಆತ್ಮಗೌರವ



ಇಂಗ್ಲಿಷ್ ಭಾಷೆ ಅರಿತೂ ನಮ್ಮ ಆತ್ಮಗೌರವ ಕಾಪಾಡಿಕೊಳ್ಳುವುದು ಮುಖ್ಯ. ಆಡಳಿತಗಾರರ ಭಾಷೆಯಾಗಿದ್ದ ಇಂಗ್ಲಿಷ್ ಅನೇಕ ಸವಲತ್ತುಗಳಿಗೆ ರಹದಾರಿಯಾಯಿತು. ಈಗ ಆಡಳಿತ ಭಾಷೆಯಾಗಿರದೇ ಫ್ರೆಂಚ್, ಸ್ಪಾನಿಷ್ ಮುಂತಾದ ಭಾಷೆಗಳ ಜೊತೆಗೇ ಇದು ಇನ್ನೂ ಹೆಚ್ಚಿನ ನೆರವು ನೀಡುವುದು ಸಾಧ್ಯವಿದೆ. ಆದರೆ ಭಾರತ ಈಗ ಇಕ್ಕಟ್ಟಿನಲ್ಲಿದೆ. ಇಂಗ್ಲಿಷ್ ಭಾಷೆಯನ್ನು ಕಲಿಸಲು ಬೇಕಾದಷ್ಟು ಜನ ಇಂಗ್ಲಿಷ್ ಅಧ್ಯಾಪಕರಿಲ್ಲ; ಆದರೂ ಲಕ್ಷಾಂತರ ಜನ ಅಷ್ಟಿಷ್ಟು ಇಂಗ್ಲಿಷ್ ಬಲ್ಲವರಿದ್ದಾರೆ, ಅಧ್ಯಾಪಕರಿದ್ದಾರೆ. ಕಳೆದ ಇನ್ನೂರು ವರ್ಷದಿಂದ ಕೋಟ್ಯಂತರ ಹಣವನ್ನು ಇಂಗ್ಲಿಷ್ ಕಲಿಕೆಗಾಗಿ ಖರ್ಚು ಮಾಡಿರುವ ಭಾರತ ಈಗ ಇಂಗ್ಲಿಷ್ ಪೂರ್ತಿ ಬಿಟ್ಟು ಬೇರೆ ಭಾಷೆಗಳನ್ನು ಶುರು ಮಾಡಿದರೆ ಅದಕ್ಕೆ ಹತ್ತರಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಒಂದು ಕಡೆ ಸಾಕಷ್ಟು ಇಂಗ್ಲಿಷ್ ಅಧ್ಯಾಪಕರಿಲ್ಲದೆ ತೊಂದರೆಯಾಗಿದೆ, ಇನ್ನೊಂದು ಕಡೆ ಈಗ ಕಲಿಯುತ್ತಿರುವ ಎಲ್ಲರಿಗೆ ಇಂಗ್ಲಿಷ್ ಕಲಿಸುವುದು ಮೂರ್ಖತನವೆನ್ನುವಷ್ಟು ಸಮಸ್ಯೆ ಕಠಿಣವಾಗಿದೆ.

ಈ ನಡುವೆ ಕರ್ನಾಟಕದಲ್ಲಿ ಕನ್ನಡದ ಸ್ಥಿತಿ ವ್ಯಥೆ ಹುಟ್ಟಿಸುವಂತಿದೆ. ನಮ್ಮನ್ನು ಬೆಚ್ಚಿಬೀಳಿಸುವ ಸಂಗತಿ ಏನೆಂದರೆ ಇವತ್ತು ಇಡೀ ದಕ್ಷಿಣ ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವುದು ಕರ್ನಾಟಕದಲ್ಲಿನ ಇಂಗ್ಲಿಷ್ ಪತ್ರಿಕೋದ್ಯಮ; ಕನ್ನಡ ಪತ್ರಿಕೋದ್ಯಮ ಉಡುಗಿಹೋಗುತ್ತಿದೆ. ಕಳೆದ ಇಪ್ಪತ್ತೈದು ವರ್ಷದಲ್ಲಿ ಕನ್ನಡದ ದಿನಪತ್ರಿಕೆಗಳು ಐವತ್ತು ಸಾವಿರದಿಂದ ಕೇವಲ ಎರಡು ಮೂರು ಲಕ್ಷದ ಪ್ರಸಾರ ತಲುಪಿದೆ; ಇಲ್ಲಿ ಪ್ರಕಟವಾಗುವ ಇಂಗ್ಲಿಷ್ ಪತ್ರಿಕೆಗಳು ಮತ್ತು ಹೊರಗಿನಿಂದ ಬಂದು ಮಾರಾಟವಾಗುವ ಇಂಗ್ಲಿಷ್ ಪತ್ರಿಕೆಗಳು ಹದಿನೈದು ಪಟ್ಟು ಹೆಚ್ಚಿವೆ. ಕನ್ನಡ ಪತ್ರಿಕೋದ್ಯಮ ಪ್ರಸಾರ, ಉದ್ಯೋಗ ಎರಡು ದೃಷ್ಟಿಯಿಂದ ಬೆಳೆಯುತ್ತಿಲ್ಲ.

ಪತ್ರಿಕೋದ್ಯಮ ಸಾಂಕೇತಿಕ ಮಾತ್ರ. ಕನ್ನಡ ಸಾಹಿತ್ಯ, ತಾಂತ್ರಿಕ ಪುಸ್ತಕಗಳು ಕೂಡ ಕಣ್ಣು ಕೋರೈಸುವಷ್ಟು ಅರ್ಥಪೂರ್ಣವಾಗಿಲ್ಲ. ಸುಶಿಕ್ಷಿತ ಎರಡನೆಯ ಜನಾಂಗ ಇಂಗ್ಲಿಷ್, ಕಂಪ್ಯೂಟರ್ ಪಾಲಾಗುತ್ತಿದೆ. ನಿಜಕ್ಕೂ ವ್ಯಸನ ಹುಟ್ಟಿಸುವ ಸಂಗತಿ.

## ಇದು ಯಾವ ಭಾಷೆ?

ಕನ್ನಡ ಅಭಿಮಾನ ಇನ್ನೂ ಆಳಕ್ಕೆ ಹೋಗಿ ಬೆಳೆಯಬೇಕಾಗಿದೆ. ನೆಹರೂ ಇದ್ದಾಗ ಒಮ್ಮೆ ಲೋಕಸಭೆಗೆ ಹೋಗಿ ಭಾಷಣಗಳನ್ನು ಕೇಳುತ್ತ ಕುಳಿತಿದ್ದ ಇಂಗ್ಲಿಷ್ ಪತ್ರಕರ್ತ ಮ್ಯಾಲ್ಕಂ ಮಗರಿಜ್ ಅಲ್ಲಿ ಸದಸ್ಯರು ಮಾತಾಡುತ್ತಿದ್ದ ಭಾಷೆ ಯಾವುದೆಂದು ತಿಳಿಯದೆ ದಂಗಾದ. ನೆಹರೂ ತಮ್ಮ ಭಾಷಣ ಮಾಡತೊಡಗಿದಾಗ, "ಇದು ಇಂಗ್ಲಿಷ್" ಎಂದುಕೊಂಡ, ಆದರೆ ನಿಜಕ್ಕೂ ನೆಹರೂಗಿಂತ ಮುಂಚೆ ಮಾತಾಡಿದ್ದವರೂ ಇಂಗ್ಲಿಷ್‌ನಲ್ಲಿ ಮಾತಾಡಿದ್ದರು. ಅವರ ಇಂಗ್ಲಿಷ್ ಪಕ್ಕಾ ಇಂಗ್ಲಿಷ್‌ಮನ್, ಮಗರಿಜ್‌ಗೂ ಅರ್ಥವಾಗಿರಲಿಲ್ಲ.

ವಿಚಿತ್ರವೆಂದರೆ, ಭಾರತೀಯರು ಇಂಗ್ಲಿಷ್ ವಿಷಯದಲ್ಲಿ ಸ್ವಾಭಿಮಾನವನ್ನೇ ಕಳೆದುಕೊಂಡ ಜನ. ಇಂಗ್ಲಿಷ್ ನೀಡುವ ವೈಚಾರಿಕತೆ, ಸವಲತ್ತು ಪುಸ್ತಕಜ್ಞಾನ, ಸ್ಥಾನಮಾನಗಳೆಲ್ಲ ಇಂಗ್ಲಿಷ್ "ವರ್ಗ"ವನ್ನೇ ಸೃಷ್ಟಿಸಿವೆ. ಈ ವರ್ಗಕ್ಕೆ ನನ್ನ ಕೆಳಗಿನ ಮಾತು ವಿಚಿತ್ರವಾಗಿ ಕಾಣಿಸಬಹುದು.

ಜರ್ಮನಿಯ ಛಾನ್ಸಲರ್ ಕೋಹ್ಲ್ ಅಥವಾ ಫ್ರಾನ್ಸಿನ ಅಧ್ಯಕ್ಷ ಮಿತೆರಾ ತಮಗೆ ಇಂಗ್ಲಿಷ್ ಗೊತ್ತಿದ್ದರೂ ಇಂಗ್ಲಿಷ್ ಬಲ್ಲವರೊಂದಿಗೆ ಇಂಗ್ಲಿಷ್‌ನಲ್ಲಿ ಮಾತಾಡುವುದಿಲ್ಲ. ಇದಕ್ಕೆ ಸಣ್ಣ ಕಾರಣ ಅವರ ಸ್ವಭಾಷಾಭಿಮಾನ; ಬಿಟ್ಟುಕೊಡಲಾಗದ ಸಾಂಸ್ಕೃತಿಕ ಪ್ರತಿಷ್ಠೆ. ನನಗನ್ನಿಸುವಂತೆ ಇದಕ್ಕಿಂತ ಮುಖ್ಯ ಕಾರಣ ಪರಭಾಷೆಯನ್ನು ಆಡುವಾಗ ತಲೆದೋರಬಹುದಾದ ಉಚ್ಚಾರ, ವ್ಯಾಕರಣದ ದೋಷದಿಂದ ಆಗುವ ಅವಮಾನ. ಒಬ್ಬ ಸಹಜ, ನಾಗರಿಕ ವ್ಯಕ್ತಿ ಅನುಭವಿಸುವ ಸಂಕೋಚ ಇದು. ಇದು ನಿಮಗೆ ಗೊತ್ತಾಗುವುದು ಇಂಗ್ಲಿಷ್ ಹುಡುಗನೊಬ್ಬ ಇಂಗ್ಲೆಂಡ್‌ನಲ್ಲಿ ಕನ್ನಡ ಕಲಿತು ಕುವೆಂಪು ನಾಟಕ ಆಡಿದ್ದನ್ನು ಕಲ್ಪಿಸಿಕೊಂಡರೆ; ಅದು ಊಹಿಸಿಕೊಳ್ಳುವುದಕ್ಕೂ ಆಗದಷ್ಟು ಹಾಸ್ಯಾಸ್ಪದವಾಗಿರುತ್ತದೆ. ಹಾಗೆಯೇ ಇಲ್ಲಿ ಇಂಗ್ಲಿಷ್ ಕಲಿತವರು ಇಂಗ್ಲಿಷ್ ನಾಟಕವನ್ನು ಇಲ್ಲಿ ಆಡಿದರೂ ಅಷ್ಟೇ ಹಾಸ್ಯಾಸ್ಪದವಾಗಿರುತ್ತವೆ. ಈ ಮಾನಭಂಗವನ್ನು ಅನುಭವಿಸದಷ್ಟೂ ಭಂಡರಾದವರು ಸಾಂಸ್ಕೃತಿಕವಾಗಿ ಅಪಾಯಕಾರಿಯಾಗಿರುತ್ತಾರೆ. ಆತ್ಮಗೌರವ ಎಂಬುದನ್ನು ಬೈಬಲ್ ಮಾತು ಮನವರಿಕೆ ಮಾಡಿಕೊಡುತ್ತದೆ. ಮನುಷ್ಯ ಬ್ರೆಡ್‌ನಿಂದ ಮಾತ್ರ ಬದುಕುವುದಿಲ್ಲ.

■

# ಪದ್ಮಿನಿಯರ ಸ್ವಗತ

ನನಗೆ ಸಿಕ್ಕ ನೀನು
ನಾ ಬಯಸಿದ
ನೀನಾಗಿರಲಿಲ್ಲ
ಬಯಸಿದಂತೇ ಇದ್ದ
ಅವನು
ನೀನಲ್ಲವಲ್ಲ

ಬೇಕಾದ ನೀನು ಸಿಕ್ಕಾಗ
ನಾನು ನಾನಾಗದೇ
ಅವನ ಬೆವರ ಹನಿಯಾಗಿದ್ದೆ,
ಬಯಕೆ ಇತ್ತ
ಚಿತ್ತ ಅತ್ತ
ಬದುಕು ಎತ್ತ?

ನಾನು ಅದಾವ ಪೂರ್ಣತೆ ಬಯಸಿ
ಶೂನ್ಯಕ್ಕೆ ಹೆಜ್ಜೆಯನಿಟ್ಟೆ?
ದಾಹಿ ದೇಹಿ ಎನ್ನುತ್ತ
ಮೃಗಜಲದ ಬೆನ್ನತ್ತಿ
ಯಾವ ದಾರಿಯ ಹಿಡಿದೆ?
ಹುಡುಕಾಟದ ಹುಚ್ಚು ನಡೆಯಲಿ
ಕಾಲ ಕೈ ಜಾರಿ
ಸಿಕ್ಕಿದ್ದು ಕೈಗೆಟುಕಲಿಲ್ಲ
ಕಳಕೊಂಡೆ ಯಾವಾಗ?

ಬಹುರೂಪಿ ಮನಕೆ
ಕಾಮನೆಗಳ ತುಲಾಭಾರ
ನಿಂತಲ್ಲಿ ನಿಲಲಾರದೆ
ತುಯ್ಯುತಿದೆ ನೀತಿ ಮುಳ್ಳು
ಕಟ್ಟಳೆಯ ಗಡಿರೇಖೆ
ದಾಟಿ ಹಾರಿದೆ ಮನಸು



■ ಡಾ. ಅನುಪಮಾ ಎಚ್.ಎಸ್.




## ಅಮೆರಿಕಾ ಎಲೆಕ್ಷನ್‌ನಲ್ಲಿ ಸಿಂಧ್ಯಾ ಪ್ರಚಾರ

ಕರ್ನಾಟಕ ರಾಜಕೀಯದಲ್ಲಿ ತಮಾಷೆ ಘಟನೆಗಳಿಗೆ ಕೊರತೆಯೇ ಇಲ್ಲ. ಪಿ.ಜಿ.ಆರ್. ಸಿಂಧ್ಯಾ ಇದಕ್ಕೆ ಲೇಟೆಸ್ಟ್ ಉದಾಹರಣೆ.

ಬಹುಜನ ಸಮಾಜ ಪಕ್ಷವೆಂಬ ಕಡಿಮೆ ಜನ ಇರುವ ಪಕ್ಷದವರು ಈಗ ಸಿಂಧ್ಯಾರನ್ನು ಪಾರ್ಟಿಯಿಂದ ಉಚ್ಚಾಟಿಸಿದ್ದಾರೆ. ಮಜಾ ಅಂದರೆ ತನ್ನನ್ನೇಕೆ ಹೊರಹಾಕಿಸಿದರೂಂತ ಸಿಂಧ್ಯಾಗೆ ಗೊತ್ತಿರಲಿಲ್ಲವಂತೆ. ಅಂದರೆ ಶೋಕಾಸ್ ನೋಟಿಸ್ ಕೊಡುವುದು, ಸಮಜಾಯಿಷಿ ಪಡೆದು ನಂತರ ತೀರ್ಮಾನ ಮಾಡುವುದು... ಇಂಥ ಫಾರ್ಮಾಲಿಟಿಗಳೆಲ್ಲಾ ಯಾವುದೂ ನಡೆಯದೆ ಸಿಂಧ್ಯಾರನ್ನ ಹೊರಹಾಕಲಾಗಿದೆ. ಬಿಎಸ್‌ಪಿಯೊಳಗೆ ಕಣಮಾತ್ರದಷ್ಟೂ ಆಂತರಿಕ ಪ್ರಜಾಪ್ರಭುತ್ವ ಇಲ್ಲ ಎಂಬುದು ಇದರಿಂದ ಇನ್ನೊಮ್ಮೆ ಸಾಬೀತಾಗಿದೆ.

ಅಲ್ಲಿ ಮಾಯಾವತಿ ಅಕ್ಷರಶಃ ಸರ್ವಾಧಿಕಾರಿಣಿ. ಬಿಎಸ್‌ಪಿಯ ಹಿಂದಿನ ಅಧ್ಯಕ್ಷ ಬಿ. ಗೋಪಾಲ್‌ರನ್ನು ಇದೇರೀತಿ ಹೇಳದೇಕೇಳದೇ ಪಾರ್ಟಿಯಿಂದ ಓಡಿಸಿ ಅವಮಾನ ಮಾಡಲಾಗಿತ್ತು.



ಅದಿರಲಿ 'ಮುಂದೇನು ಮಾಡುತ್ತೀರಿ' ಅಂತ ಪತ್ರಕರ್ತರು ಸಿಂಧ್ಯಾರನ್ನು ಕೇಳಿದರೆ 'ನಾನು ಅಮೆರಿಕಾಗೆ ಹೋಗಿ ಬರಾಕ್ ಒಬಾಮಾ ಪರ ಚುನಾವಣಾ ಪ್ರಚಾರ ಮಾಡ್ತೀನಿ' ಅಂದಿದ್ದಾರೆ ಸಿಂಧ್ಯಾ.

ಮೊನ್ನಿನ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ತನ್ನ ಕನಕಪುರ ಕ್ಷೇತ್ರದಲ್ಲೇ ಬಿಎಸ್‌ಪಿ ಪರ ಪ್ರಚಾರ ನಡೆಸದೆ ತಪ್ಪಿಸಿಕೊಂಡು ತಿರುಗಿದ ಸಿಂಧ್ಯಾ ಆಮೇಲೆ ಅದೇ ಕಾರಣದಿಂದಲೇ ಬಿಎಸ್‌ಪಿಯಿಂದ ಡಿಸ್‌ಮಿಸ್ ಆಗಿದ್ದಾರೆ. ಅಂತಹ ಶತಸೋಂಭೇರಿ ಈಗ ಅಮೆರಿಕಾಗೆ ಹೋಗಿ ಒಬಾಮಾ ಪರ ಪ್ರಚಾರ ಮಾಡುತ್ತಾರೆಂದರೆ ತಮಾಷೆ ಅನ್ನಿಸೊಲ್ಲವಾ?

ತನಗೆ ಸಂಬಂಧವಿರದ ದೇಶದ ಚುನಾವಣೆಯಲ್ಲಿ ಹೋಗಿ ಭಾಗವಹಿಸುತ್ತಿರುವ ವಿಶ್ವದ ಏಕೈಕ ರಾಜಕಾರಣಿ ಬಹುಶಃ ಈ ಸಿಂಧ್ಯಾರೇ ಇರಬೇಕು ಬಿಡಿ. ಅಂದಹಾಗೆ ಬಿಎಸ್‌ಪಿಯಿಂದ ಸಿಂಧ್ಯಾ ಉಚ್ಚಾಟನೆ ವಿಚಾರ ಕರ್ನಾಟಕದಲ್ಲೂ ಅಷ್ಟೇನು ಸುದ್ದಿಯಾಗಲಿಲ್ಲ, ಅದರ ಪರಿಣಾಮವೂ ಅಷ್ಟಿರುವುದಿಲ್ಲ.

ಪ್ರಜಾವಾಣಿಯ ಕಾರ್ಟೂನಿಸ್ಟ್ ಮಹಮ್ಮದ್ ಮಾತ್ರ ಒಂದು ಅದ್ಭುತ ಚಿತ್ರ ಬಿಡಿಸಿ ಇದೇ ಘಟನೆಗೆ ಸೊಗಸಾದ ವ್ಯಂಗ್ಯದ ಛಾಪು ಮೂಡಿಸಿದರು. ■

## ಜೀನಿಬಿ ಕತೆ

ಗುರು-ಶಿಷ್ಯ ಪರಂಪರೆ ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲೂ ಇದ್ದದ್ದೆ. ಆದರೆ ಈ ಜೀನಿಬಿ ಗುರು ಬೇರೆ ಗುರುಗಳಂತಲ್ಲ. ಈತನನ್ನು ಕುರಿತ ಸಣ್ಣಕತೆಗಳು ಎಲ್ಲಾ ಧರ್ಮ ಮತ್ತು ಸಂಸ್ಕೃತಿಯಿಂದ ಹೊಮ್ಮಿರುವಂತಹವು; ದೇವರು ಎಂಬ ಕಲ್ಪನೆ ಮತ ಎಂಬ ಸ್ಥಾವರವನ್ನು ಮೀರಿರುವಂತದ್ದು. ಚಿಂತನೆಗೆ ಹಚ್ಚುವ ಈ ಚುಟುಕು ಕತೆಗಳು ನಮ್ಮ ಓದುಗರಿಗೆ 'ದರವೇಶಿ ಕತೆ'ಗಳಷ್ಟೇ ಇಷ್ಟವಾಗುತ್ತದೆಂದು ನಂಬಿದ್ದೇವೆ. ಜೀನಿಬಿ ಕತೆಗಳನ್ನು ಪ್ರತೀವಾರ ಪ್ರಕಟಿಸಲಿದ್ದೇವೆ.

### ಅನನ್ಯತೆ

"ದೇವರೊಂದಿಗೆ ಏಕೀಭಾವ ಸಾಧಿಸುವುದು ಹೇಗೆ?'

"ನೀನು ಅದಕ್ಕೆಂದು ಪ್ರಯತ್ನಪಟ್ಟಷ್ಟೂ ದೇವರು ಮತ್ತು ನಿನ್ನ ನಡುವಿನ ಅಂತರ ಹೆಚ್ಚಾಗುತ್ತದೆ."

"ಹಾಗಾದರೆ ಈ ಅಂತರದ ಬಗ್ಗೆ ಏನು ಮಾಡಬೇಕು?"

"ಅಂತರವೇ ಇಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು."

"ಅಂದರೆ ನಾನು ಮತ್ತು ದೇವರು ಒಂದೇ ಎಂಬುದು ನಿಮ್ಮ ಅರ್ಥವೇ?"

"ಒಂದೇ ಅಲ್ಲ, ಬೇರೆ ಬೇರೆಯೂ ಅಲ್ಲ"


"ಅದು ಹೇಗೆ ಸಾಧ್ಯ?"

"ಸೂರ್ಯ ಮತ್ತು ಅದರ ಪ್ರಕಾಶ, ಸಮುದ್ರ ಮತ್ತು ಅದರ ಅಲೆ, ಹಾಡುಗಾರ ಮತ್ತಾತನ ಸಂಗೀತ... ಒಂದೇ ಅಲ್ಲ, ಬೇರೆ ಬೇರೆಯೂ ಅಲ್ಲ"



## ಪೇಪರ್‌ನಲ್ಲಿ ಹೋದ ಮಾನವೂ ವಾಪಸ್ ಬರಲ್ಲ ಭಟ್ಟರೇ!

ದಿನಾಂಕ 19, 2008(ಗುರುವಾರ)ದ 'ವಿಜಯಕರ್ನಾಟಕ'ದ 'ನೂರೆಂಟು ಮಾತು' ಅಂಕಣದಲ್ಲಿ ವಿಶ್ವೇಶ್ವರ ಭಟ್ 'ಟಿವಿ ಚಾನೆಲ್‌ನಲ್ಲಿ ಹೋದ ಮಾನ ವಾಪಸ್ ಬರುವುದಾ?' ಎಂದು ಪ್ರಶ್ನಿಸುತ್ತಾ ಟಿವಿ ಚಾನೆಲ್‌ಗಳ ಧಾವಂತದ ಬಗ್ಗೆ, ಜಡ್ಜ್‌ಮೆಂಟ್ ಪ್ರವೃತ್ತಿಯ ಬಗ್ಗೆ ಮತ್ತು ಬ್ರೇಕಿಂಗ್ ನ್ಯೂಸ್ ಬಗ್ಗೆ ಬರೆದಿದ್ದಾರೆ. ನಿಜಕ್ಕೂ ಭಟ್ಟರು ಆ ವಾರದ ಅಂಕಣಕ್ಕೆ ಒಳ್ಳೆಯ ಸಬ್ಜೆಕ್ಟ್ ಅನ್ನೇ ಆರಿಸಿಕೊಂಡಿದ್ದಾರೆ. ಲೇಖನದಲ್ಲಿ ದೃಶ್ಯ ಮಾಧ್ಯಮಗಳ ಬಗ್ಗೆ ಟೀಕೆ, ವ್ಯಂಗ್ಯ, ಸಲಹೆಗಳು ವ್ಯಕ್ತವಾಗಿವೆ, ಫೈನ್.



ಭಟ್ಟರು ತಮ್ಮ ಲೇಖನದಲ್ಲಿ ಉಡುಪಿ ಶಾಸಕರ ಪತ್ನಿ ಪದ್ಮಪ್ರಿಯಾರ ಆತ್ಮಹತ್ಯೆ ಪ್ರಕರಣವನ್ನು ಮಾಧ್ಯಮಗಳು ಬೇಕಾಬಿಟ್ಟಿ ವರದಿಮಾಡಿದ್ದೇ ಆಕೆಯ ಸಾವಿಗೆ ಕಾರಣವಾಯಿತೆಂದು ಹೇಳಲಾಗಿದೆ ಎಂದು ಅವರೇ ಬರೆದಿರುವುದರಿಂದ ಒಬ್ಬ ಸಂಪಾದಕರಾಗಿ ಭಟ್ಟರ ಪಾಲೂ (ನಿಗೂಢ ಸಾವಿನಲ್ಲಿ) ಇದೆ ಎಂದು ಅವರೇ ಒಪ್ಪಿಕೊಂಡಂತಾಗಿದೆ. ಇಲ್ಲಿ ಭಟ್ಟರು ಒಂದು ಪ್ರಶ್ನೆಗೆ ಉತ್ತರ ಕೊಡಬೇಕು; ಅದೆಂದರೆ 'ವಿ.ಕ.' ಪ್ರಕಟಣೆಗೆ ಹೋಗುವ ಮುನ್ನ ಅವರದನ್ನು ಓದುತ್ತಾರೆಯೇ ಅಥವಾ ಪ್ರಕಟಣೆಯ ನಂತರ ಓದುತ್ತಾರೆಯೇ ಎಂಬುದು. ಯಾಕೆಂದರೆ ಜಡ್ಜ್‌ಮೆಂಟ್ ಸೀಟಿನಲ್ಲಿ ಕುಳಿತು ಬರೆಯುವ ಭಟ್, ಒಬ್ಬ ಸಂಪಾದಕರಾಗಿ ಯಾಕೆ ಪತ್ರಿಕೆಯ ಮುಖಪುಟದಲ್ಲಿ 'ರಘುಪತಿ ಭಟ್ಟರ ಪ್ರೇಮ ಪ್ರಸಂಗ'ವನ್ನು ಪ್ರಕಟಿಸಿದರು? ನಿಗೂಢ ಸಾವಿಗೆ ಸಂಬಂಧಪಟ್ಟ ರೋಚಕ ಕಥೆಗಳನ್ನು ಬರೆಸಿದರು.

ಎಲ್ಲ ಮುಗಿದ ಬಳಿಕ 'ಸಂಹಿತೆ ಸಂಯಮ' ಎಂಬ ಹೊಸ ನೀತಿ ಸಂಹಿತೆ ಹಾಕಿಕೊಂಡರು? ನಟ ಗಣೇಶ್ ಮದುವೆಯ ಸುದ್ದಿಯನ್ನು ವೈಭವೀಕರಿಸಿ ಬರೆಯುವಾಗ ಭಟ್ಟರ ಸಂಯಮ ಸಂಹಿತೆ ಎಲ್ಲಿಗೆ ಹೋಗಿತ್ತು?

ಭಟ್‌ರಿಗೆ ತಿಳಿದಿರಲಿ; ಮುದ್ರಣ ಮಾಧ್ಯಮದ ಪತ್ರಕರ್ತರು ಮತ್ತು ದೃಶ್ಯ ಮಾಧ್ಯಮದ ಪತ್ರಕರ್ತರು ಹೆಚ್ಚಿನ ಸಂದರ್ಭದಲ್ಲಿ ಒಟ್ಟಿಗೆ ಕೆಲಸ ಮಾಡುವವರು. ಇವರ ಅವರ ಜೊತೆ ಮಾಹಿತಿ ಹಂಚಿಕೊಳ್ಳುವುದು ಇದ್ದೇ ಇದೆ. ಯಾರೋ ಚಾನಲ್ಲೊಂದರ ಹೆಸರು ಹೇಳಿದ ಮಾತ್ರಕ್ಕೆ ಭಟ್ಟರು ದೃಶ್ಯ ಮಾಧ್ಯಮದವರ ಮೇಲೆ ಗೂಬೆ ಕೂರಿಸುವುದು ಎಷ್ಟು ಸರಿ?

ಒಂದೊಮ್ಮೆ ವಿಶ್ವೇಶ್ವರ ಭಟ್ ತತ್ವಸಿದ್ಧಾಂತ ಇಟ್ಟುಕೊಂಡು ಸುದ್ದಿ ಪ್ರಕಟಿಸುವವರಾಗಿದ್ದರೆ, ಸಾರ್ವಜನಿಕ ವ್ಯಕ್ತಿಗಳ ಖಾಸಗಿ ಬದುಕಿನಲ್ಲಿ ಮೂಗು ತೂರಿಸಬಾರದು ಎಂಬ ನಿಜವಾದ ಕಾಳಜಿ ಇರುವವರಾಗಿದ್ದಾರೆ, ಪ್ರೇಮ ಪ್ರಸಂಗದಂತಹ ಕಥೆಗಳನ್ನು ಮುಖಪುಟದಲ್ಲಿ ಯಾಕೆ ಪ್ರಕಟಿಸಿದರು? 'ಪದ್ಮಪ್ರಿಯಾ ಮಾಲೂರಿನಲ್ಲಿ ಪತ್ತೆ' ಎಂಬ ಸುದ್ದಿಯನ್ನು ಯಾಕೆ ಕ್ರಾಸ್-ಚೆಕ್ ಮಾಡದೇ ಪ್ರಕಟಿಸಿದರು?


ಇನ್ನೂ ಟಿವಿ ಮತ್ತು ಪತ್ರಿಕೆಗಳು ಎರಡೂ ಜಾಹೀರಾತುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಡೆಯುವಂತಹವು. ಟಿವಿಗೆ ಟಿಆರ್‌ಪಿ ಬೇಕು- ಪತ್ರಿಕೆಗಳಿಗೆ ಪ್ರಸಾರ ಸಂಖ್ಯೆ ಹೆಚ್ಚಬೇಕು. ಇದನ್ನು ಭಟ್ಟರು ಒಪ್ಪಿಕೊಳ್ಳುತ್ತಾರೋ?

ಕೊನೆಯದಾಗಿ ಅವರೊಂದು ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕು; ನ್ಯೂಸ್ ಪೇಪರ್‌ನಲ್ಲಿ ಹೋದ ಮಾನವೂ ವಾಪಸ್ ಬಾರದು!

-ಓರ್ವ ಟಿವಿ ವರದಿಗಾರ

## ಹೊಗಳಿಕೆ

ಇತಿಹಾಸದಲ್ಲೇ ಬೀಜ ಗೊಬ್ಬರಕ್ಕಾಗಿ ರೈತರು ಪ್ರತಿಭಟನೆ ನಡೆಸಿದ ಉದಾಹರಣೆಗಳಿಲ್ಲ, ಈಗಿನ ಗಲಭೆಗಳಿಗೆ ವಿರೋಧ ಪಕ್ಷದವರೇ ನೇರ ಕಾರಣ ಎಂಬ ತಿಪ್ಪೆ ಸಾರಿಸುವ ಹೇಳಿಕೆ ನೀಡಿದ ಯಡ್ಡಿಗೆ ನಾಚಿಕೆಯಾಗಬೇಕು.



ಬಹುರಾಷ್ಟ್ರೀಯ ಕಂಪೆನಿಗಳು ಕೊಡುವ ಎಂಜಲು ಕಾಸಿಗೆ ಕೈಯೊಡ್ಡಿದ ಯಡ್ಡಿಯಂತಹ ಭ್ರಷ್ಟ ರಾಜಕಾರಣಿಗಳು ಹೈಬ್ರಿಡ್ ಬೀಜ, ಗೊಬ್ಬರ ಕ್ರಿಮಿನಾಶಕ ಬಳಸಿ ಅಬ್ಬರದ ಬೆಳೆ ತೆಗೆಯಬಹುದೆಂಬ ಭ್ರಮೆಯನ್ನು ರೈತರಿಗೆ ಹುಟ್ಟುಹಾಕಿದ್ದಾರೆ. ಹೈಬ್ರಿಡ್ ಬೀಜ, ರಸಗೊಬ್ಬರ, ಕ್ರಿಮಿನಾಶಕಗಳಿಗೆ ಸರ್ಕಾರದಿಂದ ಸಬ್ಸಿಡಿ ನೀಡುವ ಯೋಜನೆ ಜಾರಿಗೆ ತಂದು ರೈತರು ಇವುಗಳನ್ನು ಕೊಳ್ಳುವಂತೆ ಪ್ರಚೋದಿಸಿದ್ದಾರೆ.

ರೈತರ ಉದ್ಧಾರಕ್ಕಾಗಿ ಹೈಬ್ರಿಡ್ ಬೀಜ, ರಾಸಾಯನಿಕ ಗೊಬ್ಬರ ಕಂಡುಹಿಡಿದಿದ್ದಲ್ಲವೆಂಬ ಸತ್ಯವನ್ನ ನಮ್ಮ ರೈತರು ಅರಿಯಬೇಕು. ಏರುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸಂಪ್ರದಾಯ ಕೃಷಿ ಪದ್ಧತಿಯಿಂದ ಆಹಾರ ಉತ್ಪಾದನೆ ಸಾಧ್ಯವಾಗದಿದ್ದಾಗ ಭೂಮಿಗೆ ವಿಷ ಉಣಿಸುವಂಥ ಈ ಹೈಬ್ರಿಡ್ ಬೀಜ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ ಬಳಕೆ ಮಾಡುವಂಥ ಕೃಷಿ ಪದ್ಧತಿಯನ್ನು ವಿಜ್ಞಾನಿಗಳು ಕಂಡುಹಿಡಿದಿದ್ದಾರೆಂಬ ಸತ್ಯಸಂಗತಿ ನಮ್ಮ ರೈತರಿಗೆ ತಿಳಿದು ಸಂಪ್ರದಾಯ ಕೃಷಿ ಪದ್ಧತಿಗೆ ಮರಳಿದರೆ ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿಯೇ ಉದ್ಭವವಾಗುವುದಿಲ್ಲ.


-ಎಂ. ಯೋಗೀಶ್ ಉತ್ತಯ್ಯ, ಕಡೂರು.

ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಬಿ.ಎಸ್. ಯಡಿಯೂರಪ್ಪ ಅವರ ಸರ್ಕಾರದ ಮೊದಲ ಬಲಿ ರೈತನೇ ಆಗಿದ್ದಾನೆ ಎನ್ನುವುದು ಒಂದು ದೊಡ್ಡ ದುರಂತ. ರಾಜ್ಯದಲ್ಲಿ ರಸಗೊಬ್ಬರದ ಅಭಾವ ರೈತರ ಆಕ್ರೋಶಕ್ಕೆ ಕಾರಣವಾಗಿದೆ. ರೈತರು ಚಳವಳಿ ನಡೆಸುತ್ತಿದ್ದಾರೆ. ಪೊಲೀಸರು ರೈತರನ್ನು ಕೊಂದದ್ದು ಖಂಡನೀಯ. ಇದು ಬರ್ಬರ ಹಾಗೂ ಅನಾಗರಿಕ ನಡವಳಿಕೆ. ಪೊಲೀಸರು ಗುಂಡು ಹಾರಿಸುವಂತಹ ಪರಿಸ್ಥಿತಿ ಅಲ್ಲಿರಲಿಲ್ಲ, ಅನಗತ್ಯವಾಗಿ ಗುಂಡು ಹಾರಿಸಲಾಗಿದೆ. ರಸಗೊಬ್ಬರ ಸಮಸ್ಯೆಯನ್ನು ಗುಂಡಿನ ಮೂಲಕ ಪರಿಹರಿಸಬೇಕೆಂದು ಸರ್ಕಾರ ತಿಳಿದಿದ್ದರೆ ಅದು ದೊಡ್ಡ ತಪ್ಪು.

ರಸಗೊಬ್ಬರದ ಅಭಾವ ಇದೆ ಎನ್ನುವುದರಲ್ಲಿ ಅನುಮಾನವಿಲ್ಲ. ಈ ಪರಿಸ್ಥಿತಿಯನ್ನು ಬಳಸಿಕೊಂಡು ವ್ಯಾಪಾರಸ್ಥರು ರಸಗೊಬ್ಬರ ಕಳ್ಳ ದಾಸ್ತಾನು ಮಾಡಿರುವುದು ಎಲ್ಲರಿಗೂ ಗೊತ್ತಿದೆ. ಆದ್ದರಿಂದ ರೈತರ ಪ್ರತಿಭಟನೆಗೆ ಅರ್ಥವಿದೆ. ಈ ಪರಿಸ್ಥಿತಿಗೆ ಕೇಂದ್ರ-ರಾಜ್ಯ ಸರ್ಕಾರಗಳು ಒಬ್ಬರಮೇಲೊಬ್ಬರು ಕೆಸರು ಚೆಲ್ಲುವುದು ಸರಿಯಲ್ಲ. ರಸಗೊಬ್ಬರ ಅಗತ್ಯಕ್ಕೆ ತಕ್ಕಂತೆ ದಾಸ್ತಾನು ಮಾಡಿ, ಜಿಲ್ಲೆಗಳಿಗೆ ರವಾನಿಸಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ.

-ಡಿ.ಎಲ್. ಶ್ವೇತಾ, ಎಲ್‌ಐಸಿ ಹರಪನಹಳ್ಳಿ

# ಪುನೀತ್ ಹಾಡು ಪಾಡು




ಡಾ. ರಾಜ್‌ಕುಮಾರ್ ಅವರ ಕೊನೆಯ ಪುತ್ರ ಪುನೀತ್ ರಾಜ್‌ಕುಮಾರ್ ಅಪ್ಪನ ಹಾದಿಯಲ್ಲಿ ಸಾಗುತ್ತಿದ್ದಾರೆ.

ಸದ್ಯದಲ್ಲೇ ಆರಂಭವಾಗಲಿರುವ 'ಪ್ರೀತಿ ಹಂಗಾಮ' ಎಂಬ ಚಿತ್ರಕ್ಕೆ ಪುನೀತ್ ಹಾಡೊಂದನ್ನು ಹಾಡಲಿದ್ದಾರೆ. ಈ ಹಿಂದೆ ಪುನೀತ್ ತಾನು ನಟಿಸಿದ್ದ ಚಿತ್ರಗಳಿಗೆ ಹಾಡಿದ್ದರು. ಆ ನಂತರ ತನ್ನ ಸಹೋದರ ಶಿವರಾಜ್‌ಕುಮಾರ್ ನಟಿಸಿದ 'ಸಂತ' ಚಿತ್ರದಲ್ಲೂ ಒಂದು ಹಾಡಿಗೆ ದನಿ ನೀಡಿದ್ದರು. ಆದರೆ ಸಂಪೂರ್ಣವಾಗಿ ಹೊಸಬರೇ ನಟಿಸುತ್ತಿರುವ ಮತ್ತು ತಮ್ಮ ಕುಟುಂಬ ಯಾವುದೇ ರೀತಿಯಲ್ಲಿ ಸಹಭಾಗಿತ್ವ ಹೊಂದಿರದ ಚಿತ್ರಕ್ಕೆ ಪುನೀತ್ ಹಾಡುತ್ತಿರುವುದು ಇದೇ ಮೊದಲು.

'ಪ್ರೀತಿ ಹಂಗಾಮಾ' ಚಿತ್ರವನ್ನು ನಿರ್ಮಿಸಿ ನಿರ್ದೇಶಿಸುತ್ತಿರುವುದು ವಿಶಾಲ್‌ರಾಜ್ ಎಂಬ ಹೊಸ ಹುಡುಗ. ಶುಭಾ ಪೂಂಜಾ ಈ ಚಿತ್ರದ ನಾಯಕಿ. ಹೀಗೆ ಹೊಸಬರಿಗೆ ಧ್ವನಿಯಾಗುತ್ತಿರುವ ಪುನೀತ್ ಹೆಜ್ಜೆ ಸಹಜವಾಗಿಯೇ ರಾಜ್‌ಅವರನ್ನು ನೆನಪಿಸುತ್ತದೆ....

# ಅರ್ಧ ವರ್ಷದ ಸ್ಟಾಕ್ ಚೆಕ್ಕಿಂಗ್



2008ರ ಮೊದಲ ಆರು ತಿಂಗಳು ಕಳೆದಿದ್ದು ಗಾಂಧಿನಗರದಲ್ಲಿ ಇದೀಗ ಒಂದು ರೀತಿಯ 'ಸ್ಟಾಕ್ ಚೆಕ್ಕಿಂಗ್' ನಡೆದಿದೆ. ಅದರ ಹಲವು ಮುಖ್ಯಾಂಶಗಳು ಹೀಗಿವೆ:

* ಗಣೇಶನ ಪಾಪ್ಯುಲಾರಿಟಿ ಕಡಿಮೆಯಾಗಿ ದರ್ಶನ್ ನಿಧಾನವಾಗಿ ಆ ಜಾಗವನ್ನು ಆಕ್ರಮಿಸಿದ್ದಾರೆ.



* ಈ ಆರು ತಿಂಗಳಲ್ಲಿ ಐವತ್ತಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆಯಾಗಿದ್ದರೂ ಅವುಗಳಲ್ಲಿ ಗೆದ್ದಿದ್ದು ಕೇವಲ ಎಂಟು ಚಿತ್ರಗಳು.



* ಜಯಭೇರಿ ಬಾರಿಸಿದ ಆ ಎಂಟು ಚಿತ್ರಗಳೆಂದರೆ: ಗಜ, ಗಾಳಿಪಟ, ಮಿ. ಗರಗಸ, ಬಿಂದಾಸ್, ನಂದ ಲವ್ ನಂದಿತ, ಅರಮನೆ, ಇಂದ್ರ ಮತ್ತು ಮುಸ್ಸಂಜೆ ಮಾತು.



* ಈ ಎಂಟು ಚಿತ್ರಗಳ ನಿರ್ಮಾಣಕ್ಕೆ ಸುಮಾರು ಇಪ್ಪತ್ತೈದು ಕೋಟಿ ವೆಚ್ಚವಾಗಿದ್ದರೆ, ಅವುಗಳು ಒಟ್ಟಾಗಿ ಗಳಿಸಿರುವುದು ಸುಮಾರು ಅರವತ್ತು ಕೋಟಿ.

* ಹಾಗೆಯೇ ಇನ್ನುಳಿದ ಚಿತ್ರಗಳಿಗೆ ಒಟ್ಟಾರೆ ಐವತ್ತು ಕೋಟಿ ವೆಚ್ಚವಾಗಿ ಅದೆಲ್ಲ ಈಗ ನೀರು ಪಾಲಾಗಿದೆ.

* ಸಾರಾಂಶದಲ್ಲಿ ಈ ವರ್ಷದ ಮೊದಲ ಆರು ತಿಂಗಳಲ್ಲಿ ಕನ್ನಡ ಚಿತ್ರರಂಗ 'ನೋ ಪ್ರಾಫಿಟ್, ನೋ ಲಾಸ್' ಕಂಡಿದೆ.

ಈ ಆರು ತಿಂಗಳಲ್ಲಿ ಕಂಡುಬಂದಿರುವ ಒಂದೇ ಒಂದು ಆಶಾದಾಯಕ ಬೆಳವಣಿಗೆ ಯಾವುದೆಂದರೆ ಈ ಅವಧಿಯಲ್ಲಿ ಕನಿಷ್ಠ ಅರ್ಧ ಡಜನ್ ಅಪ್ಪಟ ಕನ್ನಡದ ನಟಿಯರು ಸಿಕ್ಕಿರುವುದು. 'ಮನಸುಗಳ ಮಾತು ಮಧುರ' ಚಿತ್ರ ಸೋತಿದ್ದರೂ ಅದರ ನಾಯಕಿ ಹರಿಪ್ರಿಯಾ ಈಗಾಗಲೇ ಜೂನಿಯರ್ ರಾಧಿಕಾ ಎಂಬ ಖ್ಯಾತಿ ಗಳಿಸಿದ್ದಾಳೆ. ತಮಿಳಿನಲ್ಲೂ ಒಂದೆರಡು ಚಾನ್ಸ್ ಗಿಟ್ಟಿಸಿದ್ದಾಳೆ. 'ಗಾಳಿಪಟ' ಚಿತ್ರದ ಭಾವನಾ ರಾವ್ ಸ್ವಲ್ಪ ಮಟ್ಟಿಗೆ ಮೆರೆಯುತ್ತಿದ್ದಾಳೆ. 'ನಂದ ಲವ್ ನಂದಿತಾ' ಚಿತ್ರದ ಶ್ವೇತಾ ಇನ್ನೂ ಹದಿನೆಂಟರ ಆಜುಬಾಜಿನಲ್ಲಿದ್ದರೂ ಈಗಾಗಲೇ ಪಡ್ಡೆ ಹುಡುಗರ ಜಿಂಕೆಮರಿಯಾಗಿದ್ದಾಳೆ. 'ನೀನೇ ನೀನೇ' ಚಿತ್ರದ ಐಶ್ವರ್ಯಾ ನಾಗ್ ತನ್ನ ಸೌಂದರ್ಯ ಮತ್ತು ನಟನೆಯಿಂದ ಮೊದಲ ಚಿತ್ರದಲ್ಲೇ ಎಲ್ಲರ ಗಮನ ಸೆಳೆದಿದ್ದಾಳೆ. ಬಹು ನಿರೀಕ್ಷೆಯ ಸೂರಿ ನಿರ್ದೇಶನದ 'ಇಂತಿ ನಿನ್ನ ಪ್ರೀತಿಯ' ಚಿತ್ರ ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದರೂ ಅದರ ನಾಯಕಿ ಮೇಕಪ್ ರಾಮಕೃಷ್ಣ ಅವರ ಮಗಳು ಸೋನು ಎಲ್ಲರ ಗಮನ ಸೆಳೆದಿದ್ದಾಳೆ.



ಹಾಗೆಯೇ ಕನ್ನಡಕ್ಕೆ ನಾಲ್ಕು ಯಂಗ್ ಅಂಡ್ ಎನರ್ಜಿಟಿಕ್ ನಿರ್ದೇಶಕರೂ ಈ ಆರು ತಿಂಗಳಲ್ಲಿ ದೊರಕಿದ್ದಾರೆ. 'ಗಜ' ಚಿತ್ರದ ಮಾದೇಶ, 'ಮುಸ್ಸಂಜೆಯ ಮಾತು' ಚಿತ್ರದ ಮಹೇಶ್, 'ಅರಮನೆ'ಯ ನಾಗಶೇಖರ್, 'ಸತ್ಯ ಇನ್ ಲವ್' ಚಿತ್ರದ ರಾಘವ್ ಲೋಕಿ ಇವರೆಲ್ಲರೂ ಚೊಚ್ಚಲ ಪಂದ್ಯದಲ್ಲೇ ಗಮನ ಸೆಳೆದಿದ್ದಾರೆ.

ಸಂಗೀತ ನಿರ್ದೇಶನದಲ್ಲೂ ಅಷ್ಟೇ. ಮನೋಮೂರ್ತಿಯ ಹವಾ ಮತ್ತು ಗುರುಕಿರಣ್‌ರ ಅಬ್ಬರದ ನಡುವೆಯೂ ಇಬ್ಬರು ಮೂವರು ಹೊಸ ಸಂಗೀತ ನಿರ್ದೇಶಕರು ಹಳಬರನ್ನು ಮೀರಿಸುವಷ್ಟು ಸುಶ್ರಾವ್ಯವಾದ ಸಂಗೀತ ನೀಡಿ ತಮ್ಮ ಎಂಟ್ರಿಯನ್ನು ತೋರಿಸಿದ್ದಾರೆ. 'ನಂದ ಲವ್ ನಂದಿತ' ಚಿತ್ರದ ಎಮಿಲ್, 'ಮುಸ್ಸಂಜೆಯ ಮಾತು' ಚಿತ್ರದ ಶ್ರೀಧರ್ ಮತ್ತು ಇನ್ನೂ ಬಿಡುಗಡೆಯಾಗಿರದ 'ಸೈಕೋ' ಚಿತ್ರದ ರಘು ದೀಕ್ಷಿತ್ ಇಲ್ಲಿ ಮುಖ್ಯರಾಗುತ್ತಾರೆ.

■ ಶೆಣೈ



# ಭಟ್ಟರಿಗೆ ದಯಾಳ್ ಮೇಲೆ ದಾಕ್ಷಿಣ್ಯ!



ಗಾಂಧಿನಗರದಲ್ಲಿ ಸೈಲೆಂಟಾಗಿ ಎರಡು ಚಿತ್ರಗಳು ಸೆಟ್ಟೇರಲು ಅಣಿಯಾಗುತ್ತಿವೆ.

ಒಂದೆಡೆ, 'ಹೊಂಗನಸು' ಎಂಬ ಚಿತ್ರದಿಂದ ಮಕಾಡೆ ಬಿದ್ದಿದ್ದ ರತ್ನಜಾ ಎಂಬ ನಿರ್ದೇಶಕ ಈಗ ಕೆ.ಸಿ.ಎನ್ ಸಂಸ್ಥೆಗೋಸ್ಕರ ಚಿತ್ರವೊಂದನ್ನು ಮಾಡಲು ಸಿದ್ಧತೆ ನಡೆಸಿದ್ದಾರೆ. ಇನ್ನೊಂದೆಡೆ ಯೋಗರಾಜ್ ಭಟ್ಟರ ಪರಮಾಪ್ತ ಸ್ನೇಹಿತ ದಯಾಳ್ ಕೂಡ 'ಸರ್ಕಸ್' ಮಾಡಲು ಸಿದ್ಧರಾಗಿದ್ದಾರೆ.

ಇಲ್ಲೊಂದು ವಿಶೇಷವೆಂದರೆ 'ಸರ್ಕಸ್' ಚಿತ್ರಕ್ಕೆ ದಯಾಳ್ ನಿರ್ದೇಶಕ ಮಾತ್ರ. ಆದರೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆಯುವ ಜವಾಬ್ದಾರಿಯನ್ನೆಲ್ಲ ಸ್ವತಃ ಯೋಗರಾಜ್ ಭಟ್ಟರೇ ಹೆಗಲಿಗೇರಿಸಿಕೊಂಡಿದ್ದಾರಂತೆ. 'ನಂದ ಲವ್ ನಂದಿತ' ಚಿತ್ರದ ಯಶಸ್ವಿ ಸಂಗೀತ ನಿರ್ದೇಶಕ ಎಮಿಲ್ ಸಾರಥ್ಯದಲ್ಲಿ ಹಾಡುಗಳ ಕಂಪೋಸಿಂಗ್ ಕೂಡಾ ಮುಗಿದಿದೆ.



'ಗಾಳಿಪಟ' ಚಿತ್ರಕ್ಕೆ ಕಾರ್ಯಕಾರಿ ನಿರ್ಮಾಪಕನಾಗಿದ್ದ ದಯಾಳ್ ಅದರ ನಿರ್ದೇಶಕ ಭಟ್ಟರಿಗೆ ಒಂದು ಕೋಟಿಯ ದೊಡ್ಡ ಮೊತ್ತದ ಸಂಭಾವನೆಯನ್ನು ಕೊಡಿಸಿದ್ದರು. ಆ ಕಾರಣಕ್ಕೆ ಭಟ್ಟರು ಈಗ ದಯಾಳ್‌ಗೆ ಇಷ್ಟೆಲ್ಲಾ ಸಹಕರಿಸುತ್ತಿದ್ದಾರಂತೆ.

'ಋಣಮುಕ್ತಿ ಎಂದರೆ ಇದೇನಾ ಭಟ್ರೇ....?

# ಥೇಂಬರ್‌ನಲ್ಲಿ 'ಜಯ'ಮಾಲಿ



ನಿರೀಕ್ಷೆಯಂತೆ ಕರ್ನಾಟಕ ಚಲನಚಿತ್ರ ವಾಣಿಜ್ಯಮಂಡಳಿಯ ಚುನಾವಣೆಯಲ್ಲಿ ಡಾ. ಜಯಮಾಲಾ ಭಾರೀ ಅಂತರದಿಂದ ತಮ್ಮ ಪ್ರತಿಸ್ಪರ್ಧಿ ಭಾ.ಮಾ. ಹರೀಶ್ ಅವರನ್ನು ಪರಾಭವಗೊಳಿಸಿ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.

ವಾಣಿಜ್ಯಮಂಡಳಿಯ ಇತಿಹಾಸದಲ್ಲಿ ಮಹಿಳೆಯೊಬ್ಬಳು ಅಧ್ಯಕ್ಷೆಯಾಗುತ್ತಿರುವುದು ಇದೇ ಮೊದಲ ಬಾರಿ. ಕನ್ನಡ ಚಿತ್ರರಂಗ ಪುರುಷಪ್ರಧಾನ ಎಂಬ ಅಪಸ್ವರ ಇರುವ ಇಂದಿನ ಸಂದರ್ಭದಲ್ಲಿ ಹಂಚಿಕೆದಾರರು, ಥಿಯೇಟರ್ ಮಾಲೀಕರು, ನಿರ್ಮಾಪಕರು ಇವರೆಲ್ಲಾ ಸೇರಿ ಜಯಮಾಲಾರನ್ನು ಆಯ್ಕೆ ಮಾಡಿರುವುದು ಒಂದು ವಿಶೇಷವೇ ಸರಿ.

ಈ ಹಿಂದೆ ಜಯಮಾಲಾರವರು ಛೇಂಬರ್‌ನ ಉಪಾಧ್ಯಕ್ಷೆ, ಕಾರ್ಯದರ್ಶಿ, ಕೋಶಾಧಿಕಾರಿ.... ಹೀಗೆ ಹಲವಾರು ಸ್ಥಾನಗಳಲ್ಲಿ ಕೆಲಸ ಮಾಡಿದ ಅನುಭವವನ್ನು ಹೊಂದಿದ್ದಾರೆ. ಮತ್ತು ಆ ಮೂಲಕ ತಾನು ಬರೀ ಥಳಕು ಬಳುಕಿನ ಗೊಂಬೆ ಅಲ್ಲ, ತಾನೋರ್ವ ಸಮರ್ಥ ಆಡಳಿತಗಾರ್ತಿ ಎಂಬುದನ್ನು ತೋರಿಸಿದ್ದಾರೆ. ಹೀಗಾಗಿ ಜಯಮಾಲಾ ನಾಮಕಾವಸ್ತೆ ಅಧ್ಯಕ್ಷೆಯಾಗದೇ, ಆ ಸ್ಥಾನಕ್ಕೆ ಸಮರ್ಥವಾದ ನ್ಯಾಯವನ್ನು ದೊರಕಿಸಿಕೊಡುವ ಶಕ್ತಿ ಹೊಂದಿದ್ದಾರೆ ಎನ್ನಬಹುದು.

ಇನ್ನೊಂದು ವಿಶೇಷವೆಂದರೆ, ಸಾಧಾರಣವಾಗಿ ಛೇಂಬರ್‌ನ ಅಧ್ಯಕ್ಷರು ಕಮರ್ಷಿಯಲ್ ಚಿತ್ರಗಳ ವಕ್ತಾರರಾಗುತ್ತಿದ್ದರು. ಹೀಗಾಗಿ ಇವರ ರಾಜ್ಯಭಾರದಲ್ಲಿ ಕಲಾತ್ಮಕ ಚಿತ್ರಗಳ ನಿರ್ದೇಶಕರು ಮತ್ತು ನಿರ್ಮಾಪಕರನ್ನು ಅಸ್ಪೃಶ್ಯ ಮನೋಭಾವದಿಂದ ನೋಡುತ್ತಿದ್ದರು. ಆದರೆ ಕಲಾತ್ಮಕ ಮತ್ತು ಕಮರ್ಷಿಯಲ್ ಎರಡೂ ವಲಯಗಳಿಗೆ ಸೇರುವ ಜಯಮಾಲಾರ ಆಯ್ಕೆಯಿಂದಾಗಿ ಕಲಾತ್ಮಕ ಸಿನಿಮಾಗಳ ಜನ ಹೆಚ್ಚು ಸಂತೋಷಪಡಬಹುದು.

ಜಯಮಾಲಾರ ಅಧಿಕಾರಾವಧಿಯಲ್ಲಿ ಛೇಂಬರ್ ಹೆಚ್ಚು ಅರ್ಥಪೂರ್ಣವಾಗಿ ಕಾರ್ಯ ನಿರ್ವಹಿಸುವಂತಾಗಲಿ ಎಂಬುದೇ ಪತ್ರಿಕೆಯ ಹಾರೈಕೆ.

# 'ವೀರಮದಕರಿ' ಸುದೀಪ್



ಸುದೀಪ್ ಈಗ ವೀರಮದಕರಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ಆದರೆ ಚಿತ್ರದ ಟೈಟಲ್ ನೋಡಿ ಇದು ಐತಿಹಾಸಿಕ ಚಿತ್ರವೆಂದು ನೀವು ಭಾವಿಸಬೇಡಿ. ಈ ಹಿಂದೆ 'ವೀರಮದಕರಿ ನಾಯಕ' ಎಂಬ ಚಿತ್ರದಲ್ಲಿ ದರ್ಶನ್ ನಟಿಸುವುದಾಗಿ ಅನೌನ್ಸ್ ಆಗಿತ್ತು. ಆದರೆ ಆಗಷ್ಟೇ ಬಿಡುಗಡೆಯಾದ ಶಿವರಾಜ್‌ಕುಮಾರ್ ಅಭಿನಯದ 'ಕುಮಾರರಾಮ' ಬಾಕ್ಸಾಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿದ್ದರಿಂದ ದರ್ಶನ್ ಮದಕರಿಗೆ ಗುಡ್‌ಬೈ ಹೇಳಿದ್ದರು.

ಈಗ 'ವಿಕ್ರಮಾರ್ಕುಡು' ಎಂಬ ತೆಲುಗಿನ ಸಿನಿಮಾದ ರೀಮೇಕ್ ಆದ 'ವೀರಮದಕರಿ'ಯಾಗಿ ಸುದೀಪ್ ಬರುತ್ತಿದ್ದಾರೆ. ಇದರರ್ಥ ಇದರಲ್ಲಿ ಸುದೀಪ್ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಬಹುಶಃ ಇದಕ್ಕೆ ಸ್ಫೂರ್ತಿ ಸುದೀಪ್ 'ಗೆಳೆಯ' ದರ್ಶನ್ ಮೊನ್ನೆ ದ್ವಿಪಾತ್ರದಲ್ಲಿ ನಟಿಸಿದ 'ಇಂದ್ರ' ಗದ್ದಿದ್ದೇ ಇರಬಹುದು.

R B P LANKESH, Kannada Weekly Price Rs. 12/- 9-7-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4.



## ಖಾಲಿ ತಲೆಯ ಮಹರ್ಷಿ ಕಥೆ

ಜನಾರ್ಧನ ಮಹರ್ಷಿ ಎಂಬ ಆಂಧ್ರ ಪ್ರದೇಶದ 'ಏತ ನೀರಾವರಿ ತಜ್ಞ'ನ ತಲೆಯಲ್ಲಿರುವ ಕಥೆಗಳ ಸರಕು ತಿರುಪತಿ ವೆಂಕಟೇಶ್ವರನ ಆಣೆಗೂ ಕುಲ್ಲಂ ಕುಲ್ಲಾ 'ಖಾಲಿ ಇಯಿಂದಿ'!

ಮೊನ್ನೆ ತಾನೆ ಬಿಡುಗಡೆಯಾದ 'ಮೆರವಣಿಗೆ' ಚಿತ್ರವನ್ನು ನೋಡಿದ ಯಾರಿಗಾದರೂ ಹೀಗನ್ನಿಸದೇ ಇರಲಾರದು. ಮಹರ್ಷಿಗೆ ದೊಡ್ಡ ಮೊತ್ತದ ಕಾಸು ಕೊಟ್ಟು ಕತೆ ತಂದ ಒಂದೇ ಕಾರಣಕ್ಕಾಗಿ ನಿರ್ದೇಶಕ ಮಹೇಶ್ ಬಾಬು ಎಷ್ಟೇ ಸರ್ಕಸ್ ಮಾಡಿ, ಕತೆಗೆ ಏನೇ ತ್ಯಾಪೆ ಹಚ್ಚುವ ಕೆಲಸ ಮಾಡಿದರೂ ಸಿನಿಮಾ ಅಷ್ಟಕ್ಕಷ್ಟೇ ಎಂಬಂತಾಗಿದೆ. ಇತ್ತೀಚಿಗೆ ಮಹರ್ಷಿ ಕತೆ ಬರೆದ ಎಲ್ಲ ಸಿನಿಮಾಗಳೂ ಸಾಲುಸಾಲಾಗಿ ಪಲ್ಟಿ ಹೊಡೆದಿವೆ.

ಹಾಗೆ ನೋಡಿದರೆ ಈ ಮಹರ್ಷಿ ಯಾವ ಚಿತ್ರಕ್ಕೆ ತಾನೇ ಪರಿಪೂರ್ಣವಾದ ಹೊಸ ಕಥೆಯನ್ನು ಹೆಣೆದಿದ್ದಾನೆ ಎಂದು ನೋಡಿದರೆ ಅಚ್ಚರಿಯಾಗುತ್ತದೆ. ತನ್ನಲ್ಲಿರುವ ಎಂಟು ಹತ್ತು ಕಥೆಗಳನ್ನೇ ತಿರುಗುಮುರುಗು ಮಾಡಿ, ಅದನ್ನೇ ಮಹಾನ್ ಕಥೆ ಎಂಬಂತೆ ಬಿಂಬಿಸಿ, ಕನ್ನಡ ಚಿತ್ರ ನಿರ್ಮಾಪಕರಿಂದ ಹದಿನಾಲ್ಕೋ ಹದಿನೈದೋ ಲಕ್ಷವನ್ನು ಪೀಕಿ ಅವರಿಗೆ ಉಂಡೆ ನಾಮ ತಿಕ್ಕುವುದು ಈತನ ಕಸುಬು.

ಅದನ್ನರಿಯದ ರಾಕ್‌ಲೈನ್ ವೆಂಕಟೇಶ್ ಇತ್ತೀಚೆಗೆ "ಮಹರ್ಷಿಯವರು ಕಥೆ ಚೆನ್ನಾಗಿ ಬರೆಯದಿದ್ದರೂ ಅದನ್ನು ಚೆನ್ನಾಗಿ ಹೇಳುತ್ತಾರೆ. ಅದಕ್ಕೇ ನಾವು ಅವರ ಬಳಿ ಕಥೆಗಾಗಿ ಬೇಡಿ ನಿಲ್ಲುತ್ತೇವೆ" ಎಂದು ಹೇಳಿ ತಮ್ಮ ಪೆದ್ದುತನವನ್ನು ಪ್ರದರ್ಶಿಸಿದ್ದರು. ರಾಕ್‌ನಂಥ ದೊಡ್ಡ ದೊಡ್ಡ ನಿರ್ಮಾಪಕರೇ ಹೀಗೆ ಮಹರ್ಷಿ ಬಲೆಗೆ ಬಿದ್ದು ನರಳಾಡುತ್ತಾರೆಂದರೆ ಕನ್ನಡ ಚಿತ್ರೋದ್ಯಮ ಉದ್ಧಾರವಾಗುವುದೆಂದು?

## ಕೈಲಾಸದಲ್ಲಿ ಗಣೇಶ್

ಇದೇನಪ್ಪ ಕೈಲಾಸದಲ್ಲಿ ಶಿವನ ಬದಲಾಗಿ ಗಣೇಶ್ ಇದ್ದಾನಾ ಎಂದು ನೀವು ಆಶ್ಚರ್ಯಪಡಬೇಡಿ. ನಾವು ಹೇಳುತ್ತಿರುವುದು ಗೋಲ್ಡನ್ ಸ್ಟಾರ್ ಗಣೇಶ್ ಬಗ್ಗೆ ಹಾಗೂ ಬೆಂಗಳೂರಿನಲ್ಲಿರುವ ಕೈಲಾಶ್ ಎಂಬ ಮಿನಿ ಥಿಯೇಟರ್ ಬಗ್ಗೆ.

ಸದ್ಯಕ್ಕೆ ಓಡುತ್ತಿರುವ ಕುದುರೆಯಾಗಿರುವ ಗಣೇಶ್ ಅಭಿನಯದ 'ಅರಮನೆ' ಚಿತ್ರವನ್ನು ಕೈಲಾಸ್ ಎಂಬ ಮಿನಿ ಥಿಯೇಟರಿನಲ್ಲಿ ಪ್ರದರ್ಶನ ಮಾಡುತ್ತಿದ್ದಾರೆ. ಇದರ ನಿರ್ಮಾಪಕ ಕೊಬ್ಬರಿ ಮಂಜು ಹೇಗಾದರೂ ಮಾಡಿ ಈ ಚಿತ್ರವನ್ನು ನೂರು ದಿನ ಓಡಿಸಲೇ ಬೇಕು ಎಂದು ಹಠ ತೊಟ್ಟಂತೆ ಕಾಣಿಸುತ್ತಿದೆ. ಗಣೇಶ್ ಈ ಹಿಂದೆ ನಟಿಸಿದ ಎಲ್ಲ ಚಿತ್ರಗಳೂ ಕೆಂಪೇಗೌಡ ರಸ್ತೆಯ ಮುಖ್ಯ ಥಿಯೇಟರ್‌ಗಳಲ್ಲೇ ನೂರು ದಿನ ತುಂಬಿದ ಪ್ರದರ್ಶನವನ್ನು ಕಂಡಿದ್ದವು. ಮಿನಿ ಥಿಯೇಟರಿನಲ್ಲಿ ಗಣೇಶ್ ಚಿತ್ರ ಪ್ರದರ್ಶನಗೊಂಡ ಉದಾಹರಣೆಯೇ ಇಲ್ಲ. ಗಣೇಶ್ ಸ್ಟಾರ್ ವ್ಯಾಲ್ಯೂ ದೃಷ್ಟಿಯಿಂದ ನೋಡಿದರೆ ಇದೊಂದು ಕಪ್ಪುಚುಕ್ಕೆ ಎನ್ನದೇ ಬೇರೆ ದಾರಿಯೇ ಇಲ್ಲ.






## ಕನ್ನಡದಲ್ಲೂ ಬರಲಿದ್ದಾನೆ ಕುಚೇಲ

ಸ್ವಮೇಕ್ ಚಿತ್ರವಾದ 'ಆಕ್ಸಿಡೆಂಟ್'ಗೆ ಅಪಘಾತವಾದ ನಂತರ ಅದರ ನಿರ್ದೇಶಕ ಕಂ ನಯಕ ನಟ ರಮೇಶ್ ಅರವಿಂದ್ ಮತ್ತೆ ರೀಮೇಕ್ ಸಿದ್ಧಾಂತಕ್ಕೆ ಸೋತಿದ್ದಾರೆ. ಇತ್ತೀಚಿಗೆ ಮಲೆಯಾಳಂನಲ್ಲಿ ಸೂಪರ್ ಹಿಟ್ ಆಗಿದ್ದ 'ಕಥಾ ಪರಯುಂಬೋಲ್' ಎಂಬ ಚಿತ್ರವನ್ನು ಕನ್ನಡಕ್ಕೆ ತರಲು ಸಿದ್ಧತೆ ನಡೆಸಿದ್ದಾರೆ.

ಮಲೆಯಾಳಂನ ಮಮ್ಮುಟ್ಟಿ ನಟಿಸಿದ್ದ ಮತ್ತು ಅಲ್ಲಿನ ಹಿರಿಯ ಕಲಾವಿದ ಶ್ರೀನಿವಾಸನ್‌ರವರೇ ಕಥೆ ಬರೆದು, ನಿರ್ಮಿಸಿ, ನಿರ್ದೇಶಿಸಿ, ನಟಿಸಿದ್ದ ಆ ಚಿತ್ರ ಎಷ್ಟು ದೊಡ್ಡ ಹಿಟ್ ಆಗಿದೆಯೆಂದರೆ ಅದು ಕಳೆದ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆಯಾಗಿದ್ದರೂ ಇವತ್ತಿಗೂ ಕೇರಳದ ಹಲವಾರು ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ.

ಆದರ ಇಂತಹ ಅದ್ಭುತ ಯಶಸ್ಸನ್ನು ನೋಡಿಯೇ ಅದನ್ನು ಹಿಂದಿಯಲ್ಲಿ 'ಬಿಲ್ಲೂ ಬಾರ್ಬರ್' ಎಂದು ರೀಮೇಕ್ ಮಾಡಲು ಮೂಲತಃ ಮಲೆಯಾಳಿಯಾಗಿರುವ ಹಿಂದಿ ಚಿತ್ರ ನಿರ್ದೇಶಕ ಪ್ರಿಯದರ್ಶನ್ ಹೊರಟಿದ್ದಾರೆ. ಅದರ ಹಿಂದಿ ಅವತರಣಿಕೆಯಲ್ಲಿ ಬಾಲಿವುಡ್ ಬಾದಷಾ ಶಾರುಖ್‌ಖಾನ್ ನಟಿಸುತ್ತಿದ್ದಾನೆ

ದೂರದ ಬಾಲಿವುಡ್‌ನವರೇ ಇದನ್ನು ರೀಮೇಕ್ ಮಾಡುತ್ತಿರಬೇಕಾದರೆ ಹತ್ತಿರದ ತಮಿಳರು ಸುಮ್ಮನಿರುತ್ತಾರೆಯೇ? ಅವರಾಗಲೇ ಎಷ್ಟು ಸ್ಪೀಡಾಗಿ ಕೆಲಸ ಮಾಡಿದ್ದಾರೆಂದರೆ, 'ಕುಸೇಲನ್' ಎಂಬ ತಮಿಳು ರೀಮೇಕ್‌ನಲ್ಲಿ ಸ್ವತಃ ರಜನೀಕಾಂತ್ ನಟಿಸಿದ್ದಾರಲ್ಲದೆ ಅದು ಸದ್ಯದಲ್ಲೇ ಬಿಡುಗಡೆಗೊಳ್ಳಲಿದೆ. ಮಾತ್ರವಲ್ಲ ಅದನ್ನು 'ಕಥಾನಯಕುಡು' ಎಂದು ತೆಲುಗಿಗೂ ಡಬ್ ಮಾಡಿ ಬಿಡುಗಡೆ ಮಾಡುವ ಹಕ್ಕನ್ನೂ ಅವರು ಪಡೆದಿದ್ದಾರೆ.



ಎಂದಿನಂತೆ ಸದಾ ಸ್ವಲ್ಪ ಸ್ಲೋ ಇರುವ ಕನ್ನಡಿಗರು ಮಾತ್ರ ಈಗ ಎಚ್ಚೆತ್ತುಕೊಂಡು ಅದನ್ನು ಕನ್ನಡದಲ್ಲಿ ರೀಮೇಕ್ ಮಾಡಲು ಈಗ ಸಿದ್ಧತೆ ನಡೆಸುತ್ತಿದ್ದಾರೆ. ಮಮ್ಮುಟ್ಟಿ/ ರಜನೀಕಾಂತ್/ ಶಾರುಖ್ ಖಾನ್ ನಟಿಸಿರುವ ಪಾತ್ರಕ್ಕೆ ಇಲ್ಲಿ ಗಣೇಶ್ ಆಯ್ಕೆಯಾಗಿದ್ದಾರೆ. ಹಾಗೆಯೇ ಶ್ರೀನಿವಾಸನ್/ ಪಶುಪತಿ/ ಇರ್ಫಾನ್ ಖಾನ್‌ರಂತಹ ಪ್ರತಿಭಾವಂತರು ಮಾಡಿರುವ ಪಾತ್ರವನ್ನು ಸ್ವತಃ ರಮೇಶ್ ನಿರ್ವಹಿಸಲಿದ್ದಾರೆ. ನಿರೀಕ್ಷೆಯಂತೆ ಈ ಚಿತ್ರಕ್ಕೆ ಕನ್ನಡದಲ್ಲಿ 'ಕುಚೇಲ' ಎಂದು ಹೆಸರಿಡಲಾಗುತ್ತದೆ.

ಈ ಮೊದಲೇ ಈ ಚಿತ್ರದ ಬಗ್ಗೆ 'ಲಂಕೇಶ್' ಬರೆದಿದ್ದಾಗ ಅದು ಕೃಷ್ಣ ಮತ್ತು ಕುಚೇಲನ ಸ್ನೇಹವನ್ನು ಆಧರಿಸಿರುವ ಆದರೆ ಆಧುನಿಕ ಸಂದರ್ಭಕ್ಕೆ ಅಳವಡಿಸಲಾಗಿರುವ ಕತೆ ಎಂದು ಹೇಳಿದ್ದೆವು. ಇಲ್ಲಿ ಕೃಷ್ಣ ಸಿನಿಮಾ ನಟನಾಗಿದ್ದರೆ, ಆತನ ಬಾಲ್ಯಸ್ನೇಹಿತ ಕುಚೇಲ ಕ್ಷೌರದವನಾಗಿರುತ್ತಾನೆ. ವಾಸ್ತವವಾಗಿ ಈ ಚಿತ್ರದಲ್ಲಿ ಕೃಷ್ಣನ ಪಾತ್ರಕ್ಕಿಂತಲೂ ಕುಚೇಲನ ಪಾತ್ರವೇ ಮುಖ್ಯವಾಗಿರುತ್ತದೆ. ಅಂದರೆ ನಾಯಕ ನಟ ಗಣೇಶ್ ಆದರೂ ನಿಜವಾದ 'ನಾಯಕ' ರಮೇಶ್ ಆಗಿರುತ್ತಾರೆ. ಅಂದಹಾಗೆ ಕನ್ನಡದ 'ಕುಚೇಲ' ಚಿತ್ರದಲ್ಲಿ ಒಟ್ಟು ನಾಲ್ಕು ನಾಯಕಿಯರಿದ್ದು ರಮ್ಯಾ ಮತ್ತು ಜೆನ್ನಿಫರ್ ಈಗಾಗಲೇ ಆಯ್ಕೆಯಾಗಿದ್ದಾರೆ. ಇನ್ನೂ ಇಬ್ಬರು ಮಸಾಲೆ ನಾಯಕಿಯರಿಗಾಗಿ ರಮೇಶ್ ತಲಾಶ್ ನಡೆಸುತ್ತಿದ್ದಾರೆ.

ಒಟ್ಟಾರೆ ಇದೊಂದು ಬಹುತಾರಾಗಣದ ಮತ್ತು ಭಾರೀ ಬಜೆಟ್‌ನ ಚಿತ್ರವಾಗಲಿದ್ದು ರಮೇಶ್ ಪಾಲಿಗೆ ನಿರ್ದೇಶಕನಾಗಿಯೂ, ನಟನಾಗಿಯೂ ಇದೊಂದು ಅಗ್ನಿಪರೀಕ್ಷೆಯೇ ಸರಿ. ಅವರು ಗೆಲ್ಲಲಿ ಎಂದು ಆಶಿಸೋಣ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th M...